**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार , 07 जून, 2023 | ज्येष्ट 19, 1945 (शक) | खंड.53 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 53 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.53 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE EMIGRATION ACT, 1983 (NO.31 OF 1983) (2) THE FOOD SAFETY AND STANDARDS ACT, 2006 (NO.34 OF 2006) (3) THE PAYMENT AND SETTLEMENT SYSTEMS ACT, 2007 (NO.51 OF 2007) (4) THE NATIONAL JUTE BOARD ACT, 2008 (NO.12 OF 2009) (5) THE NATIONAL GREEN TRIBUNAL ACT, 2010 (NO.19 OF 2010) (6) THE RIGHT TO FAIR COMPENSATION AND TRANSPARENCY IN LAND ACQUISITION, REHABILITATION AND RESETTLEMENT ACT, 2013 (NO.30 OF 2013) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

# ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಹಕ್ಕು ಅಧಿನಿಯಮ, 2013

**(2013ರ ಸಂಖ್ಯೆ 30)**

[26ನೇ ಸೆಪ್ಟೆಂಬರ್, 2013.]

ಕೈಗಾರಿಕೀಕರಣ, ಅವಶ್ಯಕ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಮತ್ತು ನಗರೀಕರಣಕ್ಕೆ ಅತ್ಯಗತ್ಯವಾಗಿ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ, ಪ್ರಯೋಜನಕರವಾದಂಥ ಸಹಭಾಗಿತ್ವಕ್ಕೆ ಅವಕಾಶ ಇರುವಂಥ, ಭೂಮಾಲೀಕರಿಗೆ ಮತ್ತು ಇತರ ಬಾಧಿತ ಕುಟುಂಬಗಳಿಗೆ ತುಂಬಾ ಕಷ್ಟ, ತೊಂದರೆಗಳು ಆಗುವುದಕ್ಕೆ ಆಸ್ಪದ ಕೊಡದಂಥ ಸಶಕ್ತ, ಪಾರದರ್ಶಕ ವಿಧಾನವನ್ನು ಸಂವಿಧಾನದ ಮೇರೆಗೆ ಸ್ಥಾಪಿತವಾಗಿರುವ ಸ್ವಯಮಾಡಳಿತ ಸಂಸ್ಥೆಗಳೊಂದಿಗೆ ಮತ್ತು ಗ್ರಾಮ ಸಭಾಗಳೊಂದಿಗೆ ಸಮಾಲೋಚನೆ ಮಾಡಿ, ರೂಪಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದೋ ಅಥವಾ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಅಥವಾ ಅಂಥ ಭೂಸ್ವಾಧೀನದಿಂದ ಯಾರು ತೊಂದರೆಗೆ ಒಳಗಾಗಿದ್ದಾರೋ ಅಂಥ ಬಾಧಿತ ಕುಟುಂಬಗಳಿಗೆ ನ್ಯಾಯೋಚಿತವಾದ ಹಾಗೂ ಸಮಂಜಸವಾದ ಪರಿಹಾರ ನೀಡುವುದಕ್ಕಾಗಿ ಮತ್ತು ಬಾಧಿತ ವ್ಯಕ್ತಿಗಳಿಗೆ ಪುನರ್‌ವಸತಿ ಅಥವಾ ಪುನರ್‌ವ್ಯವಸ್ಥೆ ಕಲ್ಪಿಸುವುದಕ್ಕಾಗಿ ಸಮರ್ಪಕವಾದ ಉಪಬಂಧಗಳನ್ನು ಕಲ್ಪಿಸಲು ಮತ್ತು ಕಡ್ಡಾಯ ಭೂಸ್ವಾಧೀನದ ಒಟ್ಟಾರೆ ಪರಿಣಾಮವು ಭೂಸ್ವಾಧೀನದ ನಂತರ ಬಾಧಿತ ವ್ಯಕ್ತಿಗಳು ಅಭಿವೃದ್ಧಿ ಕಾರ್ಯದಲ್ಲಿ ಪಾಲುದಾರರಾಗಿ ತಮ್ಮ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ತಂದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವಂಥದಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು, ಭಾರತ ಗಣರಾಜ್ಯದ ಅರವತ್ನಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್ ವಸತಿ ಮತ್ತು ಪುನರ್‌ವ್ಯವಸ್ಥೆ ಹಕ್ಕು ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ವಿಧೇಯಕ 2013ಕ್ಕೆ ಯಾವ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ದೊರೆಯುವುದೋ ಆ ದಿನಾಂಕದಿಂದ ಮೂರು ತಿಂಗಳ ಒಳಗಿನ ಯಾವುದಾದರೂ ಒಂದು ದಿನಾಂಕವನ್ನು ಈ ಅಧಿನಿಯಮವು ಜಾರಿಗೆ ಬರುವ ದಿನಾಂಕವೆಂದು ಗೊತ್ತುಪಡಿಸತಕ್ಕದ್ದು.

**2. ಅಧಿನಿಯಮದ ಅನ್ವಯ.–** (1) ಭೂಸ್ವಾಧೀನತೆಗೆ ಪರಿಹಾರ ನೀಡಿಕೆಗೆ, ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿರುವ ಉಪಬಂಧಗಳು ಸಮುಚಿತ ಸರ್ಕಾರವು, ಸಾರ್ವಜನಿಕ ವಲಯ ಉದ್ಯಮಗಳಿಗಾಗಿ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದೂ ಸೇರಿದಂತೆ ತನ್ನದೇ ಬಳಕೆಗಾಗಿ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ, ಭೂಮಿಯನ್ನು ಧಾರಣ ಮಾಡುವಾಗ ಮತ್ತು ಭೂಮಿಯ ನಿಯಂತ್ರಣ ಹೊಂದುವಾಗ ಅನ್ವಯಿಸತಕ್ಕದ್ದು ಮತ್ತು ಭೂಸ್ವಾಧೀನತೆಯ ಉದ್ದೇಶಗಳಲ್ಲಿ ಈ ಮುಂದಿನ ಉದ್ದೇಶಗಳು ಎಂದರೆ.–

(ಎ) ಕೇಂದ್ರೀಯ ಪ್ಯಾರಾ ಮಿಲಿಟರಿ ಪಡೆಗಳು ಅಥವಾ ಭಾರತದ ರಾಷ್ಟ್ರೀಯ ಭದ್ರತೆ; ಅಥವಾ ಭಾರತದ ರಕ್ಷಣೆಗೆ ಅಥವಾ ರಾಜ್ಯ ಪೊಲೀಸ್, ಜನರ ಸುರಕ್ಷತೆಗೆ ಅತಿಮುಖ್ಯವಾದ ಯಾವುದೇ ಕಾರ್ಯವೂ ಸೇರಿದಂತೆ ಒಕ್ಕೂಟದ ನೌಕಾಪಡೆಯನ್ನು, ಸೇನಾ ಪಡೆಯನ್ನು, ವಾಯು ಪಡೆಯನ್ನು ಮತ್ತು ಸಶಸ್ತ್ರ ಪಡೆಗಳನ್ನು ಅನುಕೂಲಕರ ಮತ್ತು ಆಯಕಟ್ಟಿನ ನೆಲೆಗಳಲ್ಲಿ ನೆಲೆಗೊಳಿಸುವ ಉದ್ದೇಶಗಳು; ಅಥವಾ

(ಬಿ) ಈ ಮುಂದೆ ಹೇಳಿರುವವುಗಳನ್ನು ಒಳಗೊಂಡಿರುವ ಮೂಲ ಸೌಕರ್ಯ ಪ್ರಾಜೆಕ್ಟ್‌ಗಳು ಎಂದರೆ:–

(i) ಖಾಸಗಿ ಆಸ್ಪತ್ರೆಗಳನ್ನು, ಖಾಸಗಿ ಶೈಕ್ಷಣಿಕ ಸಂಸ್ಥೆಗಳನ್ನು ಮತ್ತು ಖಾಸಗಿ ಹೋಟೆಲ್‌ಗಳನ್ನು ಹೊರತುಪಡಿಸಿ ಹೊರಡಿಸಿರುವ, ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ (ಮೂಲಸೌಕರ್ಯ ಶಾಖೆ) ಅಧಿಸೂಚನೆ ಸಂಖ್ಯೆ.13/6/2009/ಐಎನ್‌ಎಫ್, ದಿನಾಂಕ 27–03–2012ರಲ್ಲಿ ಪಟ್ಟಿ ಮಾಡಿರುವ ಎಲ್ಲ ಚಟುವಟಿಕೆಗಳು ಅಥವಾ ಬಾಬುಗಳು;

(ii) ಸಮುಚಿತ ಸರ್ಕಾರವು ಅಥವಾ ರೈತರ ಸಹಕಾರ ಸಂಘಗಳು ಅಥವಾ ಶಾಸನದ ಮೂಲಕ ಸ್ಥಾಪಿತವಾದ ಸಂಸ್ಥೆಯು ಸ್ಥಾಪಿಸಿದ ಅಥವಾ ಅದರ ಒಡೆತನದಲ್ಲಿರುವ, ಕೃಷಿ ಸಂಸ್ಕರಣೆ, ಕೃಷಿಗೆ ಪರಿಕರಗಳ ಸರಬರಾಜು, ಉಗ್ರಾಣ, ಶೈತ್ಯಾಗಾರ ಸೌಲಭ್ಯಗಳು, ಕೃಷಿಗೆ ಮತ್ತು ಹೈನುಗಾರಿಕೆ, ಮೀನುಗಾರಿಕೆ ಮತ್ತು ಮಾಂಸ ಸಂಸ್ಕರಣೆ ಮುಂತಾದ ಸಂಬಂಧಿತ ಚಟುವಟಿಕೆಗಳಿಗೆ ಕ್ರಯ ವಿಕ್ರಯ ಮೂಲಸೌಕರ್ಯಗಳನ್ನು ಒಳಗೊಂಡಿರುವ ಪ್ರಾಜೆಕ್ಟ್‌ಗಳು;

(iii) ಕೈಗಾರಿಕಾ ಪ್ರಧಾನ ವಲಯಗಳಿಗೆ ಅಥವಾ ಗಣಿಗಾರಿಕೆ ಚಟುವಟಿಕೆಗಳಿಗೆ ರಾಷ್ಟ್ರೀಯ ಹಣ ಹೂಡಿಕೆಗೆ ಮತ್ತು ರಾಷ್ಟ್ರೀಯ ತಯಾರಿಕಾ ನೀತಿಯಲ್ಲಿ ನಿರ್ದಿಷ್ಟಪಡಿಸಿರುವ ತಯಾರಿಕಾ ವಲಯಗಳಿಗೆ ಸಂಬಂಧಿಸಿದ ಪ್ರಾಜೆಕ್ಟ್;

(iv) ಜಲ ಸಂಗ್ರಹಣೆ ಮತ್ತು ಜಲ ಸಂರಕ್ಷಣೆ ನಿರ್ಮಾಣಗಳಿಗೆ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಪ್ರಾಜೆಕ್ಟ್;

(v) ಸರ್ಕಾರವು ನಡೆಸುತ್ತಿರುವ ಸರ್ಕಾರಿ, ಅನುದಾನಿತ ಶೈಕ್ಷಣಿಕ ಮತ್ತು ಸಂಶೋಧನಾ ಯೋಜನೆಗಳಿಗೆ ಅಥವಾ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಾಜೆಕ್ಟ್;

(vi) ಕ್ರೀಡೆಗಳಿಗೆ, ಆರೋಗ್ಯ ರಕ್ಷಣೆಗೆ, ಪ್ರವಾಸೋದ್ಯಮಕ್ಕೆ, ಸಾರಿಗೆ ಸೌಕರ್ಯ ವ್ಯವಸ್ಥೆಗೆ ಅಥವಾ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪ್ರಾಜೆಕ್ಟ್;

(vii) ಯಾವ ಮೂಲಸೌಕರ್ಯದ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸುವ ಅಧಿಸೂಚನೆಯನ್ನು ಸಂಸತ್ತಿನಲ್ಲಿ ಮಂಡಿಸಿದ ನಂತರ ಅಧಿಸೂಚಿಸಬಹುದಾಗಿದೆಯೋ ಅಂಥ ಯಾವುದೇ ಮೂಲ ಸೌಕರ್ಯ;

(ಸಿ) ಪ್ರಾಜೆಕ್ಟ್‌ನಿಂದ ಬಾಧಿತರಾದ ಕುಟುಂಬಗಳಿಗೆ ಸಂಬಂಧಿಸಿದ ಪ್ರಾಜೆಕ್ಟ್;

(ಡಿ) ಸಮುಚಿತ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ವರಮಾನ ಗುಂಪುಗಳಿಗೆ ವಸತಿ ಸೌಲಭ್ಯ ಕಲ್ಪಿಸುವುದಕ್ಕೆ ಸಂಬಂಧಿಸಿದ ಪ್ರಾಜೆಕ್ಟ್;

(ಇ) ಗ್ರಾಮ ಸ್ಥಳಗಳನ್ನು ಅಥವಾ ನಗರ ಪ್ರದೇಶದಲ್ಲಿರುವ ಯಾವುದೇ ಸ್ಥಳವನ್ನು ಯೋಜಿತ ರೀತಿಯಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಅಥವಾ ಅಂಥ ನಿವೇಶನಗಳಲ್ಲಿ ಸುಧಾರಣೆ ಮಾಡುವುದಕ್ಕೆ ಅಥವಾ ಗ್ರಾಮೀಣ ಪ್ರದೇಶಗಳಲ್ಲಿರುವ ಅಥವಾ ನಗರ ಪ್ರದೇಶಗಳಲ್ಲಿ ಇರುವ ದುರ್ಬಲ ವರ್ಗಗಳಿಗೆ ನಿವಾಸದ ಉದ್ದೇಶಗಳಿಗಾಗಿ ಭೂಮಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ಪ್ರಾಜೆಕ್ಟ್;

(ಎಫ್) ಬಡವರಿಗೆ ಅಥವಾ ಭೂರಹಿತರಿಗೆ ಅಥವಾ ಪ್ರಕೃತಿ ವಿಕೋಪಗಳಿಗೆ ತುತ್ತಾದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಅಥವಾ ಸರ್ಕಾರವು, ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮವು ಕೈಗೊಂಡ ಯಾವುದೇ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕಾರಣದಿಂದಾಗಿ ಸ್ಥಳಾಂತರಗೊಂಡ ಅಥವಾ ಬಾಧಿತರಾದ ಜನರಿಗೆ ವಸತಿ ಸೌಲಭ್ಯ ಕಲ್ಪಿಸುವುದಕ್ಕೆ ಸಂಬಂಧಿಸಿದ ಪ್ರಾಜೆಕ್ಟ್

– ಇವು ಒಳಗೊಳ್ಳತಕ್ಕದ್ದು.

(2) ಭೂಸ್ವಾಧೀನಕ್ಕೆ, ಭೂಸ್ವಾಧೀನಕ್ಕೆ ಅನುಮತಿ ನೀಡುವುದಕ್ಕೆ, ಪರಿಹಾರ ನೀಡಿಕೆಗೆ, ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿರುವ ಉಪಬಂಧಗಳನ್ನು ಈ ಮುಂದಿನ ಉದ್ದೇಶಗಳಿಗಾಗಿ ಎಂದರೆ:–

(ಎ) ಉಪಪ್ರಕರಣ (1)ರಲ್ಲಿ ವಿವರಿಸಿರುವ ಸಾರ್ವಜನಿಕ ಉದ್ದೇಶಕ್ಕಾಗಿ ಇರುವ ಯಾವ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಪ್ರಾಜೆಕ್ಟ್‌ಗಳಲ್ಲಿ ಭೂಮಿಯ ಒಡೆತನವು ಸರ್ಕಾರದಲ್ಲಿ ನಿಹಿತವಾಗಿರುವುದು ಮುಂದುವರಿಯುತ್ತಿದೆಯೋ ಆ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಪ್ರಾಜೆಕ್ಟ್‌ಗಳಿಗೆ;

(ಬಿ) ಉಪಪ್ರಕರಣ (1)ರಲ್ಲಿ ವಿವರಿಸಿರುವಂಥ ಸಾರ್ವಜನಿಕ ಉದ್ದೇಶಕ್ಕಾಗಿ ಇರುವ ಖಾಸಗಿ ಕಂಪನಿಗಳಿಗೆ;

– ಸಮುಚಿತ ಸರ್ಕಾರವು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಅನ್ವಯಿಸತಕ್ಕದ್ದು:

ಪರಂತು.–

(i) ಖಾಸಗಿ ಕಂಪನಿಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಾದರೆ, ಪ್ರಕರಣ (3)ರ ಖಂಡ (ಸಿ)ಯ ಉಪಖಂಡ (i) ರಲ್ಲಿ ಮತ್ತು (v) ರಲ್ಲಿ ವಿವರಿಸಿರುವ ಬಾಧಿತ ಕುಟುಂಬಗಳ ಪೈಕಿ ಕೊನೆಪಕ್ಷ ಶೇಕಡಾ ಎಂಭತ್ತರಷ್ಟು ಕುಟುಂಬಗಳ ಒಪ್ಪಿಗೆಯನ್ನು ಮುಂಚಿತವಾಗಿಯೇ;

(ii) ಸಾರ್ವಜನಿಕ ಖಾಸಗಿ ಪಾಲುದಾರಿಕೆ ಪ್ರಾಜೆಕ್ಟ್‌ಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಾದರೆ, ಪ್ರಕರಣ (3)ರ ಖಂಡ (ಸಿ)ಯ ಉಪಖಂಡ (i)ರಲ್ಲಿ ಮತ್ತು (v)ರಲ್ಲಿ ವಿವರಿಸಿರುವ, ಬಾಧಿತ ಕುಟುಂಬಗಳ ಪೈಕಿ ಕೊನೆಪಕ್ಷ ಶೇಕಡಾ ಎಪ್ಪತ್ತರಷ್ಟು ಕುಟುಂಬಗಳ ಒಪ್ಪಿಗೆಯನ್ನು ಮುಂಚಿತವಾಗಿಯೇ

– ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ವಿಧಾನದ ಮೂಲಕ ಪಡೆದುಕೊಳ್ಳತಕ್ಕದ್ದು:

ಮತ್ತು ಪರಂತು, ಒಪ್ಪಿಗೆಯನ್ನು ಪಡೆದುಕೊಳ್ಳುವ ಕಾರ್ಯವು, ಪ್ರಕರಣ 4ರಲ್ಲಿ ಹೇಳಿರುವ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಜತೆಜತೆಯಲ್ಲೇ ಆಗತಕ್ಕದ್ದು:

ಮತ್ತೂ ಪರಂತು, ಭೂ ವರ್ಗಾವಣೆಗೆ ಸಂಬಂಧಿಸಿದಂತೆ ಅನುಸೂಚಿತ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಯಾವುದೇ ಕಾನೂನನ್ನು (ನ್ಯಾಯಾಲಯದ ಯಾವ ಆಜ್ಞೆಯು ಅಥವಾ ತೀರ್ಪು ಅಂತಿಮವಾದುದಾಗಿದೆಯೋ ಆ ಯಾವುದೇ ಆಜ್ಞೆ ಅಥವಾ ತೀರ್ಪು ಸೇರಿದಂತೆ) ಉಲ್ಲಂಘಿಸಿ ಅಂಥ ಅನುಸೂಚಿತ ಪ್ರದೇಶದಲ್ಲಿ ಯಾವುದೇ ಭೂಮಿಯನ್ನು ಭೂಸ್ವಾಧೀನದ ರೂಪದಲ್ಲಿ ವರ್ಗಾವಣೆ ಮಾಡತಕ್ಕದಲ್ಲ.

(3) ಈ ಅಧಿನಿಯಮದ ಮೇರೆಗೆ ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಉಪಬಂಧಗಳು,–

(ಎ) ಖಾಸಗಿ ಕಂಪೆನಿಯು, ಪ್ರಕರಣ 46ರ ಉಪಬಂಧಗಳಿಗೆ ಅನುಸಾರವಾಗಿ, ಸಮುಚಿತ ಸರ್ಕಾರವು ನಿಯಮಿಸಬಹುದಾದ ಮಿತಿಗೆ ಸಮನಾದ ಅಥವಾ ಅದಕ್ಕೂ ಹೆಚ್ಚಿನ ಭೂಮಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಥವಾ ನಗರ ಪ್ರದೇಶಗಳಲ್ಲಿ ಭೂಮಾಲೀಕನೊಂದಿಗೆ ಖಾಸಗಿಯಾಗಿ ಮಾತುಕತೆ ನಡೆಸಿ ಖರೀದಿ ಮಾಡಿದರೆ;

(ಬಿ) ಹಾಗೆ ನಿಯಮಿಸಿರುವಂಥ ವಿಸ್ತೀರ್ಣದಲ್ಲಿ ಒಂದು ಭಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಖಾಸಗಿ ಕಂಪೆನಿಯು ಸಮುಚಿತ ಸರ್ಕಾರವನ್ನು ಕೋರಿಕೊಂಡರೆ

– ಅಂಥ ಸಂದರ್ಭಗಳಿಗೂ ಅನ್ವಯವಾಗತಕ್ಕದ್ದು:

ಪರಂತು, ಖಾಸಗಿ ಕಂಪೆನಿಯು, ಸಾರ್ವಜನಿಕ ಉದ್ದೇಶಕ್ಕಾಗಿ ಭಾಗಶಃ ಭೂಮಿಯ ಸ್ವಾಧೀನಕ್ಕಾಗಿ ಸಮುಚಿತ ಸರ್ಕಾರವನ್ನು ಕೋರಿಕೊಂಡರೆ, ಆಗ, ಎರಡನೇ ಅನುಸೂಚಿಯಲ್ಲಿ ಹೇಳಿರುವಂಥ ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಹಕ್ಕುಗಳು, ಪ್ರಾಜೆಕ್ಟ್‌ಗಾಗಿ ಖಾಸಗಿ ಕಂಪೆನಿಯು ಖರೀದಿ ಮಾಡಿದ ಮತ್ತು ಸರ್ಕಾರವು ಸ್ವಾಧೀನಪಡಿಸಿಕೊಂಡ ಭೂಮಿಯೂ ಸೇರಿದಂತೆ ಒಟ್ಟಾರೆ ಇಡೀ ವಿಸ್ತೀರ್ಣಕ್ಕೆ ಅನ್ವಯವಾಗತಕ್ಕದ್ದು.

3. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಡಳಿತಗಾರ" ಎಂದರೆ, ಬಾಧಿತ ಕುಟುಂಬಗಳ ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಉದ್ದೇಶಕ್ಕಾಗಿ ಪ್ರಕರಣ 43ರ ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಅಧಿಕಾರಿ;

(ಬಿ) "ಸ್ವಾಧೀನಕ್ಕೆ ಒಳಪಡುವ ಪ್ರದೇಶ" ಎಂದರೆ, ಭೂಸ್ವಾಧೀನದ ಉದ್ದೇಶಗಳಿಗಾಗಿ ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಪ್ರದೇಶ;

(ಸಿ) "ಬಾಧಿತ ಕುಟುಂಬ" ಎಂದರೆ:–

(i) ಯಾವ ಕುಟುಂಬದ ಭೂಮಿಯನ್ನು ಅಥವಾ ಸ್ಥಿರ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಕುಟುಂಬ;

(ii) ಯಾವುದೇ ಸ್ವಂತ ಭೂಮಿ ಇರದ ಕುಟುಂಬ, ಆದರೆ, ಅಂಥ ಕುಟುಂಬದಲ್ಲಿರುವ ಜನರು ಕೃಷಿ ಕಾರ್ಮಿಕರು, ಯಾವುದೇ ರೀತಿಯ ಗೇಣಿದಾರಿಕೆಯನ್ನುಳ್ಳ ಅಥವಾ ಫಲಾನುಭವದ ಹಕ್ಕುಳ್ಳ ಗೇಣಿದಾರರು, ಬೆಳೆಯನ್ನು ಪಾಲು ಮಾಡಿಕೊಳ್ಳುವವರು ಅಥವಾ ಕುಶಲಕರ್ಮಿಗಳು, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಮುಂಚಿನ ಮೂರು ವರ್ಷಗಳಲ್ಲಿ ಅಂಥ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದವರು, ತಮ್ಮ ಜೀವನಾಧಾರದ ಪ್ರಧಾನ ಮೂಲವಾಗಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ಜೀವನಾಧಾರದ ಪ್ರಧಾನ ಮೂಲವನ್ನೇ ಕಳೆದುಕೊಂಡವರು ಆಗಿರಬಹುದು;

(iii) ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಾಗಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007 ರ 2) ರ ಮೇರೆಗೆ, ಯಾರು ತಮ್ಮ ಯಾವುದೇ ಅರಣ್ಯ ಹಕ್ಕುಗಳನ್ನು ಕಳೆದುಕೊಂಡಿದ್ದಾರೋ ಅಂಥ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳು;

(iv) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೂ ಮುಂಚೆ ಯಾವ ಕುಟುಂಬದ ಜೀವನಾಧಾರದ ಪ್ರಧಾನ ಮೂಲವು ಅರಣ್ಯಗಳ ಮೇಲೆ ಅಥವಾ ಜಲ ಮೂಲಗಳ ಮೇಲೆ ಅವಲಂಬಿತವಾಗಿತ್ತೋ ಆ ಕುಟುಂಬ ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹಣಾಕಾರರು, ಬೇಟೆಗಾರರು, ಮೀನುಗಾರರು, ಮತ್ತು ಅಂಬಿಗರು ಮತ್ತು ಭೂಸ್ವಾಧೀನತೆಯಿಂದಾಗಿ ಯಾರ ಜೀವನಾಧಾರಕ್ಕೆ ತೊಂದರೆಯಾಗಿದಿಯೋ ಆ ವ್ಯಕ್ತಿಗಳು ಸೇರುತ್ತಾರೆ;

(v) ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ತನ್ನ ಯಾವುದೇ ಪರಿಯೋಜನೆಗಳ ಮೇರೆಗೆ ಯಾವ ವ್ಯಕ್ತಿಗೆ ನೀಡಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆಯೋ ಅಂಥ ಕುಟುಂಬದ ಸದಸ್ಯ;

(vi) ನಗರ ಪ್ರದೇಶಗಳಲ್ಲಿ ಭೂಸ್ವಾಧೀನಕ್ಕೆ ಒಳಪಟ್ಟಿರುವ ಭೂಮಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೂ ಮುಂಚಿನ ಮೂರು ವರ್ಷಗಳ ಕಾಲ ಯಾವ ಕುಟುಂಬ ವಾಸವಾಗಿತ್ತೋ ಅಥವಾ ಅಂಥ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಾಗಿ ಯಾವ ಕುಟುಂಬವು ಜೀವನಾಧಾರದ ಪ್ರಧಾನ ಮೂಲವನ್ನೇ ಕಳೆದುಕೊಂಡಿದೆಯೋ ಆ ಕುಟುಂಬ;

(ಡಿ) "ಕೃಷಿ ಭೂಮಿ" ಎಂದರೆ:–

(i) ಕೃಷಿ ಮತ್ತು ತೋಟಗಾರಿಕೆ ಉದ್ದೇಶಕ್ಕಾಗಿ;

(ii) ಹೈನುಗಾರಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ರೇಷ್ಮೆ ಕೃಷಿ, ಬಿತ್ತನೆ ಬೀಜ ಬೇಸಾಯ, ಜಾನುವಾರು ತಳಿ ಸಂವರ್ಧನೆ ಅಥವಾ ಔಷಧೀಯ ಗುಣಗಳುಳ್ಳ ಗಿಡ ಮೂಲಿಕೆಗಳನ್ನು ಬೆಳೆಯುವ ನರ್ಸರಿಗಳು ಇವುಗಳ ಉದ್ದೇಶಕ್ಕಾಗಿ;

(iii) ಬೆಳೆಗಳನ್ನು, ಮರಗಳನ್ನು, ಹುಲ್ಲನ್ನು ಅಥವಾ ತೋಟದ ಉತ್ಪನ್ನವನ್ನು ಬೆಳೆಸುವ ಉದ್ದೇಶಕ್ಕಾಗಿ; ಮತ್ತು

(iv) ಜಾನುವಾರುಗಳನ್ನು ಮೇಯಿಸುವ ಉದ್ದೇಶಕ್ಕಾಗಿ ಬಳಸುತ್ತಿರುವ ಭೂಮಿ;

(ಇ) "ಸಮುಚಿತ ಸರ್ಕಾರ" ಎಂದರೆ:–

(i) ಒಂದು ರಾಜ್ಯದ ಭೂ ಪ್ರದೇಶದ ಒಳಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಆ ರಾಜ್ಯ ಸರ್ಕಾರ;

(ii) ಕೇಂದ್ರಾಡಳಿತ ಪ್ರದೇಶದ (ಪುದುಚೇರಿಯನ್ನು ಹೊರತುಪಡಿಸಿ) ಒಳಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರ;

(iii) ಪುದುಚೇರಿ ಕೇಂದ್ರಾಡಳಿತ ಪ್ರದೇಶದ ಒಳಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಪುದುಚೇರಿ ಸರ್ಕಾರ;

(iv) ಸಾರ್ವಜನಿಕ ಉದ್ದೇಶಕ್ಕಾಗಿ ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಆಯಾಯ ರಾಜ್ಯ ಸರ್ಕಾರಗಳೊಂದಿಗೆ ಅಥವಾ ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಮಾಲೋಚಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ; ಮತ್ತು

(v) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ, ಒಕ್ಕೂಟದ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರ:

ಪರಂತು, ಯಾವ ಜಿಲ್ಲೆಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುವ ಭೂಮಿಯ ವಿಸ್ತೀರ್ಣವು, ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದಷ್ಟು ವಿಸ್ತೀರ್ಣವನ್ನು ಮೀರುವುದಿಲ್ಲವೋ ಆ ಜಿಲ್ಲೆಯ ಕಲೆಕ್ಟರ್‌ನನ್ನೇ ಸಮುಚಿತ ಸರ್ಕಾರ ಎಂದು ಭಾವಿಸತಕ್ಕದ್ದು;

(ಎಫ್) "ಪ್ರಾಧಿಕಾರ" ಎಂದರೆ, ಪ್ರಕರಣ 51ರ ಮೇರೆಗೆ ಸ್ಥಾಪಿಸಿದ ಭೂಸ್ವಾಧೀನ ಮತ್ತು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಾಧಿಕಾರ;

(ಜಿ) "ಕಲೆಕ್ಟರ್" ಎಂದರೆ, ರೆವಿನ್ಯೂ ಜಿಲ್ಲೆಯ ಕಲೆಕ್ಟರ್, ಮತ್ತು ಇದರಲ್ಲಿ ಜಿಲ್ಲಾಧಿಕಾರಿಯು ಮತ್ತು ಈ ಅಧಿನಿಯಮದ ಮೇರೆಗೆ ಕಲೆಕ್ಟರ್‌ನ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಮುಚಿತ ಸರ್ಕಾರವು ವಿಶೇಷವಾಗಿ ಅಧಿಸೂಚಿಸಿದ ಯಾರೇ ಅಧಿಕಾರಿಯು ಒಳಗೊಳ್ಳುತ್ತಾನೆ;

(ಹೆಚ್) "ಕಮಿಷನರ್" ಎಂದರೆ, ಪ್ರಕರಣ 44ರ ಮೇರೆಗೆ ನೇಮಕಗೊಂಡ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಮಿಷನರ್;

(ಐ) "ಭೂಸ್ವಾಧೀನಕ್ಕೆ ತಗಲಿದ ವೆಚ್ಚ" ದಲ್ಲಿ ಈ ಮುಂದಿನ ವೆಚ್ಚಗಳೂ, ಎಂದರೆ:–

(i) ಪರಿಹಾರದ ಮೊಬಲಗಿನ ಮೊತ್ತ, ಈ ಪರಿಹಾರ ಮೊಬಲಗಿನ ಮೊತ್ತದಲ್ಲಿ ಸಮಾಧಾನಾರ್ಥಕ ಪರಿಹಾರದ ಮೊಬಲಗು, ಭೂಸ್ವಾಧೀನ ಮತ್ತು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಾಧಿಕಾರವು ಅಥವಾ ನ್ಯಾಯಾಲಯವು ಪರಿಹಾರದ ಮೊಬಲಗಿನ ಮೊತ್ತವನ್ನು ಹೆಚ್ಚಿಸಿ ಆದೇಶ ಹೊರಡಿಸಿದರೆ ಅಂಥ ಮೊತ್ತ ಮತ್ತು ಆ ಮೊತ್ತದ ಮೇಲೆ ಸಂದಾಯ ಮಾಡಬಹುದಾದ ಬಡ್ಡಿಯ ಹಣ ಮತ್ತು ಬಾಧಿತ ಕುಟುಂಬಗಳಿಗೆ ಯಾವುದಾದರೂ ಇತರೆ ಮೊತ್ತವನ್ನು ಸಂದಾಯ ಮಾಡಬೇಕಾಗುತ್ತದೆ ಎಂದು ಅಂಥ ಪ್ರಾಧಿಕಾರವು ಅಥವಾ ನ್ಯಾಯಾಲಯವು ನಿರ್ಧರಣೆ ಮಾಡಿದ್ದರೆ ಅಂಥ ಹಣ;

(ii) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಆ ಭೂಮಿಗೆ ಮತ್ತು ಆ ಭೂಮಿಯಲ್ಲಿ ಬೆಳೆದು ನಿಂತಿರುವ ಬೆಳೆಗಳಿಗೆ ಆದ ಹಾನಿಗೆ ಸಂದಾಯ ಮಾಡಬೇಕಾದ ಸುಸ್ತಿ ದಂಡ (ಡೆಮರೇಜು);

(iii) ಸ್ಥಳಾಂತರಿತ ಕುಟುಂಬಗಳಿಗೆ ಅಥವಾ ಬಾಧಿತ ಕುಟುಂಬಗಳಿಗೆ ಪುನರ್‌ವ್ಯವಸ್ಥೆ ಕಲ್ಪಿಸಲು ಭೂಮಿಯನ್ನು ಮತ್ತು ಕಟ್ಟಡವನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕಾಗಿ ತಗುಲಿದ ವೆಚ್ಚ;

(iv) ಯಾವ ಪ್ರದೇಶಗಳಲ್ಲಿ ಪುನರ್‌ವ್ಯವಸ್ಥೆ ಕಲ್ಪಿಸಲಾಗುತ್ತದೋ ಆ ಪ್ರದೇಶದಲ್ಲಿ ಮೂಲಸೌಕರ್ಯಗಳ ಮತ್ತು ನಾಗರಿಕ ಸೌಕರ್ಯಗಳ ಅಭಿವೃದ್ಧಿಗಾಗಿ ತಗುಲಿದ ವೆಚ್ಚ;

(v) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಣೆ ಮಾಡಿದಂಥ ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಆದ ವೆಚ್ಚ;

(vi) ಆಡಳಿತಾತ್ಮಕ ವೆಚ್ಚ ಎಂದರೆ,–

(ಎ) ಪ್ರಾಜೆಕ್ಟ್ ಸ್ಥಳದಲ್ಲಿ ಇರುವ ಭೂಮಿಗಳು ಮತ್ತು ಪ್ರಾಜೆಕ್ಟ್ ಪ್ರದೇಶದ ಹೊರಗಡೆ ಇರುವ ಭೂಮಿಗಳು ಎರಡನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ತಗುಲಿದ, ಪರಿಹಾರದ ವೆಚ್ಚದಲ್ಲಿ ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಶೇಕಡಾ ಪ್ರಮಾಣದ ಮೊತ್ತವನ್ನು ಮೀರದಂಥ ವೆಚ್ಚ;

(ಬಿ) ಯಾವ ಭೂ ಮಾಲೀಕರ ಮತ್ತು ಯಾವ ಕುಟುಂಬಗಳ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅಥವಾ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಅಂಥ ಭೂ ಮಾಲೀಕರ ಮತ್ತು ಅಂಥ ಇತರ ಬಾಧಿತ ಕುಟುಂಬಗಳ ಅಥವಾ ಅಂಥ ಭೂಸ್ವಾಧೀನತೆಯಿಂದ ತೊಂದರೆಗೆ ಒಳಗಾದ ಮತ್ತು ಇತರ ಕುಟುಂಬಗಳ ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ತಗುಲಿದ ವೆಚ್ಚ;

(vii) 'ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ'ಕ್ಕೆ ತಗಲುವ ವೆಚ್ಚ

– ಇವೆಲ್ಲವೂ ಸೇರುತ್ತವೆ.

(ಜೆ) "ಕಂಪೆನಿ" ಎಂದರೆ:–

(i) ಕಂಪೆನಿಗಳ ಅಧಿನಿಯಮ, 1956 (1956 ರ 1)ರ ಪ್ರಕರಣ 3ರಲ್ಲಿ ವಿವರಿಸಿರುವ ಸರ್ಕಾರಿ ಕಂಪೆನಿ ಅಲ್ಲದ, ಕಂಪೆನಿ;

(ii) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21)ರ ಮೇರೆಗೆ ಅಥವಾ ಒಂದು ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಂಥದ್ದೇ ಕಾನೂನಿನ ಮೇರೆಗೆ ನೋಂದಣಿಯಾದ ಸಂಘ;

(ಕೆ) "ಸ್ಥಳಾಂತರಿತ ಕುಟುಂಬ" ಎಂದರೆ ಭೂಸ್ವಾಧೀನತೆಯಿಂದಾಗಿ ಯಾವ ಕುಟುಂಬವನ್ನು, ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಪ್ರದೇಶದಿಂದ ಪುನರ್‌ವ್ಯವಸ್ಥೆ ಕಲ್ಪಿಸಿರುವ ಪ್ರದೇಶಕ್ಕೆ ಸ್ಥಳಾಂತರಿಸಬೇಕಾಯಿತೋ ಮತ್ತು ಅಲ್ಲಿ ಪುನರ್ ನೆಲೆಗೊಳಿಸಬೇಕಾಯಿತೋ ಆ ಯಾವುದೇ ಕುಟುಂಬ;

(ಎಲ್) "ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ವ್ಯವಹರಿಸಲು ಹಕ್ಕುಳ್ಳ ವ್ಯಕ್ತಿ" ಪದದ ಅರ್ಥದಲ್ಲಿ ಈ ಮುಂದೆ ಹೇಳಿರುವಂಥ ವ್ಯಕ್ತಿಗಳು ಸೇರುತ್ತಾರೆಂದು ಭಾವಿಸತಕ್ಕದ್ದು, ಎಂದರೆ:–

(i) ಒಂದು ವೇಳೆ ಯಾವ ವ್ಯಕ್ತಿಗೆ ಯಾವ ಅಶಕ್ತತೆಯು ಇಲ್ಲದೆ ಇದ್ದರೆ ಆತ ಫಲಾನುಭವದ ವಿಷಯದಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ಉಳ್ಳವನಾಗಿರುತ್ತಿದ್ದನೋ, ಅಷ್ಟರಮಟ್ಟಿಗೆ ಫಲಾನುಭವದ ವಿಷಯದಲ್ಲಿ ಆಸಕ್ತಿಯುಳ್ಳವರಾಗಿರುವ ಅಂಥ ವ್ಯಕ್ತಿಗಳ ಟ್ರಸ್ಟಿಗಳು;

(ii) ಒಂದು ವೇಳೆ, ಅಪ್ರಾಪ್ತ ವಯಸ್ಕರಿಗೆ, ಬುದ್ಧಿಭ್ರಮಣೆಯುಳ್ಳವರಿಗೆ ಅಥವಾ ಅಸ್ವಸ್ಥ ಮನಸ್ಸಿನವರಿಗೆ ಯಾವ ದೋಷವೂ ಇರದಿದ್ದರೆ ಅವರಿಗೆ ಎಷ್ಟರಮಟ್ಟಿಗೆ ಕಾರ್ಯಕ್ಷಮತೆ ಇರುತ್ತಿತ್ತೋ ಅಷ್ಟರಮಟ್ಟಿಗೆ ಅಂಥವರುಗಳ ಪರವಾಗಿ ವ್ಯವಹರಿಸಲು/ ಹಕ್ಕುಳ್ಳ ಪೋಷಕರು ಮತ್ತು ಸಮಿತಿಗಳು ಮತ್ತು ಮ್ಯಾನೇಜರುಗಳು:

ಪರಂತು, ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೊದಲನೇ ಅನುಸೂಚಿಯ ಕ್ರಮಾದೇಶ XXXIIರ ಉಪಬಂಧಗಳು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ, ಕಲೆಕ್ಟರ್‌ನ ಮುಂದೆ ಅಥವಾ ಪ್ರಾಧಿಕಾರದ ಮುಂದೆ ಹಾಜರಾಗಲು ಆಸಕ್ತಿಯುಳ್ಳ ವ್ಯಕ್ತಿಯ ಪರವಾಗಿ ಆತನ ಪೋಷಕನು ಅಥವಾ ಆತನ ವಾದಮಿತ್ರನು ಅಥವಾ ಪೋಷಕನು ಹಾಜರಾಗುವಂಥ ಸಂದರ್ಭದಲ್ಲಿ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

(ಎಂ) "ಕುಟುಂಬ"ದಲ್ಲಿ, ವ್ಯಕ್ತಿ, ಆತನ ಹೆಂಡತಿ ಅಥವಾ ಆಕೆಯ ಗಂಡ, ಆತನ ಅಥವಾ ಆಕೆಯ ಮೇಲೆ ಅವಲಂಬಿತರಾಗಿರುವ ಅಪ್ರಾಪ್ತ ವಯಸ್ಕ ಮಕ್ಕಳು ಅಥವಾ ಅಪ್ರಾಪ್ತ ವಯಸ್ಕ ಸಹೋದರರು, ಅಪ್ರಾಪ್ತ ವಯಸ್ಕ ಸಹೋದರಿಯರು ಸೇರುತ್ತಾರೆ:

ಪರಂತು, ವಿಧವೆಯರನ್ನು, ವಿವಾಹ ವಿಚ್ಛೇದಿತರನ್ನು ಮತ್ತು ಕುಟುಂಬವು ತ್ಯಜಿಸಿದ ಮಹಿಳೆಯರನ್ನು ಪ್ರತ್ಯೇಕ ಕುಟುಂಬ ಎಂದು ಭಾವಿಸತಕ್ಕದ್ದು;

**ವಿವರಣೆ.–** ಪ್ರೌಢ ವಯಸ್ಕ ಪುರುಷನನ್ನು ಅಥವಾ ಪ್ರೌಢವಯಸ್ಕ ಮಹಿಳೆಯನ್ನು, ಆತನಿಗೆ ಹೆಂಡತಿ ಅಥವಾ ಮಕ್ಕಳು ಅಥವಾ ಅವಲಂಬಿತರು ಇದ್ದರೂ ಅಥವಾ ಇಲ್ಲದಿದ್ದರೂ ಅಥವಾ ಆಕೆಗೆ ಗಂಡ ಅಥವಾ ಮಕ್ಕಳು ಅಥವಾ

ಅವಲಂಬಿತರು ಇದ್ದರೂ ಅಥವಾ ಇಲ್ಲದಿದ್ದರೂ ಈ ಅಧಿನಿಯಮದ ಉದ್ದೇಶಕ್ಕಾಗಿ ಪ್ರತ್ಯೇಕ ಕುಟುಂಬ ಎಂದೇ ಪರಿಗಣಿಸತಕ್ಕದ್ದು.

(ಎನ್) "ಭೂ ಹಿಡುವಳಿ" ಎಂದರೆ, ಮಾಲೀಕನಾಗಿ, ಅಧಿಭೋಗದಾರನಾಗಿ ಅಥವಾ ಗೇಣಿದಾರನಾಗಿ ಅಥವಾ ಬೇರೆ ರೀತಿಯಲ್ಲಿ ಒಬ್ಬ ವ್ಯಕ್ತಿಯು ಹೊಂದಿರುವ ಒಟ್ಟು ಭೂಮಿ;

(ಓ) "ಮೂಲಸೌಕರ್ಯ ಪ್ರಾಜೆಕ್ಟ್"ನಲ್ಲಿ ಪ್ರಕರಣ 2ರ ಉಪಪ್ರಕರಣ (1)ರ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವಂಥ ಬಾಬುಗಳಲ್ಲಿ ಯಾವುದೇ ಒಂದು ಬಾಬು ಅಥವಾ ಹೆಚ್ಚು ಬಾಬುಗಳು ಸೇರತಕ್ಕದ್ದು;

(ಪಿ) "ಭೂಮಿ"ಯಲ್ಲಿ ಭೂಮಿಯಿಂದ ಪ್ರಾಪ್ತವಾಗುವ ಪ್ರಯೋಜನಗಳು ಮತ್ತು ಭೂಮಿಗೆ ಹೊಂದಿಕೊಂಡಿರುವ ಅಥವಾ ಭೂಮಿಗೆ ಹೊಂದಿಕೊಂಡಿರುವ ಯಾವುದಕ್ಕಾದರೂ ಖಾಯಂ ಆಗಿ ಲಗತ್ತಾಗಿರುವ ವಸ್ತುಗಳು ಸೇರುತ್ತವೆ;

(ಕ್ಯೂ) "ಭೂ ರಹಿತ" ಎಂದರೆ, ಯಾವ ವ್ಯಕ್ತಿಗಳನ್ನು ಅಥವಾ ವ್ಯಕ್ತಿಗಳ ವರ್ಗವನ್ನು,-

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ರಾಜ್ಯ ಕಾನೂನಿನಲ್ಲಿ ಭೂರಹಿತ ಎಂದು ಪರಿಗಣಿಸಬಹುದೋ ಅಥವಾ ನಿರ್ದಿಷ್ಟಪಡಿಸಬಹುದೋ ಅಂಥ ವ್ಯಕ್ತಿಗಳು ಅಥವಾ ಅಂಥ ವ್ಯಕ್ತಿಗಳ ವರ್ಗ; ಅಥವಾ

(ii) ಉಪಖಂಡ (i)ರಲ್ಲಿ ಭೂರಹಿತ ಎಂದು ನಿರ್ದಿಷ್ಟಪಡಿಸಿರದಂಥ ವ್ಯಕ್ತಿಗಳ ಅಥವಾ ವ್ಯಕ್ತಿಗಳ ವರ್ಗದ ಸಂದರ್ಭದಲ್ಲಿ, ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗ;

(ಆರ್) "ಭೂ ಮಾಲೀಕ" ಪದದಲ್ಲಿ,-

(i) ಯಾವ ವ್ಯಕ್ತಿಯ ಹೆಸರು, ಸಂಬಂಧಪಟ್ಟ ಪ್ರಾಧಿಕಾರದ ದಾಖಲೆಗಳಲ್ಲಿ ಭೂಮಿಯ ಅಥವಾ ಕಟ್ಟಡದ ಅಥವಾ ಅದರ ಭಾಗದ ಮಾಲೀಕನೆಂದು ನಮೂದಾಗಿದೆಯೋ ಆ ಯಾರೇ ವ್ಯಕ್ತಿಯು; ಅಥವಾ

(ii) ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ 2)ರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅರಣ್ಯ ಹಕ್ಕುಗಳನ್ನು ಯಾವ ವ್ಯಕ್ತಿಗೆ ಮಂಜೂರು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು; ಅಥವಾ

(iii) ವಹಿಸಿಕೊಟ್ಟಿರುವ ಭೂಮಿಗಳೂ ಸೇರಿದಂತೆ ರಾಜ್ಯದ ಯಾವುದೇ ಕಾನೂನಿನ ಮೇರೆಗೆ ಭೂಮಿಗಳ ಮೇಲೆ ಪಟ್ಟಾ ಹಕ್ಕುಗಳ ಮಂಜೂರಾತಿಗೆ ಯಾವ ವ್ಯಕ್ತಿಯು ಅರ್ಹನಾಗಿರುವನೋ ಆ ಯಾರೇ ವ್ಯಕ್ತಿಯು; ಅಥವಾ

(iv) ನ್ಯಾಯಾಲಯದ ಅಥವಾ ಪ್ರಾಧಿಕಾರದ ಆದೇಶದ ಮೂಲಕ ಯಾವ ವ್ಯಕ್ತಿಯನ್ನು ಭೂಮಾಲೀಕನೆಂದು ಘೋಷಿಸಲಾಗಿದೆಯೋ ಆ ಯಾರೇ ವ್ಯಕ್ತಿಯು;

– ಸೇರುತ್ತಾನೆ.

(ಎಸ್) "ಸ್ಥಳೀಯ ಪ್ರಾಧಿಕಾರ"ದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾಗಿರುವ (ಯಾವುದೇ ಹೆಸರಿನಿಂದ ಕರೆಯಲಿ) ನಗರ ಯೋಜನಾ ಪ್ರಾಧಿಕಾರ ಮತ್ತು ಸಂವಿಧಾನದ 243ನೇ ಅನುಚ್ಛೇದದಲ್ಲಿ ವಿವರಿಸಿರುವ ಪಂಚಾಯತಿಯ ಮತ್ತು 243ಪಿ ಅನುಚ್ಛೇದದಲ್ಲಿ ವಿವರಿಸಿರುವ ಪುರಸಭೆ ಸೇರುತ್ತವೆ;

(ಟಿ) "ಅತಿ ಸಣ್ಣ ರೈತ" ಎಂದರೆ, ನೀರಾವರಿ ಸೌಲಭ್ಯ ಇರದ ಒಂದು ಹೆಕ್ಟೇರ್‌ವರೆಗಿನ ಭೂಮಿಯ ಅಥವಾ ನೀರಾವರಿ ಸೌಲಭ್ಯ ಉಳ್ಳ ಅರ್ಧ ಹೆಕ್ಟೇರ್‌ವರೆಗಿನ ಭೂಮಿಯ ಸಾಗುವಳಿದಾರ;

(ಯು) "ಮಾರುಕಟ್ಟೆ ಮೌಲ್ಯ" ಎಂದರೆ, ಪ್ರಕರಣ 26ರ ಅನುಸಾರವಾಗಿ ನಿರ್ಧರಣೆ ಮಾಡಿದ ಭೂಮಿಯ ಮೌಲ್ಯ;

(ವಿ) "ಅಧಿಸೂಚನೆ" ಎಂದರೆ, ಸಂದರ್ಭಾನುಸಾರ, ಭಾರತ ರಾಜಪತ್ರದಲ್ಲಿ ಅಥವಾ ರಾಜ್ಯದ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಮತ್ತು 'ಅಧಿಸೂಚಿಸು' ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಡಬ್ಲ್ಯೂ) "ಪಟ್ಟಾ" ಪದವು ಸಂಬಂಧಪಟ್ಟ ಕೇಂದ್ರ ಅಧಿನಿಯಮಗಳಲ್ಲಿ ಅಥವಾ ರಾಜ್ಯ ಅಧಿನಿಯಮಗಳಲ್ಲಿ ಅಥವಾ ಅವುಗಳ ಮೇರೆಗೆ ರಚಿಸಿದ ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಎಕ್ಸ್) "ಹಿತಾಸಕ್ತಿ ಉಳ್ಳ ವ್ಯಕ್ತಿ" ಎಂದರೆ,–

(i) ಈ ಅಧಿನಿಯಮದ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಕಾರಣದಿಂದಾಗಿ ಕೊಡಬೇಕಾದ ಪರಿಹಾರವನ್ನು ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳು;

(ii) ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ 2)ರ ಮೇರೆಗೆ ಮಾನ್ಯ ಮಾಡಿರುವ ಯಾವುವೇ ಅರಣ್ಯ ಹಕ್ಕುಗಳನ್ನು ಕಳೆದುಕೊಂಡಿರುವ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳು;

(iii) ಭೂಸ್ವಾಧೀನಕ್ಕೆ ಒಳಪಟ್ಟಿರುವ ಭೂಮಿಯ ಅನುಭೋಗದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿ;

(iv) ಬೆಳೆ ಪಾಲುದಾರರನ್ನು ಏನೇ ಹೆಸರಿನಿಂದ ಕರೆದಿದ್ದರೂ ಅವರೂ ಸೇರಿದಂತೆ ಸಂಬಂಧಪಟ್ಟ ರಾಜ್ಯ ಕಾನೂನುಗಳ ಮೇರೆಗೆ ಗೇಣಿದಾರಿಕೆ ಹಕ್ಕುಗಳನ್ನು ಹೊಂದಿರುವಂಥ ವ್ಯಕ್ತಿಗಳು; ಮತ್ತು

(v) ಯಾವ ವ್ಯಕ್ತಿಯ ಜೀವನಾಧಾರದ ಪ್ರಧಾನ ಮೂಲಕ್ಕೆ ಪ್ರತಿಕೂಲವಾಗಿ ಧಕ್ಕೆ ಆಗುವ ಸಂಭವ ಇದೆಯೋ ಆ ಯಾರೇ ವ್ಯಕ್ತಿ;

(ವೈ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಝಡ್) "ಪ್ರಾಜೆಕ್ಟ್" ಎಂದರೆ, ಯಾವ ಪ್ರಾಜೆಕ್ಟ್‌ಗೋಸ್ಕರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆಯೋ ಆ ಪ್ರಾಜೆಕ್ಟ್ ಅಂಥ ಕ್ರಮದಿಂದ ತೊಂದರೆಗೆ ಒಳಗಾಗುವ ಜನರ ಸಂಖ್ಯೆ ಎಷ್ಟೇ ಇರಲಿ, ಅದು ಮುಖ್ಯವಲ್ಲ;

(ಝಡ್ಎ) "ಸಾರ್ವಜನಿಕ ಉದ್ದೇಶ" ಎಂದರೆ, ಪ್ರಕರಣ 2ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿರುವ ಚಟುವಟಿಕೆಗಳು;

(ಝಡ್ಬಿ) "ಅಗತ್ಯ ನಿಕಾಯ" ಎಂದರೆ, ಸಮುಚಿತ ಸರ್ಕಾರವು ಯಾವ ಕಂಪನಿಗಾಗಿ, ನಿಗಮಿತ ನಿಕಾಯಕ್ಕಾಗಿ, ಸಂಸ್ಥೆಗಾಗಿ ಅಥವಾ ಯಾವುದೇ ಇತರ ಸಂಘ–ಸಂಸ್ಥೆಗಾಗಿ ಅಥವಾ ವ್ಯಕ್ತಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆಯೋ ಆ ಕಂಪನಿ, ನಿಗಮಿತ ನಿಕಾಯ, ಸಂಸ್ಥೆ ಅಥವಾ ಯಾವುದೇ ಇತರ ಸಂಘ ಸಂಸ್ಥೆ ಮತ್ತು ಸರ್ಕಾರಕ್ಕಾಗಿ, ಬಳಕೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಿದ್ದರೆ ಅಥವಾ ಸ್ವಾಧೀನಪಡಿಸಿಕೊಂಡ ನಂತರ ಅಂಥ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ, ಸಂದರ್ಭಾನುಸಾರ, ಗುತ್ತಿಗೆ, ಲೈಸೆನ್ಸ್ ಅಥವಾ ಭೂ ವರ್ಗಾವಣೆಯ ಯಾವುದೇ ಇತರ ವಿಧಾನದ ಮೂಲಕ, ಕಂಪೆನಿಗೆ, ನಿಗಮಿತ ನಿಕಾಯಕ್ಕೆ, ಸಂಸ್ಥೆಗೆ, ಅಥವಾ ಯಾವುದೇ ಇತರ ಸಂಘ–ಸಂಸ್ಥೆಗೆ ವರ್ಗಾವಣೆ ಮಾಡುವುದಕ್ಕಾಗಿ ಸ್ವಾಧೀನಪಡಿಸಿಕೊಳ್ಳುವುದಿದ್ದರೆ, ಸಮುಚಿತ ಸರ್ಕಾರವೂ ಸೇರುತ್ತದೆ;

(ಝಡ್ಸಿ) "ಪುನರ್‌ವ್ಯವಸ್ಥೆ ಪ್ರದೇಶ" ಎಂದರೆ, ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಾಗಿ ಯಾವ ಕುಟುಂಬಗಳನ್ನು ಸ್ಥಳಾಂತರಿಸಲಾಯಿತೋ ಆ ಬಾಧಿತ ಕುಟುಂಬಗಳಿಗೆ ಸಮುಚಿತ ಸರ್ಕಾರವು ಪುನರ್‌ವ್ಯವಸ್ಥೆ ಸೌಲಭ್ಯವನ್ನು ಯಾವ ಪ್ರದೇಶದಲ್ಲಿ ಕಲ್ಪಿಸಿದೆಯೋ ಆ ಪ್ರದೇಶ;

(ಝಡ್ಡಿ) "ಅನುಸೂಚಿತ ಪ್ರದೇಶ" ಎಂದರೆ, ಪಂಚಾಯಿತ್‌ಗಳ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996ರ (1996ರ 40) ಪ್ರಕರಣ 2ರಲ್ಲಿ ವಿವರಿಸಿರುವ ಅನುಸೂಚಿತ ಪ್ರದೇಶಗಳು;

(ಝಡ್ಇ) "ಸಣ್ಣ ರೈತ" ಎಂದರೆ, ಅತಿ ಸಣ್ಣ ರೈತನ ಹಿಡುವಳಿಗೆ ಹೋಲಿಸಿದರೆ ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಎಂದರೆ ನೀರಾವರಿ ಸೌಲಭ್ಯ ಇರದ ಎರಡು ಹೆಕ್ಟೇರುಗಳವರೆಗಿನ ಭೂಮಿಯ ಅಥವಾ ನೀರಾವರಿ ಸೌಲಭ್ಯವುಳ್ಳ ಒಂದು ಹೆಕ್ಟೇರ್‌ವರೆಗಿನ ಭೂಮಿಯ ಸಾಗುವಳಿದಾರ.

## ಅಧ್ಯಾಯ II

## ಸಾರ್ವಜನಿಕ ಉದ್ದೇಶ ಮತ್ತು ಪರಿಣಾಮ ನಿರ್ಧಾರಣೆ

### ಎ. ಸಾರ್ವಜನಿಕ ಉದ್ದೇಶ ಮತ್ತು ಸಾಮಾಜಿಕ ಪರಿಣಾಮವನ್ನು ನಿರ್ಧರಣೆ ಮಾಡುವ ಸಲುವಾಗಿ ಪ್ರಾಥಮಿಕ ವಿಚಾರಣೆ

**4. ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನಕ್ಕೆ ಸಿದ್ಧತೆ.–** ಸಮುಚಿತ ಸರ್ಕಾರವು, ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದಾಗಲೆಲ್ಲ, ಭೂಮಿಯನ್ನು ಯಾವ ಪ್ರದೇಶದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆಯೋ ಆ ಪ್ರದೇಶದಲ್ಲಿ, ಸಂದರ್ಭಾನುಸಾರ, ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯಿತಿಯೊಂದಿಗೆ, ವಾರ್ಡ್ ಮಟ್ಟದಲ್ಲಿ ಪುರಸಭೆಯೊಂದಿಗೆ ಅಥವಾ ನಗರಪಾಲಿಕೆಯೊಂದಿಗೆ ಸಮುಚಿತ ಸರ್ಕಾರವು ಸಮಾಲೋಚನೆ ಮಾಡತಕ್ಕದ್ದು ಮತ್ತು ಅವುಗಳೊಂದಿಗೆ ಸಮಾಲೋಚನೆ ಮಾಡಿ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವನ್ನು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಕೈಗೊಳ್ಳತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸಮಾಲೋಚನೆಯನ್ನು ಮತ್ತು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವನ್ನು ಪ್ರಾರಂಭಿಸುವುದಕ್ಕಾಗಿ ಸಮುಚಿತ ಸರ್ಕಾರವು ಹೊರಡಿಸಿದ ಅಧಿಸೂಚನೆಯನ್ನು ಆ ಸರ್ಕಾರವು, ಸಂದರ್ಭಾನುಸಾರ ಪಂಚಾಯಿತಿಗೆ, ಪುರಸಭೆಗೆ ಅಥವಾ ನಗರ ಪಾಲಿಕೆಗೆ ಮತ್ತು ಜಿಲ್ಲಾ ಕಲೆಕ್ಟರ್‌ನ ಕಚೇರಿಗೆ, ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್ ಕಚೇರಿಗೆ ಮತ್ತು ತಹಸೀಲ್ ಕಚೇರಿಗೆ ಸ್ಥಳೀಯ ಭಾಷೆಯಲ್ಲಿಯೇ ಒದಗಿಸತಕ್ಕದ್ದು ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿರುವ ಪ್ರದೇಶಗಳಲ್ಲಿ ಆ ಸರ್ಕಾರವು ನಿರ್ದಿಷ್ಟಪಡಿಸುವಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ಸರ್ಕಾರದ ವೆಬ್‌ಸೈಟ್‌ಗೂ ಸಹ ಹಾಕತಕ್ಕದ್ದು:

ಪರಂತು, ಸಮುಚಿತ ಸರ್ಕಾರವು, ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ಕೈಗೊಳ್ಳುವಾಗ ಸಂದರ್ಭಾನುಸಾರ ಪಂಚಾಯಿತಿಯ, ಗ್ರಾಮಸಭೆಯ, ಪುರಸಭೆಯ ಅಥವಾ ನಗರಪಾಲಿಕೆಯ ಪ್ರತಿನಿಧಿಗಳಿಗೆ ಸಮರ್ಪಕ ಪ್ರಾತಿನಿಧ್ಯ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು:

ಮತ್ತು ಪರಂತು, ಸಮುಚಿತ ಸರ್ಕಾರವು, ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಆ ಅಧ್ಯಯನವು ಮುಗಿದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಹೇಳಿರುವ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ವರದಿಯು ಪ್ರಕರಣ 6ರ ಮೇರೆಗೆ ನಿಯಮಿಸಿದ ರೀತಿಯಲ್ಲಿ ಸಾರ್ವಜನಿಕರಿಗೆ ದೊರೆಯುವಂತೆ ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಹೇಳಿರುವಂಥ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವು, ಇತರ ವಿಷಯಗಳ ಜೊತೆಗೆ, ಈ ಮುಂದೆ ಹೇಳಿರುವ ಎಲ್ಲ ವಿಷಯಗಳನ್ನು ಸಹ ಒಳಗೊಂಡಿರತಕ್ಕದ್ದು, ಎಂದರೆ,–

(ಎ) ಭೂಮಿಯ ಉದ್ದೇಶಿತ ಸ್ವಾಧೀನತೆಯಿಂದ ಸಾರ್ವಜನಿಕ ಉದ್ದೇಶವು ಈಡೇರುತ್ತದೆಯೇ ಎಂಬ ಬಗ್ಗೆ ನಿರ್ಧರಣೆ;

(ಬಿ) ಬಾಧಿತ ಕುಟುಂಬಗಳ ಅಂದಾಜು ಮತ್ತು ಆ ಕುಟುಂಬಗಳ ಪೈಕಿ ಎಷ್ಟು ಕುಟುಂಬಗಳನ್ನು ಸ್ಥಳಾಂತರಗೊಳಿಸಬೇಕಾದ ಸಂಭವ ಇದೆ ಎನ್ನುವುದರ ಬಗ್ಗೆ ಅಂದಾಜು;

(ಸಿ) ಉದ್ದೇಶಿತ ಸ್ವಾಧೀನತೆಗೆ ಒಳಪಡುವ ಸಂಭವ ಇರುವ ಸಾರ್ವಜನಿಕ ಮತ್ತು ಖಾಸಗಿ ಭೂಮಿಗಳ ವಿಸ್ತೀರ್ಣ, ಮನೆಗಳು, ವಸತಿ ಪ್ರದೇಶಗಳು ಮತ್ತು ಇತರ ಸಾಮಾನ್ಯ ಆಸ್ತಿಪಾಸ್ತಿಗಳು;

(ಡಿ) ಸ್ವಾಧೀನಪಡಿಸಿಕೊಳ್ಳಬೇಕೆಂದಿರುವ ಭೂಮಿಯ ವಿಸ್ತೀರ್ಣವು, ಪ್ರಾಜೆಕ್ಟ್‌ಗೆ ವಾಸ್ತವಿಕವಾಗಿ ಕನಿಷ್ಠ ಎಷ್ಟು ವಿಸ್ತೀರ್ಣದ ಭೂಮಿ ಬೇಕಾಗಿದೆಯೋ ಅಷ್ಟೇ ವಿಸ್ತೀರ್ಣದ್ದಾಗಿದೆಯೇ;

(ಇ) ಬೇರೊಂದು ಸ್ಥಳದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಯೋಚಿಸಲಾಗಿತ್ತೇ ಮತ್ತು ಅದು ಕಾರ್ಯಸಾಧ್ಯವಲ್ಲ ಎಂದು ಕಂಡುಬಂದಿತ್ತೇ;

(ಎಫ್) ಪ್ರಾಜೆಕ್ಟ್‌ನಿಂದ ಆಗುವ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ಮತ್ತು ಅಂಥ ಪರಿಣಾಮಗಳ ಸ್ವರೂಪ, ಮತ್ತು ಅವುಗಳ ನಿವಾರಣೆಗೆ ತಗುಲಿದ ವೆಚ್ಚ ಹಾಗೂ ಅಂಥ ವೆಚ್ಚಗಳಿಂದ ಪ್ರಾಜೆಕ್ಟ್‌ನ ಒಟ್ಟು ವೆಚ್ಚದ ಮೇಲೆ ಬೀಳುವ ಹೊರೆ, ಪ್ರತಿಯಾಗಿ ಪ್ರಾಜೆಕ್ಟ್‌ನಿಂದ ಉಂಟಾಗುವ ಪ್ರಯೋಜನಗಳು:

ಪರಂತು, ಪರಿಸರದ ಮೇಲಾಗುವ ಪರಿಣಾಮದ ನಿರ್ಧರಣೆ ಅಧ್ಯಯನವನ್ನೇನಾದರೂ ಕೈಗೊಳ್ಳುವುದಿದ್ದರೆ, ಅದನ್ನು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಜೊತೆಗೆ ಕೈಗೊಳ್ಳತಕ್ಕದ್ದು ಮತ್ತು ಅದನ್ನು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಜೊತೆಗೆ ಮುಗಿಸಬೇಕಾದ ಅಗತ್ಯವೇನಿಲ್ಲ.

(5) ಉಪಪ್ರಕರಣ (1)ರ ಮೇರೆಗೆ, ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವನ್ನು ಕೈಗೊಳ್ಳುವಾಗ, ಸಮುಚಿತ ಸರ್ಕಾರವು, ಇತರ ವಿಷಯಗಳ ಜೊತೆಗೆ, ಬಾಧಿತ ಕುಟುಂಬಗಳ ಜೀವನಾಧಾರ, ಸಾರ್ವಜನಿಕ ಸ್ವತ್ತುಗಳು, ಸಮುದಾಯ ಸ್ವತ್ತುಗಳು ಮತ್ತು ಆಸ್ತಿ ಪಾಸ್ತಿಗಳು, ಮೂಲ ಸೌಲಭ್ಯಗಳು, ಅದರಲ್ಲೂ ಮುಖ್ಯವಾಗಿ ರಸ್ತೆಗಳು, ಸಾರ್ವಜನಿಕ ಸಾರಿಗೆ, ಒಳಚರಂಡಿ, ನೈರ್ಮಲ್ಯ, ಕುಡಿಯುವ ನೀರಿನ ಮೂಲಗಳು, ಜಾನುವಾರುಗಳ ಕುಡಿಯುವ ನೀರಿನ ಮೂಲಗಳು, ಸಮುದಾಯ ಹೊಂಡಗಳು, ಗೋಮಾಳ, ಪ್ಲಾಂಟೇಷನ್‌ಗಳು, ಸಾರ್ವಜನಿಕ ಉಪಯುಕ್ತತೆ ಸೌಲಭ್ಯಗಳಾದ ಅಂಚೆ ಕಚೇರಿಗಳು, ಪಡಿತರ ಅಂಗಡಿಗಳು, ಆಹಾರ ದಾಸ್ತಾನು ಗೋದಾಮುಗಳು ಮುಂತಾದವುಗಳು, ವಿದ್ಯುಚ್ಛಕ್ತಿ ಸರಬರಾಜು, ಆರೋಗ್ಯ ರಕ್ಷಣೆ ಸೌಲಭ್ಯಗಳು, ಶಾಲೆಗಳು, ವಿದ್ಯಾ ಸಂಸ್ಥೆಗಳು ಅಥವಾ ತರಬೇತಿ ಸೌಲಭ್ಯಗಳು, ಅಂಗನವಾಡಿಗಳು, ಮಕ್ಕಳ ಆಟದ ಪಾರ್ಕುಗಳು, ಪೂಜಾ ಸ್ಥಳಗಳು, ಪಾರಂಪರಿಕ ಬುಡಕಟ್ಟು ಸಂಸ್ಥೆಗಳ ಭೂಮಿ ಮತ್ತು ಸ್ಮಶಾನ ಮತ್ತು ಚಿತಾಗಾರ ಜಾಗಗಳು ಮುಂತಾದ ಹಲವಾರು ಪ್ರಮುಖ ಬಾಬುಗಳ ಮೇಲೆ ಪ್ರಾಜೆಕ್ಟ್‌ನಿಂದ ಆಗುವ ಸಂಭವ ಇರುವಂಥ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(6) ಉಪಪ್ರಕರಣ (5)ರಲ್ಲಿ ಹೇಳಿರುವ ನಿರ್ದಿಷ್ಟ ಬಾಬಿನ ಮೇಲೆ ಆಗುವ ಪರಿಣಾಮವನ್ನು ನಿವಾರಿಸುವ ಸಲುವಾಗಿ ಕೈಗೊಳ್ಳಬೇಕಾದ ಸುಧಾರಣಾ ಕ್ರಮಗಳ ಪಟ್ಟಿ ಸಹಿತ, ಸಾಮಾಜಿಕ ಪರಿಣಾಮಗಳ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸುವಂತೆ ಸಮುಚಿತ ಸರ್ಕಾರವು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವನ್ನು ಕೈಗೊಳ್ಳುವ ಪ್ರಾಧಿಕಾರವನ್ನು ಅಗತ್ಯಪಡಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಯೋಜನೆಯು ಅಥವಾ ಕಾರ್ಯಕ್ರಮವು ಯಾವ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿದೆಯೋ ಆ ಪ್ರದೇಶದಲ್ಲಿ ಆ ಯೋಜನೆಯ ಅಥವಾ ಕಾರ್ಯಕ್ರಮದ ಮೇರೆಗೆ ಎಷ್ಟು ಸುಧಾರಣಾ ಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆಯೋ ಅಥವಾ ರಾಜ್ಯ ಸರ್ಕಾರದ ಯೋಜನೆಯು ಅಥವಾ ಕಾರ್ಯಕ್ರಮವು ಭೂಸ್ವಾಧೀನಕ್ಕೆ ಒಳಪಟ್ಟ ಯಾವ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿದೆಯೋ ಆ ಪ್ರದೇಶದಲ್ಲಿ ಆ ಯೋಜನೆಯ ಅಥವಾ ಕಾರ್ಯಕ್ರಮದ ಮೇರೆಗೆ ಎಷ್ಟು ಸುಧಾರಣಾ ಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆಯೋ ಅದಕ್ಕಿಂತಲೂ ಕಡಿಮೆ ಇರತಕ್ಕದ್ದು.

**5. ಸಾಮಾಜಿಕ ಪರಿಣಾಮ ನಿರ್ಧರಣೆಯ ಸಮಯದಲ್ಲಿ ಸಾರ್ವಜನಿಕರ ಅಹವಾಲನ್ನು ಆಲಿಸುವುದು.–** ಪ್ರಕರಣ 4ರ ಮೇರೆಗೆ ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಸಿದ್ಧಪಡಿಸಬೇಕಾದಾಗ, ಬಾಧಿತ ಕುಟುಂಬಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಸಲುವಾಗಿ ಮತ್ತು ಅವುಗಳನ್ನು ದಾಖಲಿಸಿಕೊಳ್ಳುವ ಸಲುವಾಗಿ ಮತ್ತು ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯಲ್ಲಿ ಅವುಗಳನ್ನು ಸೇರಿಸಿಕೊಳ್ಳುವ ಸಲುವಾಗಿ ಸಾರ್ವಜನಿಕರ ಅಹವಾಲನ್ನು ಆಲಿಸಲು, ದಿನಾಂಕ, ಸಮಯ, ಸ್ಥಳದ ಬಗ್ಗೆ ಸಾಕಷ್ಟು ಪ್ರಚಾರ ಕೊಟ್ಟ ನಂತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವ ಪ್ರದೇಶದಲ್ಲಿ ಸಾರ್ವಜನಿಕರ ಅಹವಾಲನ್ನು ಆಲಿಸುವ ಕಾರ್ಯವನ್ನು ಮಾಡಲಾಗಿದೆ ಎಂಬುದನ್ನು ಸಮುಚಿತ ಸರ್ಕಾರವು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**6. ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಪ್ರಕಟಣೆ.–** (1) ಪ್ರಕರಣ 4ರ ಉಪಪ್ರಕರಣ (6)ರಲ್ಲಿ ಹೇಳಿರುವ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ವರದಿಯನ್ನು ಮತ್ತು ಸಾಮಾಜಿಕ ಪರಿಣಾಮ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಿರುವುದನ್ನು ಮತ್ತು ಸಂದರ್ಭಾನುಸಾರ, ಪಂಚಾಯಿತಿಗೆ, ಪುರಸಭೆಗೆ ಅಥವಾ ನಗರ ಪಾಲಿಕೆಗೆ ಮತ್ತು ಜಿಲ್ಲಾ

ಕಲೆಕ್ಟರ್‌ನ ಕಚೇರಿಗೆ ಸಬ್‌–ಡಿವಿಷನಲ್ ಮ್ಯಾಜಿಸ್ಟ್ರೇಟ್‌ನ ಕಚೇರಿಗೆ ಮತ್ತು ತಹಸೀಲ್ ಕಚೇರಿಗೆ ಸ್ಥಳೀಯ ಭಾಷೆಯಲ್ಲಿ ಒದಗಿಸಲಾಗಿರುವುದನ್ನು ಸಮುಚಿತ ಸರ್ಕಾರವು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಪ್ರದೇಶಗಳಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಮುಚಿತ ಸರ್ಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

(2) ಪರಿಸರದ ಮೇಲಾಗುವ ಪರಿಣಾಮದ ನಿರ್ಧರಣೆಯನ್ನು ಕೈಗೊಳ್ಳುವಲ್ಲಿ, ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಪ್ರತಿಯನ್ನು, ಪರಿಸರದ ಮೇಲಾಗುವ ಪರಿಣಾಮದ ನಿರ್ಧರಣೆ ಕಾರ್ಯವನ್ನು ಕೈಗೊಳ್ಳಲು ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಪರಿಣಾಮ ನಿರ್ಧರಣೆ ಏಜೆನ್ಸಿಗೆ ಒದಗಿಸತಕ್ಕದ್ದು.

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಯಾವ ನೀರಾವರಿ ಯೋಜನೆಗಳಿಗೆ ಪರಿಸರ ಪರಿಣಾಮ ನಿರ್ಧರಣಾ ಪ್ರಕ್ರಿಯೆಯ ಅಗತ್ಯವಿದೆಯೋ ಆ ನೀರಾವರಿ ಯೋಜನೆಗಳಿಗೆ, ಸಾಮಾಜಿಕ ಪರಿಣಾಮ ನಿರ್ಧರಣೆಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

### ಬಿ. ತಜ್ಞರ ತಂಡದಿಂದ ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಪರಾಮರ್ಶೆ

**7. ತಜ್ಞರ ತಂಡದಿಂದ ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಪರಾಮರ್ಶೆ.–** (1) ಸಮುಚಿತ ಸರ್ಕಾರವು, ತಾನು ರಚಿಸುವ ಬಹು ವಿಷಯ ತಜ್ಞರ ಒಂದು ಸ್ವತಂತ್ರ ತಂಡವು ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಮೌಲ್ಯ ನಿರ್ಣಯ ಮಾಡಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ರಚಿಸಿದ ತಜ್ಞರ ತಂಡದಲ್ಲಿ ಈ ಮುಂದೆ ಹೇಳಿರುವವರು ಇರತಕ್ಕದ್ದು, ಎಂದರೆ:–

(ಎ) ಇಬ್ಬರು ಅಧಿಕಾರೇತರ ಸಮಾಜ ವಿಜ್ಞಾನಿಗಳು;

(ಬಿ) ಸಂದರ್ಭಾನುಸಾರ, ಪಂಚಾಯಿತಿಯ, ಗ್ರಾಮ ಸಭೆಯ, ಪುರಸಭೆಯ ಅಥವಾ ನಗರ ಪಾಲಿಕೆಯ ಇಬ್ಬರು ಪ್ರತಿನಿಧಿಗಳು;

(ಸಿ) ಪುನರ್‌ವಸತಿ ವಿಷಯದಲ್ಲಿ ನುರಿತ ಇಬ್ಬರು ತಜ್ಞರು;

(ಡಿ) ಪ್ರಾಜೆಕ್ಟ್‌ಗೆ ಸಂಬಂಧಿಸಿದ ವಿಷಯದಲ್ಲಿ ನುರಿತ ಒಬ್ಬರು ತಾಂತ್ರಿಕ ತಜ್ಞರು.

(3) ಸಮುಚಿತ ಸರ್ಕಾರವು, ತಜ್ಞರ ತಂಡದ ಸದಸ್ಯರುಗಳ ಪೈಕಿ ಒಬ್ಬನನ್ನು ಆ ತಂಡದ ಅಧ್ಯಕ್ಷನನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ರಚಿತವಾದ ತಜ್ಞರ ತಂಡವು,–

(ಎ) ಪ್ರಾಜೆಕ್ಟ್‌ನಿಂದ ಯಾವುದೇ ಸಾರ್ವಜನಿಕ ಉದ್ದೇಶವು ಈಡೇರುವುದಿಲ್ಲವೆಂದು; ಅಥವಾ

(ಬಿ) ಪ್ರಾಜೆಕ್ಟ್‌ನಿಂದ, ಆಗುವ ಸಂಭವನೀಯ ಪ್ರಯೋಜನಗಳಿಗಿಂತಲೂ ಪ್ರಾಜೆಕ್ಟ್‌ಗೆ ತಗಲುವ ಸಾಮಾಜಿಕ ವೆಚ್ಚ ಮತ್ತು ಪ್ರಾಜೆಕ್ಟ್‌ನಿಂದ ಆಗುವ ಪ್ರತಿಕೂಲ ಸಾಮಾಜಿಕ ಪರಿಣಾಮಗಳೇ ಜಾಸ್ತಿ ಎಂದು

–ಅಭಿಪ್ರಾಯಪಟ್ಟರೆ, ಆ ಕೂಡಲೇ ಪ್ರಾಜೆಕ್ಟ್ ಅನ್ನು ಕೈಬಿಡಬೇಕೆಂದು ಮತ್ತು ಅಂಥ ಪ್ರಾಜೆಕ್ಟ್‌ಗೆ ಭೂಮಿಯ ಸ್ವಾಧೀನಕ್ಕೆ ಯಾವುದೇ ಮುಂದಿನ ಕ್ರಮ ತೆಗೆದುಕೊಳ್ಳಬಾರದೆಂದು ತಂಡವು ಅದರ ರಚನೆಯಾದ ದಿನಾಂಕದಿಂದ ಎರಡು ತಿಂಗಳ ಒಳಗೆ ಶಿಫಾರಸು ಮಾಡತಕ್ಕದ್ದು:

ಪರಂತು, ಹಾಗೆ ಶಿಫಾರಸು ಮಾಡುವುದಕ್ಕೆ ಇದ್ದ ಆಧಾರಗಳನ್ನು, ಅಂಥ ತೀರ್ಮಾನದ ವಿವರಗಳನ್ನು ಮತ್ತು ಅದಕ್ಕೆ ಕಾರಣಗಳನ್ನು ತಜ್ಞರ ತಂಡವು ಲಿಖಿತದಲ್ಲಿ ದಾಖಲಿಸತಕ್ಕದ್ದು:

ಮತ್ತು ಪರಂತು, ತಂಡವು ಹಾಗೆ ಶಿಫಾರಸ್ಸು ಮಾಡಿದ್ದರೂ ಕೂಡ, ಸಮುಚಿತ ಸರ್ಕಾರವು ಭೂಸ್ವಾಧೀನಕ್ಕೆ ಮುಂದಾದರೆ, ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿರುವುದನ್ನು ಆ ಸರ್ಕಾರವು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(5) ಉಪಪ್ರಕರಣ (1)ರ ಮೇರೆಗೆ ರಚಿತವಾದ ತಜ್ಞರ ತಂಡವು,–

(ಎ) ಪ್ರಾಜೆಕ್ಟ್‌ನಿಂದ ಯಾವುದೇ ಸಾರ್ವಜನಿಕ ಉದ್ದೇಶವು ಈಡೇರುತ್ತದೆಂದು; ಮತ್ತು

(ಬಿ) ಪ್ರಾಜೆಕ್ಟ್‌ಗೆ ಆಗುವ ವೆಚ್ಚ ಹಾಗೂ ಪ್ರಾಜೆಕ್ಟ್‌ನಿಂದ ಆಗುವ ಪ್ರತಿಕೂಲ ಸಾಮಾಜಿಕ ಪರಿಣಾಮಗಳಿಗಿಂತಲೂ ಪ್ರಾಜೆಕ್ಟ್‌ನಿಂದ ಆಗುವ ಸಂಭವನೀಯ ಪ್ರಯೋಜನಗಳೇ ಹೆಚ್ಚು ಎಂದು

– ಅಭಿಪ್ರಾಯಪಟ್ಟರೆ, ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯ ವಿಸ್ತೀರ್ಣವು, ಪ್ರಾಜೆಕ್ಟ್‌ಗೆ ಆತ್ಯೈರಾಗಿ ಕನಿಷ್ಠ ಎಷ್ಟು ವಿಸ್ತೀರ್ಣದ ಭೂಮಿಯ ಅಗತ್ಯ ಇದೆಯೋ ಅಷ್ಟೇ ವಿಸ್ತೀರ್ಣದ್ದಾಗಿದ್ದರೆ ಮತ್ತು ಪ್ರಾಜೆಕ್ಟ್‌ನ ಸ್ಥಳಾಂತರಕ್ಕೆ ಆಸ್ಪದ ಕೊಡುವಂಥ ಇತರ ಕಾರಣಗಳು ಇರದಿದ್ದರೆ ತಂಡವು ಅದರ ರಚನೆಯಾದ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ನಿರ್ದಿಷ್ಟ ಶಿಫಾರಸುಗಳನ್ನು ಮಾಡತಕ್ಕದ್ದು:

ಪರಂತು, ಹಾಗೆ ಶಿಫಾರಸು ಮಾಡುವುದಕ್ಕೆ ಇದ್ದ ಆಧಾರಗಳನ್ನು ಅಂಥ ತೀರ್ಮಾನದ ವಿವರಗಳನ್ನು ಮತ್ತು ಅದಕ್ಕೆ ಕಾರಣಗಳನ್ನು ತಜ್ಞರ ತಂಡವು ಲಿಖಿತದಲ್ಲಿ ದಾಖಲಿಸತಕ್ಕದ್ದು.

(6) ಉಪಪ್ರಕರಣ (4)ರಲ್ಲಿ ಮತ್ತು (5)ರಲ್ಲಿ ಹೇಳಿರುವ ತಜ್ಞರ ತಂಡದ ಶಿಫಾರಸುಗಳನ್ನು, ಸಂದರ್ಭಾನುಸಾರ, ಪಂಚಾಯತಿಗೆ, ಪುರಸಭೆಗೆ ಅಥವಾ ನಗರ ಪಾಲಿಕೆಗೆ ಮತ್ತು ಜಿಲ್ಲಾ ಕಲೆಕ್ಟರನ ಕಚೇರಿಗೆ, ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್ ಕಚೇರಿಗೆ ಮತ್ತು ತಹಸೀಲ್ ಕಚೇರಿಗೆ ಸಮುಚಿತ ಸರ್ಕಾರವು ಸ್ಥಳೀಯ ಭಾಷೆಯಲ್ಲಿಯೇ ಒದಗಿಸತಕ್ಕದ್ದು ಮತ್ತು ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ಸರ್ಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**8. ಸಮುಚಿತ ಸರ್ಕಾರದಿಂದ ಭೂಸ್ವಾಧೀನದ ಪ್ರಸ್ತಾವನೆಗಳ ಮತ್ತು ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಪರಿಶೀಲನೆ.–** (1) ಸಮುಚಿತ ಸರ್ಕಾರವು,–

(ಎ) ಯಾವ ಉದ್ದೇಶಿತ ಭೂಸ್ವಾಧೀನತೆಗೆ ಗುರುತಿಸಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇದೆಯೋ ಆ ಉದ್ದೇಶಿತ ಸ್ವಾಧೀನತೆಗೆ ನ್ಯಾಯೋಚಿತವಾದ ಮತ್ತು ಸದ್ಭಾವನೆ ಉಳ್ಳ ಸಾರ್ವಜನಿಕ ಉದ್ದೇಶ ಇದೆ ಎಂಬುದನ್ನು;

(ಬಿ) ಖಂಡ (ಎ)ನಲ್ಲಿ ಉಲ್ಲೇಖಿಸಿದ ಸಂಭಾವ್ಯ ಪ್ರಯೋಜನಗಳು ಮತ್ತು ಸಾಮಾಜಿಕ ಉದ್ದೇಶವು, ನಡೆಸಲಾದ ಸಾಮಾಜಿಕ ಪರಿಣಾಮ ನಿರ್ಧರಣೆಯಿಂದ ನಿರ್ಧರಿಸಲಾದಂಥ ಸಾಮಾಜಿಕ ವೆಚ್ಚಗಳಿಗಿಂತಲೂ ಮತ್ತು ಪ್ರತಿಕೂಲ ಸಾಮಾಜಿಕ ಪರಿಣಾಮಗಳಿಗಿಂತಲೂ ಮಿಗಿಲಾದವುಗಳು ಆಗಿವೆ ಎಂಬುದನ್ನು;

(ಸಿ) ಪ್ರಾಜೆಕ್ಟ್‌ಗೆ ಎಷ್ಟು ಭೂಮಿಯು ಬೇಕಾಗಿದೆಯೋ ಅಷ್ಟೇ ಕನಿಷ್ಠ ವಿಸ್ತೀರ್ಣದ ಭೂಮಿಯನ್ನು ಮಾತ್ರವೇ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂಬುದನ್ನು;

(ಡಿ) ಆ ಪ್ರದೇಶದಲ್ಲಿ ಈ ಹಿಂದೆ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯಲ್ಲಿ ಬಳಕೆಯಾಗದೆ ಉಳಿದಿರುವ ಯಾವುದೇ ಭೂಮಿ ಇಲ್ಲವೆಂಬುದನ್ನು;

(ಇ) ಈ ಹಿಂದೆ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯಲ್ಲಿ ಬಳಕೆಯಾಗದೆ ಉಳಿದಿರುವ ಯಾವುದಾದರೂ ಭೂಮಿಯನ್ನು ಅಂಥ ಸಾರ್ವಜನಿಕ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ ಎಂಬುದನ್ನು ಮತ್ತು ಅಂಥ ಸಾರ್ವಜನಿಕ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲು ಶಿಫಾರಸು ಮಾಡಲಾಗಿದೆ ಎಂಬುದನ್ನು

–ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು, ಕಲೆಕ್ಟರ್‌ನ ವರದಿ ಯಾವುವಾದರೂ ಇದ್ದರೆ ಅದನ್ನು ಮತ್ತು ತಜ್ಞರ ತಂಡವು ಸಲ್ಲಿಸಿದ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ವರದಿಯನ್ನು ಪರಿಶೀಲಿಸತಕ್ಕದ್ದು ಮತ್ತು ಎಲ್ಲ ವರದಿಗಳನ್ನು ಪರಿಶೀಲಿಸಿದ ತರುವಾಯ, ತುಂಬಾ ಜನರ ಸ್ಥಳಾಂತರಕ್ಕೆ ಆಸ್ಪದ ಆಗದಷ್ಟು ಮತ್ತು ಮೂಲ ಸೌಲಭ್ಯಗಳಿಗೆ, ಜೀವಿ ಪರಿಸರಕ್ಕೆ ತುಂಬಾ ಧಕ್ಕೆ ಆಗುವುದಕ್ಕೆ ಆಸ್ಪದ ಆಗದಷ್ಟು ಮತ್ತು ಅಲ್ಲಿ ತೊಂದರೆಗೆ ಒಳಗಾದ ಜನರ ಮೇಲೆ ತುಂಬಾ ಪ್ರತಿಕೂಲ ಪರಿಣಾಮ ಆಗುವುದಕ್ಕೆ ಆಸ್ಪದ ಆಗದಷ್ಟು ವಿಸ್ತೀರ್ಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಶಿಫಾರಸು ಮಾಡತಕ್ಕದ್ದು.

(3) ಸಮುಚಿತ ಸರ್ಕಾರದ ತೀರ್ಮಾನವನ್ನು, ಸಂದರ್ಭಾನುಸಾರ, ಪಂಚಾಯಿತಿಗೆ, ಪುರಸಭೆಗೆ ಅಥವಾ ನಗರ ಪಾಲಿಕೆಗೆ ಮತ್ತು ಜಿಲ್ಲಾ ಕಲೆಕ್ಟರ್‌ನ ಕಚೇರಿಗೆ, ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್ ಕಚೇರಿಗೆ ಮತ್ತು ತಹಸೀಲ್ ಕಚೇರಿಗೆ ಸಮುಚಿತ ಸರ್ಕಾರವು ಸ್ಥಳೀಯ ಭಾಷೆಯಲ್ಲಿಯೇ ಒದಗಿಸತಕ್ಕದ್ದು ಮತ್ತು ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ, ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಮುಚಿತ ಸರ್ಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು:

ಪರಂತು, ಪ್ರಕರಣ 2ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ, ಸಮುಚಿತ ಸರ್ಕಾರವು ಪ್ರಕರಣ 2ರ ಉಪಪ್ರಕರಣ (2)ರ ಪರಂತುಕದಲ್ಲಿ ಅಗತ್ಯಪಡಿಸಿರುವಂತೆ ಬಾಧಿತ ಕುಟುಂಬಗಳ ಒಪ್ಪಿಗೆಯನ್ನು ಮುಂಚಿತವಾಗಿಯೇ, ನಿಯಮಿಸಿದ ರೀತಿಯಲ್ಲಿ, ಪಡೆದುಕೊಂಡಿರುವುದನ್ನು ಸಹ ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**9. ಸಾಮಾಜಿಕ ಪರಿಣಾಮ ನಿರ್ಧರಣೆಗೆ ವಿನಾಯಿತಿ.–** ಪ್ರಕರಣ 40ರ ಮೇರೆಗಿನ ತುರ್ತು ಉಪಬಂಧಗಳನ್ನು ಅನ್ವಯಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದರೆ ಅಂಥ ಸಂದರ್ಭದಲ್ಲಿ, ಸಮುಚಿತ ಸರ್ಕಾರವು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನಕ್ಕೆ ವಿನಾಯಿತಿ ನೀಡಬಹುದು.

## ಅಧ್ಯಾಯ III

## ಆಹಾರ ಭದ್ರತೆ ಸಂರಕ್ಷಣೆಗೆ ವಿಶೇಷ ಉಪಬಂಧ

**10. ಆಹಾರ ಭದ್ರತೆ ಸಂರಕ್ಷಣೆಗೆ ವಿಶೇಷ ಉಪಬಂಧ.–** (1) ಉಪಪ್ರಕರಣ (2)ರಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ನೀರಾವರಿ ಸೌಲಭ್ಯ ಉಳ್ಳ, ಬಹು ಬೆಳೆ ಬೆಳೆಯುವ ಯಾವುದೇ ಭೂಮಿಯನ್ನು ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಳ್ಳತಕ್ಕದ್ದಲ್ಲ.

(2) ಅನ್ಯಮಾರ್ಗವಿಲ್ಲದೇ ಕೊನೆಯ ಪ್ರಯತ್ನವಾಗಿ ನೀರಾವರಿ ಸೌಲಭ್ಯವುಳ್ಳ ಬಹು ಬೆಳೆ ಬೆಳೆಯುವ ಭೂಮಿಯನ್ನೇ ಸ್ವಾಧೀನಪಡಿಸಿಕೊಳ್ಳಬೇಕಾದಂಥ ಅಸಾಧಾರಣ ಸಂದರ್ಭ ಸನ್ನಿವೇಶಗಳಲ್ಲಿ ಅಂಥ ಭೂಮಿಯನ್ನೇ ಸ್ವಾಧೀನಪಡಿಸಿಕೊಳ್ಳಬಹುದು, ಆದರೆ, ಉಪಪ್ರಕರಣ (1)ರ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ, ಜಿಲ್ಲೆಯಲ್ಲಿನ ಅಥವಾ ರಾಜ್ಯದಲ್ಲಿನ ಎಲ್ಲ ಪ್ರಾಜೆಕ್ಟ್‌ಗಳನ್ನು ಗಣನೆಗೆ ತೆಗೆದುಕೊಂಡಾಗ, ಬೇಕಾಗುವ ಭೂಮಿಯ ಒಟ್ಟು ವಿಸ್ತೀರ್ಣವು ಆ ರಾಜ್ಯಕ್ಕೇ ನಿರ್ದಿಷ್ಟವಾದ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಪರಿಶೀಲಿಸಿ ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದಷ್ಟು ಮಿತಿಗಳನ್ನು ಯಾವ ಸಂದರ್ಭದಲ್ಲೂ ಮೀರತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ಬಹು ಬೆಳೆಯ ನೀರಾವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಾಗ, ಅಷ್ಟೇ ವಿಸ್ತೀರ್ಣದ ಸಾಗುವಳಿ ಯೋಗ್ಯ ಬಂಜರು ಭೂಮಿಯನ್ನು ಕೃಷಿ ಉದ್ದೇಶಗಳಿಗೆ ಅಭಿವೃದ್ಧಿಪಡಿಸತಕ್ಕದ್ದು ಅಥವಾ ಸ್ವಾಧೀನಪಡಿಸಿಕೊಂಡ ಭೂಮಿಯ ಮೌಲ್ಯಕ್ಕೆ ಸಮನಾದ ಹಣವನ್ನು, ಆಹಾರ ಭದ್ರತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕೃಷಿಯಲ್ಲಿ ಹೂಡಿಕೆ ಮಾಡುವುದಕ್ಕಾಗಿ ಸಮುಚಿತ ಸರ್ಕಾರದಲ್ಲಿ ಠೇವಣಿ ಇಡತಕ್ಕದ್ದು.

(4) ಉಪಪ್ರಕರಣ (1)ರ ವ್ಯಾಪ್ತಿಗೆ ಬರದಂಥ ಭೂಮಿಯ ಸಂದರ್ಭದಲ್ಲಿ ಸ್ವಾಧೀನಪಡಿಸಿಕೊಳ್ಳುವ ಕೃಷಿ ಭೂಮಿಯ ಒಟ್ಟು ವಿಸ್ತೀರ್ಣವು, ಜಿಲ್ಲೆಯ ಅಥವಾ ರಾಜ್ಯದ ಎಲ್ಲಾ ಪ್ರಾಜೆಕ್ಟ್‌ಗಳನ್ನು ಗಣನೆಗೆ ತೆಗೆದುಕೊಂಡಾಗ, ಆ ಜಿಲ್ಲೆಯ ಅಥವಾ ರಾಜ್ಯದ ಒಟ್ಟು ನಿವ್ವಳ ಬಿತ್ತನೆ ಪ್ರದೇಶದಲ್ಲಿ, ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದಷ್ಟು ಮಿತಿಗಳನ್ನು ಯಾವುದೇ ಸಂದರ್ಭದಲ್ಲೂ ಮೀರತಕ್ಕದ್ದಲ್ಲ:

ಪರಂತು, ರೈಲು ಮಾರ್ಗಗಳು, ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು, ನೀರಾವರಿ ನಾಲೆಗಳು, ವಿದ್ಯುಚ್ಛಕ್ತಿ ಮಾರ್ಗಗಳು ಮತ್ತು ಅದೇ ಬಗೆಯವುಗಳಿಗೆ ಸಂಬಂಧಿಸಿದ ಪ್ರಾಜೆಕ್ಟ್‌ಗಳ ಸ್ವರೂಪದಂಥವುಗಳೇ, ಆದ ಪ್ರಾಜೆಕ್ಟ್‌ಗಳಿಗೆ ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ IV

## ಅಧಿಸೂಚನೆ ಮತ್ತು ಸ್ವಾಧೀನ ಪ್ರಕ್ರಿಯೆ

**11. ಪ್ರಾರಂಭಿಕ ಅಧಿಸೂಚನೆಯ ಪ್ರಕಟಣೆ ಮತ್ತು ಅಧಿಕಾರಿಗಳ ಅಧಿಕಾರಗಳು.–** (1) ಯಾವುದೇ ಪ್ರವೇಶದಲ್ಲಿರುವ ಭೂಮಿಯು ಯಾವುದೇ ಸಾರ್ವಜನಿಕ ಉದ್ದೇಶಕ್ಕೆ ಬೇಕಾಗಿದೆಯೆಂದು ಅಥವಾ ಬೇಕಾಗುವ ಸಂಭವ ಇದೆಯೆಂದು ಸಮುಚಿತ ಸರ್ಕಾರಕ್ಕೆ ಕಂಡುಬಂದರೆ, ಆ ಬಗ್ಗೆ ಅಧಿಸೂಚನೆಯನ್ನು (ಇಲ್ಲಿ ಇನ್ನು ಮುಂದೆ ಪ್ರಾರಂಭಿಕ

ಅಧಿಸೂಚನೆಯೆಂದು ಉಲ್ಲೇಖಿಸಲಾಗಿದೆ) ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯ ವಿವರಗಳ ಸಹಿತ, ಈ ಮುಂದೆ ಹೇಳಿರುವಂತೆ, ಎಂದರೆ,–

(ಎ) ರಾಜಪತ್ರದಲ್ಲಿ;

(ಬಿ) ಅಂಥ ಪ್ರದೇಶದಲ್ಲಿ ಪ್ರಸಾರದಲ್ಲಿರುವ ಎರಡು ದೈನಿಕ ಸುದ್ದಿ ಪತ್ರಿಕೆಗಳಲ್ಲಿ; ಅವುಗಳಲ್ಲಿ ಒಂದು ಪ್ರಾದೇಶಿಕ ಭಾಷೆಯದು ಆಗಿರತಕ್ಕದ್ದು;

(ಸಿ) ಸಂದರ್ಭಾನುಸಾರ, ಪಂಚಾಯತಿಯಲ್ಲಿ, ಪುರಸಭೆಯಲ್ಲಿ ಅಥವಾ ನಗರಪಾಲಿಕೆಯಲ್ಲಿ ಮತ್ತು ಜಿಲ್ಲಾ ಕಲೆಕ್ಟರ್‌ನ ಕಚೇರಿಯಲ್ಲಿ ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್ ಕಚೇರಿಯಲ್ಲಿ ಮತ್ತು ತಹಸೀಲ್ ಕಚೇರಿಯಲ್ಲಿ ಸ್ಥಳೀಯ ಭಾಷೆಯಲ್ಲಿ;

(ಡಿ) ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ

– ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(ಇ) ಸಮುಚಿತ ಸರ್ಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ನಂತರ, ಕೂಡಲೇ, ಗ್ರಾಮಮಟ್ಟದಲ್ಲಿರುವ ಆಯಾಯ ಗ್ರಾಮ ಸಭಾಗೆ ಅಥವಾ ಸಭಾಗಳಿಗೆ, ಮುನಿಸಿಪಲ್ ಪ್ರದೇಶಗಳ ಸಂದರ್ಭದಲ್ಲಿ ಪುರಸಭೆಗಳಿಗೆ ಮತ್ತು ಸಂವಿಧಾನದ ಅನುಸೂಚಿ ಆರರಲ್ಲಿ ಹೇಳಿರುವ ಪ್ರದೇಶಗಳ ಸಂದರ್ಭದಲ್ಲಿ ಸ್ವಾಯತ್ತ ಕೌನ್ಸಿಲ್‌ಗಳಿಗೆ ಭೂಸ್ವಾಧೀನದ ಎಲ್ಲ ಪ್ರಕರಣಗಳಲ್ಲಿ ಸದರಿ ಆ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಒಳಾಂಶಗಳನ್ನು, ತಿಳಿಯಪಡಿಸಲು ವಿಶೇಷವಾಗಿ ಕರೆದ ಸಭೆಯಲ್ಲಿ ಆ ಅಧಿಸೂಚನೆಯ ಒಳಾಂಶಗಳನ್ನು ತಿಳಿಯಪಡಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯು, ಒಳಗೊಂಡಿರುವ ಸಾರ್ವಜನಿಕ ಉದ್ದೇಶದ ಸ್ವರೂಪವನ್ನು ಬಾಧಿತ ವ್ಯಕ್ತಿಗಳ ಸ್ಥಳಾಂತರವನ್ನು ಅವಶ್ಯಕವಾಗಿಸಿದ ಕಾರಣಗಳನ್ನು ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ಸಾರಾಂಶವನ್ನು ಮತ್ತು ಪ್ರಕರಣ 43ರ ಮೇರೆಗೆ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಉದ್ದೇಶಗಳಿಗಾಗಿ ನೇಮಕಗೊಂಡ ಆಡಳಿತಗಾರನಿಗೆ ಸಂಬಂಧಿಸಿದ ವಿವರಗಳನ್ನು ಕುರಿತ ವಿವರಣೆಯನ್ನು ಸಹ ಒಳಗೊಂಡಿರತಕ್ಕದ್ದು.

(4) ಅಂಥ ಅಧಿಸೂಚನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ಈ ಅಧ್ಯಾಯದ ಮೇರೆಗಿನ ವ್ಯವಹರಣೆಗಳು ಪೂರ್ಣಗೊಳ್ಳುವ ಕಾಲದ ತನಕ ಯಾರೇ ವ್ಯಕ್ತಿಯು, ಪ್ರಾರಂಭಿಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಯ ಬಗ್ಗೆ ಯಾವುದೇ ವ್ಯವಹಾರವನ್ನು ಮಾಡತಕ್ಕದ್ದಲ್ಲ ಅಥವಾ ಮಾಡಿಸತಕ್ಕದ್ದಲ್ಲ ಅಥವಾ ಅಂಥ ಭೂಮಿಯ ಮೇಲೆ ಯಾವುದೇ ಋಣಭಾರಗಳನ್ನು ಸೃಜಿಸತಕ್ಕದ್ದಲ್ಲ:

ಪರಂತು ಯಾವ ಭೂಮಿಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆಯೋ ಆ ಭೂಮಿಯ ಮಾಲೀಕನು, ಸಲ್ಲಿಸಿದ ಅರ್ಜಿಯ ಮೇಲೆ ಕಲೆಕ್ಟರನು ವಿಶೇಷ ಸಂದರ್ಭ ಸನ್ನಿವೇಶಗಳಲ್ಲಿ ಆ ಸಂದರ್ಭ ಸನ್ನಿವೇಶಗಳನ್ನು ಲಿಖಿತದಲ್ಲಿ ದಾಖಲಿಸಿ, ಈ ಉಪಪ್ರಕರಣದ ಪ್ರವರ್ತನೆಯಿಂದ, ಅಂಥ ಭೂ ಮಾಲೀಕನಿಗೆ ವಿನಾಯಿತಿ ನೀಡಬಹುದು:

ಮತ್ತೂ ಪರಂತು, ಯಾರೇ ವ್ಯಕ್ತಿಯು ಈ ಉಪಬಂಧವನ್ನು ಉದ್ದೇಶ ಪೂರ್ವಕವಾಗಿಯೇ ಉಲ್ಲಂಘನೆ ಮಾಡಿದ್ದರಿಂದಾಗಿ ಅವನಿಗೆ ಉಂಟಾದ ಯಾವುದೇ ನಷ್ಟವನ್ನು ಅಥವಾ ಹಾನಿಯನ್ನು ಕಲೆಕ್ಟರ್‌ನು ತುಂಬಿಕೊಡತಕ್ಕದ್ದಲ್ಲ.

(5) ಉಪಪ್ರಕರಣ (1)ರ ಮೇರೆಗೆ ನೋಟೀಸನ್ನು ನೀಡಿದ ನಂತರ ಕಲೆಕ್ಟರ್‌ನು, ಪ್ರಕರಣ 19ರ ಮೇರೆಗೆ ಘೋಷಣೆಯನ್ನು ಹೊರಡಿಸುವುದಕ್ಕೆ ಮುಂಚೆ, ನಿಯಮಿಸಲಾದಂತೆ ಭೂ ದಾಖಲೆಗಳನ್ನು ತಹಲ್‌ವರೆಗೆ ಸಿದ್ಧಪಡಿಸುವ ಕಾರ್ಯವನ್ನು ಎರಡು ತಿಂಗಳ ಒಳಗೆ ಪೂರ್ಣಗೊಳಿಸತಕ್ಕದ್ದು.

**12. ಭೂಮಿಯ ಪ್ರಾಥಮಿಕ ಮೋಜಣಿ ಮತ್ತು ಮೋಜಣಿ ಮಾಡಲು ಅಧಿಕಾರಿಗಳಿಗೆ ಇರುವ ಅಧಿಕಾರಗಳು.–** ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿಸ್ತೀರ್ಣವನ್ನು ನಿರ್ಧರಿಸಲು ಸಮುಚಿತ ಸರ್ಕಾರಕ್ಕೆ ಸಾಧ್ಯ ಮಾಡಿಕೊಡುವ ಸಲುವಾಗಿ, ಮೋಜಣಿ ಮಾಡುವ ಉದ್ದೇಶಕ್ಕಾಗಿ ಆ ಸರ್ಕಾರದಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ಪಡೆದಿರುವಂಥ ಯಾರೇ ಅಧಿಕಾರಿಯು ಮತ್ತು ಆತನ ನೌಕರರು ಮತ್ತು ಕೆಲಸಗಾರರು,–

(ಎ) ಅಂಥ ಸ್ಥಳೀಯ ಪ್ರದೇಶದಲ್ಲಿರುವ ಯಾವುದೇ ಭೂಮಿಯನ್ನು ಪ್ರವೇಶಿಸುವುದು ಮತ್ತು ಮೋಜಣಿ ಮಾಡುವುದು ಮತ್ತು ಭೂಮಿಯ ಮಟ್ಟಗಳನ್ನು ಗುರುತು ಮಾಡುವುದು;

(ಬಿ) ಭೂಮಿಯೊಳಗೆ ಗುಂಡಿ ತೋಡುವುದು ಅಥವಾ ಕುಳಿ ಕೊರೆಯುವುದು;

(ಸಿ) ಭೂಮಿಯು ಅಂಥ ಉದ್ದೇಶಕ್ಕೆ ತಕ್ಕದ್ದಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಎಲ್ಲ ಇತರ ಕಾರ್ಯಗಳನ್ನು ಕೈಗೊಳ್ಳುವುದು;

(ಡಿ) ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯ ಎಲ್ಲೆಗಳನ್ನು ಗೊತ್ತುಪಡಿಸುವುದು ಮತ್ತು ಆ ಭೂಮಿಯಲ್ಲಿ ಮಾಡಲು ಉದ್ದೇಶಿಸಿರುವ ಕಾರ್ಯ ಸರಣಿಯನ್ನು (ಯಾವುದಾದರೂ ಇದ್ದರೆ) ಗೊತ್ತುಪಡಿಸಿಕೊಳ್ಳುವುದು;

(ಇ) ಗುರುತುಗಳನ್ನು ಹಾಕಿ ಮತ್ತು ಕಂದಕಗಳನ್ನು ತೋಡಿ, ಭೂಮಿಯ ಮಟ್ಟಗಳನ್ನು ಮತ್ತು ಎಲ್ಲೆಗಳನ್ನು ಗುರುತು ಮಾಡುವುದು ಮತ್ತು ಗೆರೆಯನ್ನು ಹಾಕುವುದು ಮತ್ತು ಅನ್ಯಥಾ ಮೋಜಣಿಯನ್ನು ಪೂರ್ಣಗೊಳಿಸಲಾಗದಿದ್ದರೆ ಭೂಮಿಯ ಮಟ್ಟಗಳನ್ನು, ಎಲ್ಲೆಗಳನ್ನು ಮತ್ತು ಗೆರೆಯನ್ನು ಗುರುತು ಮಾಡಲಾಗದಿದ್ದರೆ, ಭೂಮಿಯಲ್ಲಿ ಬೆಳೆದುನಿಂತಿರುವ ಯಾವುದೇ ಬೆಳೆಯ, ಭೂಮಿಗೆ ಹಾಕಿರುವ ಬೇಲಿಯ ಯಾವುದೇ ಭಾಗವನ್ನು ತೆಗೆದುಹಾಕುವುದು ಅಥವಾ ಕಾಡುಭೂಮಿಯ ಯಾವುದೇ ಭಾಗದಲ್ಲಿನ ಗಿಡಮರಗಳನ್ನು ಕಡಿದು ಹಾಕುವುದು.

–ಕಾನೂನುಸಮ್ಮತವಾದುದಾಗಿರತಕ್ಕದ್ದು:

ಪರಂತು, ಭೂಮಿಗೆ ಸಂಬಂಧಿಸಿದ (ಎ)ಯಿಂದ (ಇ)ವರೆಗಿನ ಖಂಡಗಳಲ್ಲಿ ಹೇಳಿರುವ ಯಾವುದೇ ಕಾರ್ಯವನ್ನು, ಭೂ ಮಾಲೀಕನು ಅಥವಾ ಭೂ ಮಾಲೀಕನು ಯಾವ ವ್ಯಕ್ತಿಗೆ ಲಿಖಿತದಲ್ಲಿ ಅಧಿಕಾರ ಕೊಟ್ಟಿರುವನೋ ಆ ವ್ಯಕ್ತಿಯು ಇಲ್ಲದಿರುವಾಗ ಮಾಡತಕ್ಕದ್ದಲ್ಲ:

ಮತ್ತು ಪರಂತು, ಮೋಜಣಿ ಮಾಡುವಾಗ ಅಲ್ಲಿ ಉಪಸ್ಥಿತನಿರಬೇಕೆಂದು ತಿಳಿಸಿ ಅಂಥ ಮೋಜಣಿಗೆ ಕನಿಷ್ಠ ಅರವತ್ತು ದಿನಗಳಿಗೆ ಮುಂಚೆ ನೋಟೀಸನ್ನು ಕೊಟ್ಟು ಸಮಂಜಸವಾದ ಒಂದು ಅವಕಾಶವನ್ನು ಭೂ ಮಾಲೀಕನಿಗೆ ಕೊಟ್ಟಿದ್ದರೆ, ಆ ಭೂ ಮಾಲೀಕನು ಅಲ್ಲಿ ಉಪಸ್ಥಿತನಿರದಿದ್ದರೂ ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳನ್ನು ಕೈಗೊಳ್ಳಬಹುದು:

ಮತ್ತೂ ಪರಂತು, ಯಾರೇ ವ್ಯಕ್ತಿಯು ಯಾವುದೇ ಕಟ್ಟಡದ ಒಳಗಡೆಗೆ ಅಥವಾ ನಿವಾಸದ ಮನೆಗೆ ಹೊಂದಿಕೊಂಡಿರುವ ಯಾವುದೇ ಆವೃತ ಅಂಗಳಕ್ಕೆ ಅಥವಾ ತೋಟಕ್ಕೆ ಪ್ರವೇಶಿಸುವ ತನ್ನ ಉದ್ದೇಶವನ್ನು ಅದರ ಅಧಿಬೋಗದಾರನಿಗೆ, ತಿಳಿಯಪಡಿಸಿರುವ ಲಿಖಿತ ನೋಟೀಸನ್ನು ಕನಿಷ್ಠ ಏಳು ದಿನಗಳಿಗೂ ಮುಂಚೆಯೇ ಕೊಡದೆಯೇ ಆ ಕಟ್ಟಡದ ಒಳಗೆ ಅಥವಾ ಅಂಗಳಕ್ಕೆ ಅಥವಾ ತೋಟಕ್ಕೆ (ಅದರ ಅಧಿಭೋಗದಾರನು) ಪ್ರವೇಶಕ್ಕೆ ಅನುಮತಿ ಕೊಟ್ಟಿದ್ದ ಹೊರತು ಪ್ರವೇಶಿಸತಕ್ಕದ್ದಲ್ಲ.

**13. ಹಾನಿಗಾಗಿ ಹಣ ಸಂದಾಯ.–** ಪ್ರಕರಣ 12ರ ಮೇರೆಗೆ ಯಾವ ಅಧಿಕಾರಿಗೆ ಅಧಿಕಾರ ನೀಡಲಾಗಿದೆಯೋ ಆ ಅಧಿಕಾರಿಯು, ಪ್ರಕರಣ 12ರ ಮೇರೆಗೆ ಪ್ರವೇಶ ಮಾಡುವ ಕಾಲದಲ್ಲಿ, ಯಾವುದೇ ಹಾನಿ ಆದದ್ದಕ್ಕೆ ಹಣ ಸಂದಾಯ ಮಾಡತಕ್ಕದ್ದು ಅಥವಾ ಹಣ ಕೊಡತಕ್ಕದ್ದು ಮತ್ತು ಸಂದಾಯ ಮಾಡಿದ ಅಥವಾ ಕೊಟ್ಟ ಹಣವು ಸಾಕಷ್ಟು ಪ್ರಮಾಣದ್ದಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ವಿವಾದವು ಉದ್ಭವಿಸಿದರೆ, ಆ ವಿವಾದವನ್ನು ಆ ಅಧಿಕಾರಿಯು ಜಿಲ್ಲಾ ಕಲೆಕ್ಟರ್‌ನ ಅಥವಾ ಜಿಲ್ಲೆಯ ಇತರ ಮುಖ್ಯ ರೆವಿನ್ಯೂ ಅಧಿಕಾರಿಯ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು ಅವನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

**14. ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯು ರದ್ದಾಗುವುದು.–** ಪ್ರಕರಣ 7ರ ಮೇರೆಗೆ ತಜ್ಞರ ತಂಡವು ಸಲ್ಲಿಸಿದ ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯನ್ನು ಪರಾಮರ್ಶೆ ಮಾಡಿದ ದಿನಾಂಕದಿಂದ ಹನ್ನೆರಡು ತಿಂಗಳ ಒಳಗಾಗಿ ಪ್ರಕರಣ 11ರ ಮೇರೆಗೆ ಪ್ರಾರಂಭಿಕ ಅಧಿಸೂಚನೆಯನ್ನು, ಹೊರಡಿಸಿರದಿದ್ದರೆ, ಅಂಥ ವರದಿಯು ರದ್ದಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಹೊಸದಾಗಿ, ಸಾಮಾಜಿಕ ಪರಿಣಾಮ ನಿರ್ಧರಣೆ ಕಾರ್ಯವನ್ನು ಪ್ರಕರಣ 11ರ ಮೇರೆಗೆ ಭೂಸ್ವಾಧೀನ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಕೈಗೊಳ್ಳತಕ್ಕದ್ದು:

ಪರಂತು, ಸದರಿ ಹನ್ನೆರಡು ತಿಂಗಳ ಅವಧಿಯನ್ನು ವಿಸ್ತರಿಸುವುದಕ್ಕೆ ಸಮರ್ಥನೆ ಒದಗಿಸುವ ಸಂದರ್ಭ, ಸನ್ನಿವೇಶಗಳು ಇವೆಯೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಅವಧಿಯನ್ನು ವಿಸ್ತರಿಸಲು ಆ ಸರ್ಕಾರಕ್ಕೆ ಅಧಿಕಾರ ಇರತಕ್ಕದ್ದು:

ಮತ್ತು ಪರಂತು, ಅವಧಿಯನ್ನು ವಿಸ್ತರಿಸಲು ಕೈಗೊಂಡ ತೀರ್ಮಾನವನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಅದನ್ನು ಅಧಿಸೂಚಿಸತಕ್ಕದ್ದು ಮತ್ತು ಅದನ್ನು ಸಂಬಂಧಪಟ್ಟ ಪ್ರಾಧಿಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**15. ಆಕ್ಷೇಪಣೆಗಳನ್ನು ಆಲಿಸುವುದು.–** (1) ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುವ ಅಥವಾ ಬೇಕಾಗುವ ಸಂಭವ ಇರುವ, ಪ್ರಕರಣ 11ರ ಉಪಪ್ರಕರಣ (1)ರ ಮೇರೆಗೆ ಅಧಿಸೂಚಿಸಿರುವ, ಯಾವುದೇ ಭೂಮಿಯಲ್ಲಿ ಹಿತಾಸಕ್ತಿ ಉಳ್ಳ ಯಾರೇ ವ್ಯಕ್ತಿಯು, ಪ್ರಾರಂಭಿಕ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ,–

(ಎ) ಸ್ವಾಧೀನಪಡಿಸಿಕೊಳ್ಳಬೇಕೆಂದಿರುವ ಭೂಮಿಯ ವಿಸ್ತೀರ್ಣದ ಬಗ್ಗೆ ಅಥವಾ ಅದರ ಸೂಕ್ತತೆಯ ಬಗ್ಗೆ;

(ಬಿ) ಸಾರ್ವಜನಿಕ ಉದ್ದೇಶ ಕುರಿತು ಕೊಟ್ಟಿರುವ ಸಮರ್ಥನೆ ಬಗ್ಗೆ;

(ಸಿ) ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯಲ್ಲಿರುವ ನಿರ್ಣಯಗಳ ಬಗ್ಗೆ

–ಆಕ್ಷೇಪಣೆ ಸಲ್ಲಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ಆಕ್ಷೇಪಣೆಯನ್ನು ಕಲೆಕ್ಟರ್‌ನಿಗೆ ಲಿಖಿತದಲ್ಲಿ ಸಲ್ಲಿಸತಕ್ಕದ್ದು ಮತ್ತು ಕಲೆಕ್ಟರ್‌ನು, ಆಕ್ಷೇಪಣೆಕಾರನಿಗೆ, ಖುದ್ದಾಗಿ ಆತನೇ ಅಥವಾ ಅವನು ಯಾರಿಗೆ ಅಧಿಕಾರ ಕೊಟ್ಟಿರುವನೋ ಆ ಯಾರೇ ವ್ಯಕ್ತಿಯ ಅಥವಾ ಅಡ್ವೋಕೇಟ್‌ನ ಮೂಲಕ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಡತಕ್ಕದ್ದು ಮತ್ತು ಎಲ್ಲ ಅಂಥ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಹೆಚ್ಚಿನ ವಿಚಾರಣೆ ಮಾಡುವುದು ಅವಶ್ಯಕವೆಂದು ಕಲೆಕ್ಟರ್‌ನು ಭಾವಿಸಿದರೆ ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಪ್ರಕರಣ 11ರ ಉಪಪ್ರಕರಣ (1)ರ ಮೇರೆಗೆ ಯಾವ ಭೂಮಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿದೆಯೋ ಆ ಭೂಮಿಯ ಬಗ್ಗೆ ವರದಿಯನ್ನು ಅಥವಾ ಅಂಥ ಭೂಮಿಯ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ವರದಿಗಳನ್ನು ಕಲೆಕ್ಟರ್‌ನು ಆಕ್ಷೇಪಣೆಗಳ ಬಗ್ಗೆ ತನ್ನ ಶಿಫಾರಸುಗಳ ಸಹಿತ, ಭೂಸ್ವಾಧೀನಕ್ಕೆ ತಗಲುವ ಅಂದಾಜು ವೆಚ್ಚವನ್ನು ತೋರಿಸಿರುವ ಪ್ರತ್ಯೇಕ ವರದಿಯ ಸಹಿತ, ತಾನು ನಡೆಸಿದ ನಡವಳಿಗಳ ದಾಖಲೆ ಸಹಿತ, ಎಷ್ಟು ಕುಟುಂಬಗಳಿಗೆ ಪುನರ್‌ವ್ಯವಸ್ಥೆ ಕಲ್ಪಿಸಬೇಕಾದ ಸಂಭವ ಇದೆಯೋ ಅಂಥ ಕುಟುಂಬಗಳ ಸಂಖ್ಯೆಗೆ ಸಂಬಂಧಿಸಿದ ವಿವರಗಳ ಸಹಿತ ಸಮುಚಿತ ಸರ್ಕಾರಕ್ಕೆ, ಆ ಸರ್ಕಾರದ ತೀರ್ಮಾನಕ್ಕಾಗಿ ಸಲ್ಲಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ಸಲ್ಲಿಸಿದ ಆಕ್ಷೇಪಣೆಗಳ ಮೇಲೆ ಸಮುಚಿತ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**16. ಆಡಳಿತಗಾರನಿಂದ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಸಿದ್ಧತೆ.–** (1) ಕಲೆಕ್ಟರನು, ಪ್ರಕರಣ 11ರ ಉಪಪ್ರಕರಣ (1)ರ ಮೇರೆಗೆ ಪ್ರಾರಂಭಿಕ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ, ಪುನರ್‌ವ್ಯವಸ್ಥೆ ಮತ್ತು ಪುನರ್‌ವಸತಿ ಆಡಳಿತಗಾರನು, ಬಾಧಿತ ಕುಟುಂಬಗಳ ಸಮೀಕ್ಷೆಯನ್ನು ಹಾಗೂ ಗಣತಿ ಕಾರ್ಯವನ್ನು ನಿಯಮಿಸಿದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಕೈಗೊಳ್ಳತಕ್ಕದ್ದು. ಅದರಲ್ಲಿ ಈ ಮುಂದಿನವುಗಳು ಸೇರಿರತಕ್ಕದ್ದು.–

(ಎ) ಪ್ರತಿಯೊಂದು ಬಾಧಿತ ಕುಟುಂಬದಿಂದ ಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಿಗಳ ಮತ್ತು ಸ್ಥಿರ ಸ್ವತ್ತುಗಳ ವಿವರಗಳು;

(ಬಿ) ಯಾರ ಜೀವನಾಧಾರವು ಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಿಗಳ ಮೇಲೆ ಪ್ರಧಾನವಾಗಿ ಅವಲಂಬಿತವಾಗಿದೆಯೋ, ಆ ಭೂಮಿಯನ್ನು ಕಳೆದುಕೊಂಡ ಅಂಥ ವ್ಯಕ್ತಿಗಳ ಮತ್ತು ಭೂ ರಹಿತರ ಜೀವನಾಧಾರವು ಎಷ್ಟು ನಷ್ಟವಾಗಿದೆ ಎನ್ನುವುದರ ಬಗ್ಗೆ ವಿವರಗಳು;

(ಸಿ) ಬಾಧಿತ ಕುಟುಂಬಗಳಿಗೆ ಪುನರ್‌ವ್ಯವಸ್ಥೆ ಕಲ್ಪಿಸಬೇಕಾದಲ್ಲಿ ಸಾರ್ವಜನಿಕರ ಪ್ರಯೋಜನಕ್ಕಾಗಿಯೇ ಇರುವ ಯಾವ ಆಸ್ತಿ ಪಾಸ್ತಿಗಳನ್ನು ಮತ್ತು ಸರ್ಕಾರಿ ಕಟ್ಟಡಗಳನ್ನು ಬಳಸಿಕೊಳ್ಳಲಾಗಿದೆಯೋ ಅಥವಾ ಬಳಸಿಕೊಳ್ಳುವ ಸಂಭವ ಇದೆಯೋ ಅಂಥ ಆಸ್ತಿ ಪಾಸ್ತಿಗಳ ಮತ್ತು ಸರ್ಕಾರಿ ಕಟ್ಟಡಗಳ ಪಟ್ಟಿ;

(ಡಿ) ಬಾಧಿತ ಕುಟುಂಬಗಳಿಗೆ ಪುನರ್‌ವ್ಯವಸ್ಥೆ ಕಲ್ಪಿಸಬೇಕಾದಲ್ಲಿ ಯಾವ ಯಾವ ನಾಗರಿಕ ಸೌಲಭ್ಯಗಳನ್ನು ಮತ್ತು ಮೂಲ ಸೌಕರ್ಯಗಳನ್ನು ಏರ್ಪಾಡು ಮಾಡಲಾಗಿದೆಯೋ ಅಥವಾ ಏರ್ಪಾಡು ಮಾಡುವ ಸಂಭವ ಇದೆಯೋ ಅಂಥ ಸೌಲಭ್ಯಗಳ ಮತ್ತು ಸೌಕರ್ಯಗಳ ವಿವರಗಳು;

(ಇ) ಸ್ವಾಧೀನಪಡಿಸಿಕೊಳ್ಳುತ್ತಿರುವ ಯಾವುದೇ ಸಾಮಾನ್ಯ ಸ್ವತ್ತು ಸಂಪನ್ಮೂಲಗಳ ವಿವರಗಳು.

(2) ಆಡಳಿತಗಾರರನು, ಉಪಪ್ರಕರಣ (1)ರ ಮೇರೆಗೆ ಕೈಗೊಂಡ ಸಮೀಕ್ಷೆಯ ಮತ್ತು ಗಣತಿಯ ಆಧಾರದ ಮೇಲೆ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಕರಡನ್ನು ನಿಯಮಿಸಿದಂತೆ ಸಿದ್ಧಪಡಿಸತಕ್ಕದ್ದು ಮತ್ತು ಯಾವ ಭೂ ಮಾಲೀಕನ ಅಥವಾ ಭೂ ರಹಿತನ ಜೀವನಾಧಾರಗಳು ಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಿಗಳ ಮೇಲೆ ಪ್ರಧಾನವಾಗಿ ಅವಲಂಬಿತವಾಗಿದೆಯೋ ಅಂಥ ಪ್ರತಿಯೊಬ್ಬ ಭೂ ಮಾಲೀಕನಿಗೆ ಅಥವಾ ಭೂ ರಹಿತನಿಗೆ ಪ್ರಾಪ್ತವಾಗುವಂಥ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಹಕ್ಕುಗಳ ವಿವರಗಳು ಮತ್ತು ಬಾಧಿತ ಕುಟುಂಬಗಳಿಗೆ ಪುನರ್ ವ್ಯವಸ್ಥೆ ಕಲ್ಪಿಸಬೇಕಾದ ಸಂದರ್ಭದಲ್ಲಿ,–

(i) ಪುನರ್‌ವ್ಯವಸ್ಥೆ ಕಲ್ಪಿಸುವ ಪ್ರದೇಶದಲ್ಲಿ ಒದಗಿಸಬೇಕಾದ ಸರ್ಕಾರಿ ಕಟ್ಟಡಗಳ ಪಟ್ಟಿ;

(ii) ಪುನರ್‌ವ್ಯವಸ್ಥೆ ಕಲ್ಪಿಸುವ ಪ್ರದೇಶದಲ್ಲಿ ಯಾವ ಯಾವ ನಾಗರಿಕ ಸೌಲಭ್ಯಗಳನ್ನು ಮತ್ತು ಮೂಲ ಸೌಕರ್ಯಗಳನ್ನು ಒದಗಿಸಬೇಕೋ ಆ ನಾಗರಿಕ ಸೌಲಭ್ಯಗಳ ಮತ್ತು ಮೂಲ ಸೌಕರ್ಯಗಳ ವಿವರಗಳು

– ಆ ಯೋಜನೆಯ ಕರಡಿನಲ್ಲಿ ಸೇರಿರತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಹೇಳಿರುವ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಕರಡಿನಲ್ಲಿ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯನ್ನು ಜಾರಿಗೆ ತರಲು ಹಾಕಿಕೊಂಡಿರುವ ಕಾಲಮಿತಿಯ ಬಗ್ಗೆ ನಮೂದು ಇರತಕ್ಕದ್ದು.

(4) ಉಪಪ್ರಕರಣ (2)ರಲ್ಲಿ ಹೇಳಿರುವ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಕರಡನ್ನು ಈ ಯೋಜನೆಗೆ ಒಳಪಡುವ ಪ್ರದೇಶದಲ್ಲಿ ಸ್ಥಳೀಯವಾಗಿ ವ್ಯಾಪಕ ಪ್ರಚಾರದ ಮೂಲಕ ತಿಳಿಯಪಡಿಸತಕ್ಕದ್ದು ಮತ್ತು ಸಂಬಂಧಪಟ್ಟ ಗ್ರಾಮಸಭಾಗಳಲ್ಲಿ ಮತ್ತು ಪುರಸಭೆಗಳಲ್ಲಿ ಅದರ ಬಗ್ಗೆ ಚರ್ಚೆ ಮಾಡತಕ್ಕದ್ದು.

(5) ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ ಸಾರ್ವಜನಿಕರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಸಲುವಾಗಿ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಸಾಕಷ್ಟು ಪ್ರಚಾರ ಮಾಡಿದ ನಂತರ ನಿಯಮಿಸಬಹುದಾದಂಥ ರೀತಿಯಲ್ಲಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಕಾರ್ಯಕ್ರಮವನ್ನು ಜರುಗಿಸತಕ್ಕದ್ದು:

ಪರಂತು, ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಗ್ರಾಮ ಸಭಾಗಳಿದ್ದರೆ ಅಥವಾ ಪುರಸಭೆಗಳಿದ್ದರೆ, ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯಲ್ಲಿ ಶೇಕಡಾ ಇಪ್ಪತ್ತೈದಕ್ಕಿಂತಲೂ ಹೆಚ್ಚು ಭೂಮಿಯು ಯಾವ ಗ್ರಾಮಸಭಾದ ವ್ಯಾಪ್ತಿಗೆ ಅಥವಾ ಪುರಸಭೆಯ ವ್ಯಾಪ್ತಿಗೆ ಸೇರಿದೆಯೋ ಆ ಪ್ರತಿಯೊಂದು ಗ್ರಾಮಸಭಾದಲ್ಲಿ ಅಥವಾ ಆ ಪ್ರತಿಯೊಂದು ಪುರಸಭೆಯಲ್ಲಿ ಸಾರ್ವಜನಿಕರು ಅಭಿಪ್ರಾಯ ಸಂಗ್ರಹಣೆ ಕಾರ್ಯಕ್ರಮವನ್ನು ಜರುಗಿಸತಕ್ಕದ್ದು:

ಮತ್ತು ಪರಂತು, ಪಂಚಾಯತ್‌ಗಳ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996 (1996ರ 40)ರ ಉಪಬಂಧಗಳಿಗೆ ಅನುಸಾರವಾಗಿ ಅನುಸೂಚಿತ ಪ್ರದೇಶಗಳಲ್ಲಿ ಗ್ರಾಮಸಭಾಗಳೊಂದಿಗೆ ಸಮಾಲೋಚನೆ ನಡೆಸತಕ್ಕದ್ದು.

(6) ಆಡಳಿತಗಾರನು, ಸಾರ್ವಜನಿಕ ಅಭಿಪ್ರಾಯಗಳ ಸಂಗ್ರಹಣೆ ಕಾರ್ಯಕ್ರಮವು ಮುಗಿದ ಮೇಲೆ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಕರಡನ್ನು ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಯ ಸಮಯದಲ್ಲಿ ಸಾರ್ವಜನಿಕರು ಮುಂದಿಟ್ಟ ಕ್ಲೇಮುಗಳ ಬಗ್ಗೆ ಮತ್ತು ಎತ್ತಿದ ಆಕ್ಷೇಪಣೆಗಳ ಬಗ್ಗೆ ನಿರ್ದಿಷ್ಟ ವರದಿಯ ಸಹಿತ, ಜಿಲ್ಲಾ ಕಲೆಕ್ಟರ್‌ನಿಗೆ ಸಲ್ಲಿಸತಕ್ಕದ್ದು.

**17. ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಪುನರ್ ಪರಿಶೀಲನೆ.–** (1) ಪ್ರಕರಣ 16ರ ಉಪಪ್ರಕರಣ (6)ರ ಮೇರೆಗೆ ಆಡಳಿತಗಾರನು ಸಲ್ಲಿಸಿದ ಯೋಜನೆಯ ಕರಡನ್ನು ಪ್ರಕರಣ 45ರ ಮೇರೆಗೆ ರಚಿತವಾಗಿರುವ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕುರಿತ ಪ್ರಾಜೆಕ್ಟ್ ಮಟ್ಟದ ಸಮಿತಿಯೊಂದಿಗೆ ಕಲೆಕ್ಟರನು ಪುನರ್‌ಪರಿಶೀಲನೆ ಮಾಡತಕ್ಕದ್ದು.

(2) ಕಲೆಕ್ಟರ್‌ನು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಕರಡನ್ನು ತನ್ನ ಸಲಹೆಗಳ ಸಹಿತ, ಅನುಮೋದನೆಗಾಗಿ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಆಯುಕ್ತನಿಗೆ ಸಲ್ಲಿಸತಕ್ಕದ್ದು.

**18. ಅನುಮೋದಿತ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಪರಿಯೋಜನೆಯನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದು.–** ಆಯುಕ್ತನು, ಅನುಮೋದಿತ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯನ್ನು, ಸಂದರ್ಭಾನುಸಾರ, ಪಂಚಾಯಿತಿಗೆ, ಪುರಸಭೆಗೆ ಅಥವಾ ನಗರ ಪಾಲಿಕೆಗೆ ಮತ್ತು ಜಿಲ್ಲಾ ಕಲೆಕ್ಟರ್‌ನ ಕಚೇರಿಗೆ, ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್ ಕಚೇರಿಗೆ ಮತ್ತು ತಹಸೀಲ್ ಕಚೇರಿಗೆ, ಸ್ಥಳೀಯ ಭಾಷೆಯಲ್ಲಿಯೇ ಒದಗಿಸುವಂತೆ ಮಾಡತಕ್ಕದ್ದು ಮತ್ತು ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಯೋಜನೆಗೆ ಒಳಪಡುವ ಪ್ರದೇಶಗಳಲ್ಲಿ ಅದನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದನ್ನು ಸಮುಚಿತ ಸರ್ಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**19. ಘೋಷಣೆಯ ಮತ್ತು ಪುನರ್‌ವಸತಿ ಹಾಗೂ ಪುನರ್‌ವ್ಯವಸ್ಥೆ ಯೋಜನೆಯ ಸಾರಾಂಶದ ಪ್ರಕಟಣೆ.–** (1) ಪ್ರಕರಣ 15ರ ಉಪಪ್ರಕರಣ (2)ರ ಮೇರೆಗೆ ವರದಿಯನ್ನೇನಾದರೂ ಸಲ್ಲಿಸಿದ್ದರೆ ಅದನ್ನು ಪರಿಶೀಲಿಸಿದ ತರುವಾಯ, ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ನಿರ್ದಿಷ್ಟ ಭೂಮಿಯು ಬೇಕಾಗಿದೆಯೆನ್ನುವುದು ಸಮುಚಿತ ಸರ್ಕಾರಕ್ಕೆ ಮನವರಿಕೆಯಾದರೆ, ಆ ಬಗ್ಗೆ ಬಾಧಿತ ಕುಟುಂಬಗಳ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಉದ್ದೇಶಗಳಿಗಾಗಿ 'ಪುನರ್‌ವ್ಯವಸ್ಥೆ ಪ್ರದೇಶ' ಎಂದು ಗುರುತಿಸಿದ ಪ್ರದೇಶದ ಘೋಷಣೆ ಸಹಿತ, ಅಂಥ ಸರ್ಕಾರದ ಕಾರ್ಯದರ್ಶಿಯ ಅಥವಾ ಸರ್ಕಾರದ ಆದೇಶಗಳನ್ನು ಪ್ರಮಾಣೀಕರಿಸಲು ವಿಧ್ಯುಕ್ತವಾಗಿ ಅಧಿಕಾರ ಪಡೆದಿರುವಂಥ ಯಾರೇ ಅಧಿಕಾರಿಯು ಸಹಿ ಮಾಡಿರುವ ಮತ್ತು ಮೊಹರು ಹಾಕಿರುವ ಘೋಷಣೆಯನ್ನು ಮಾಡತಕ್ಕದ್ದು ಮತ್ತು ಒಂದೇ ವರದಿಯನ್ನು ಸಲ್ಲಿಸಿದ್ದರೂ ಅಥವಾ ಬೇರೆ ಬೇರೆ ವರದಿಗಳನ್ನು ಸಲ್ಲಿಸಿದ್ದರೂ (ಎಲ್ಲೆಲ್ಲಿ ಅಗತ್ಯವೋ) ಅದೇ ಪ್ರಾಥಮಿಕ ಅಧಿಸೂಚನೆಯಲ್ಲಿ ಹೇಳಿರುವ ಯಾವುದೇ ಭೂಮಿಯ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಬೇರೆ ಬೇರೆ ಘೋಷಣೆಗಳನ್ನು ಮಾಡಬಹುದು.

(2) ಕಲೆಕ್ಟರ್‌ನು ಉಪಪ್ರಕರಣ (1)ರಲ್ಲಿ ಹೇಳಿರುವ ಘೋಷಣೆಯೊಂದಿಗೆ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಸಾರಾಂಶವನ್ನು ಪ್ರಕಟಿಸತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ ಯಾವುದೇ ಘೋಷಣೆಯನ್ನು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಸಾರಾಂಶವನ್ನು, ಅಂಥ ಘೋಷಣೆಯ ಸಹಿತ ಪ್ರಕಟಿಸಿದ ಹೊರತು ಮಾಡತಕ್ಕದ್ದಲ್ಲ:

ಮತ್ತು ಪರಂತು, ಭೂಸ್ವಾಧೀನಕ್ಕೆ ತಗಲುವ ವೆಚ್ಚದ ಬಾಬ್ತು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ಹಣವನ್ನು, ಅಗತ್ಯ ನಿಕಾಯವು ಪೂರ್ಣವಾಗಿ ಅಥವಾ ಭಾಗಶಃ ಠೇವಣಿ ಮಾಡಿದ್ದ ಹೊರತು, ಈ ಉಪಪ್ರಕರಣದ ಮೇರೆಗೆ ಯಾವುದೇ ಘೋಷಣೆಯನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಪ್ರಕರಣ 11ರ ಮೇರೆಗೆ ಪ್ರಾಥಮಿಕ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಒಳಗೆ ಘೋಷಣೆಯನ್ನು ಪ್ರಕಟಿಸಲು ಸಮುಚಿತ ಸರ್ಕಾರಕ್ಕೆ ಸಾಧ್ಯ ಮಾಡಿಕೊಡುವ ಸಲುವಾಗಿ, ಅಗತ್ಯ ನಿಕಾಯದ ಹಣವನ್ನು ಕೂಡಲೇ ಠೇವಣಿ ಮಾಡತಕ್ಕದ್ದು.

(3) ಯಾವ ಪ್ರಾಜೆಕ್ಟ್‌ಗಳಿಗೆ ಹಂತ ಹಂತವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಪ್ರಾಜೆಕ್ಟ್‌ಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನ ಅರ್ಜಿಯಲ್ಲೇ ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ವಿವಿಧ ಹಂತಗಳನ್ನು ನಿರ್ದಿಷ್ಟಪಡಿಸಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಹಂತಗಳಿಗೆ ಅನುಸಾರವಾಗಿಯೇ ಎಲ್ಲ ಘೋಷಣೆಗಳನ್ನು ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಹೇಳಿರುವ ಪ್ರತಿಯೊಂದು ಘೋಷಣೆಯನ್ನು, ಈ ಮುಂದೆ ಹೇಳಿರುವ ರೀತಿಯಲ್ಲಿ, ಎಂದರೆ:–

(ಎ) ರಾಜಪತ್ರದಲ್ಲಿ;

(ಬಿ) ಅಂಥ ಪ್ರದೇಶದಲ್ಲಿ ಸ್ಥಳೀಯವಾಗಿ ಪ್ರಸಾರದಲ್ಲಿರುವ ಎರಡು ದೈನಿಕ ಸುದ್ದಿ ಪತ್ರಿಕೆಗಳಲ್ಲಿ; ಈ ಎರಡರಲ್ಲಿ ಒಂದು ಪತ್ರಿಕೆ ಪ್ರಾದೇಶಿಕ ಭಾಷೆಯದಾಗಿರತಕ್ಕದ್ದು;

(ಸಿ) ಸಂದರ್ಭಾನುಸಾರ, ಪಂಚಾಯಿತಿಯಲ್ಲಿ, ಪುರಸಭೆಯಲ್ಲಿ ಅಥವಾ ನಗರ ಪಾಲಿಕೆಯಲ್ಲಿ ಮತ್ತು ಜಿಲ್ಲಾ ಕಲೆಕ್ಟರ್‌ನ, ಸಬ್–ಡಿವಿಷನಲ್ ಮ್ಯಾಜಿಸ್ಟ್ರೇಟ್‌ನ ಮತ್ತು ತಹಸೀಲ್ ಕಚೇರಿಗಳಲ್ಲಿ

–ಪ್ರಕಟಿಸತಕ್ಕದ್ದು.

(ಡಿ) ಸಮುಚಿತ ಸರ್ಕಾರದ ವೆಬ್‌ಸೈಟ್‌ಗೆ ಹಾಕತಕ್ಕದ್ದು.

(ಇ) ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ ಸಹ ನಿಯಮಿಸಬಹುದಾದಂಥ ರೀತಿಯಲ್ಲಿ

– ಪ್ರಕಟಿಸತಕ್ಕದ್ದು.

(5) ಉಪಪ್ರಕರಣ (1)ರಲ್ಲಿ ಹೇಳಿರುವ ಪ್ರತಿಯೊಂದು ಘೋಷಣೆಯಯಲ್ಲಿ,–

(ಎ) ಭೂಮಿಯು ಯಾವ ಜಿಲ್ಲೆಯಲ್ಲಿ ಅಥವಾ ಇತರ ಪ್ರಾದೇಶಿಕ ವಿಭಾಗದಲ್ಲಿ ಇದೆಯೋ ಆ ಜಿಲ್ಲೆಯನ್ನು ಅಥವಾ ವಿಭಾಗವನ್ನು;

(ಬಿ) ಭೂಮಿ ಯಾವ ಉದ್ದೇಶಕ್ಕಾಗಿ ಬೇಕಾಗಿದೆಯೋ ಆ ಉದ್ದೇಶವನ್ನು, ಭೂಮಿಯ ಅಂದಾಜು ವಿಸ್ತೀರ್ಣವನ್ನು; ಮತ್ತು

(ಸಿ) ಭೂಮಿಗೆ ಸಂಬಂಧಿಸಿದಂತೆ ನಕ್ಷೆಯನ್ನೇನಾದರೂ ಸಿದ್ಧಪಡಿಸಿದ್ದರೆ ಆ ನಕ್ಷೆಯನ್ನು, ಹಣ ಸಂದಾಯ ಮಾಡದೇ ಯಾವ ಸ್ಥಳದಲ್ಲಿ ಪರಿಶೀಲಿಸಬಹುದೋ ಆ ಸ್ಥಳವನ್ನು

– ಸೂಚಿಸಿರತಕ್ಕದ್ದು.

(6) ಉಪಪ್ರಕರಣ (1)ರಲ್ಲಿ ತಿಳಿಸಿದ ಘೋಷಣೆಯು, ಭೂಮಿಯು ಸಾರ್ವಜನಿಕ ಉದ್ದೇಶಕ್ಕೆ ಬೇಕಾಗಿದೆ ಎಂಬುದರ ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು ಮತ್ತು ಅಂಥ ಘೋಷಣೆಯನ್ನು ಮಾಡಿದ ನಂತರ ಸಮುಚಿತ ಸರ್ಕಾರವು, ಈ ಅಧಿನಿಯಮದ ಮೇರೆಗೆ ನಿರ್ದಿಷ್ಟಪಡಿಸಿದಂಥ ರೀತಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು.

(7) ಪ್ರಾರಂಭಿಕ ಅಧಿಸೂಚನೆಯ ದಿನಾಂಕದಿಂದ ಹನ್ನೆರಡು ತಿಂಗಳುಗಳೊಳಗೆ ಉಪಪ್ರಕರಣ (1)ರ ಮೇರೆಗೆ ಯಾವುದೇ ಘೋಷಣೆಯನ್ನು ಮಾಡದಿದ್ದರೆ, ಆಗ, ಅಂಥ ಅಧಿಸೂಚನೆಯು ರದ್ದಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ತಿಳಿಸಿರುವ ಅವಧಿಯನ್ನು ಲೆಕ್ಕಹಾಕುವಾಗ, ಯಾವುದೇ ನ್ಯಾಯಾಲಯದ ಆದೇಶದ ಮೂಲಕ ಯಾವುದೇ ತಡೆಯಾಜ್ಞೆಯನ್ನು ಅಥವಾ ನಿರ್ಬಂಧಕಾಜ್ಞೆಯನ್ನು ವಿಧಿಸಿರುವ ಕಾರಣದಿಂದಾಗಿ ಭೂಸ್ವಾಧೀನ ವ್ಯವಹರಣೆಗಳನ್ನು ಯಾವ ಅವಧಿಯಲ್ಲಿ ತಡೆಹಿಡಿಯಲಾಗಿತ್ತೋ ಆ ಯಾವುದೇ ಅವಧಿಯನ್ನು ಅಥವಾ ಅವಧಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಬಿಟ್ಟುಬಿಡತಕ್ಕದ್ದು:

ಮತ್ತು ಪರಂತು, ಹನ್ನೆರಡು ತಿಂಗಳುಗಳ ಅವಧಿಯ ವಿಸ್ತರಣೆಯನ್ನು ಸಮರ್ಥಿಸುವಂಥ ಸಂದರ್ಭ ಸನ್ನಿವೇಶಗಳು ಇವೆ ಎಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಅವಧಿಯನ್ನು ವಿಸ್ತರಿಸುವ ಅಧಿಕಾರ ಸಮುಚಿತ ಸರ್ಕಾರಕ್ಕೆ ಇರತಕ್ಕದ್ದು:

ಮತ್ತೂ ಪರಂತು, ಅವಧಿಯನ್ನು ವಿಸ್ತರಿಸುವ ಅಂಥ ಯಾವುದೇ ನಿರ್ಣಯವನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಅದನ್ನು ಅಧಿಸೂಚಿಸತಕ್ಕದ್ದು ಹಾಗೂ ಸಂಬಂಧಪಟ್ಟ ಪ್ರಾಧಿಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**20. ನಿರ್ದಿಷ್ಟ ಪ್ರದೇಶಗಳನ್ನು ಗುರುತು ಮಾಡುವುದು ಒಳಗೊಂಡಂತೆ ಭೂಮಿಯನ್ನು ಗುರುತು ಮಾಡುವುದು, ಅಳತೆ ಮಾಡುವುದು ಮತ್ತು ಅದರ ನಕ್ಷೆಯನ್ನು ತಯಾರಿಸುವುದು.–** ಪ್ರಕರಣ 12ರ ಮೇರೆಗೆ ಭೂಮಿಯನ್ನು ಈಗಾಗಲೇ ಗುರುತು ಮಾಡಿರದಿದ್ದರೆ ಕಲೆಕ್ಟರ್‌ನು ಆ ಭೂಮಿಯನ್ನು ಗುರುತು ಮಾಡಿಸತಕ್ಕದ್ದು ಮತ್ತು ಅಳತೆ ಮಾಡಿಸತಕ್ಕದ್ದು ಮತ್ತು ಅದರ ಯಾವುದೇ ನಕ್ಷೆಯನ್ನು ತಯಾರಿಸಿರದಿದ್ದರೆ, ಅದರ ನಕ್ಷೆಯನ್ನು ತಯಾರು ಮಾಡಿಸತಕ್ಕದ್ದು.

**21. ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ನೋಟೀಸು.–** (1) ಕಲೆಕ್ಟರ್‌ನು, ಸಮುಚಿತ ಸರ್ಕಾರವು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ ಎಂದು ಮತ್ತು ಆ ಭೂಮಿಯಲ್ಲಿ ಹೊಂದಿರುವ ಎಲ್ಲಾ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಪರಿಹಾರದ ಮತ್ತು ಪುನರ್ ವಸತಿಯ ಮತ್ತು ಪುನರ್‌ವ್ಯವಸ್ಥೆಯ ಕ್ಲೇಮುಗಳನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸಬಹುದು ಎಂದು ತಿಳಿಸಿ ಸಾರ್ವಜನಿಕ ನೋಟೀಸನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು ಮತ್ತು ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯಲ್ಲಿನ ಅಥವಾ ಅದರ ಬಳಿಯಿರುವ ಅನುಕೂಲಕರ ಸ್ಥಳಗಳಲ್ಲಿ ಸಾರ್ವಜನಿಕ ನೋಟೀಸನ್ನು ನೀಡುವಂತೆ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ತಿಳಿಸಿರುವ ಸಾರ್ವಜನಿಕ ನೋಟೀಸಿನಲ್ಲಿ, ಹಾಗೆ ಬೇಕಾಗಿರುವ ಭೂಮಿಯ ವಿವರಗಳನ್ನು ತಿಳಿಸಿರತಕ್ಕದ್ದು ಮತ್ತು ನೋಟೀಸನ್ನು ಪ್ರಕಟಿಸಿದ ದಿನಾಂಕದ ನಂತರ ಮೂವತ್ತು ದಿನಗಳಿಗೆ ಕಡಿಮೆ ಇರದಂಥ ಮತ್ತು ಆರು ತಿಂಗಳುಗಳಿಗೆ ಹೆಚ್ಚಿರದಂಥ, ಸಾರ್ವಜನಿಕ ನೋಟೀಸಿನಲ್ಲಿ ತಿಳಿಸಿರುವ ಕಾಲದಲ್ಲಿ ಮತ್ತು ಸ್ಥಳದಲ್ಲಿ ಕಲೆಕ್ಟರ್‌ನ ಮುಂದೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಅಥವಾ ವಕೀಲನ ಮೂಲಕ ಹಾಜರಾಗುವಂತೆ ಮತ್ತು ಪ್ರಕರಣ 20ರ ಮೇರೆಗೆ ಮಾಡಿದ ಅಳತೆಗೆ ಸಂಬಂಧಿಸಿದಂತೆ ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದರೆ, ಅವುಗಳೊಂದಿಗೆ, ಭೂಮಿಯಲ್ಲಿ ತಮ್ಮ ತಮ್ಮ ಹಿತಾಸಕ್ತಿಗಳ ಸ್ವರೂಪವನ್ನು ಮತ್ತು ಅಂಥ ಹಿತಾಸಕ್ತಿಗಳಿಗೆ ಪರಿಹಾರವಾಗಿ ತಾವು ಕ್ಲೇಮು ಮಾಡುವ ಮೊತ್ತವನ್ನು

ಮತ್ತು ತಮ್ಮ ಕ್ಲೇಮುಗಳ ವಿವರಗಳನ್ನು, ಮತ್ತು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ತಮ್ಮ ಕ್ಲೇಮುಗಳನ್ನು ತಿಳಿಸುವಂತೆ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳನ್ನು ಅಗತ್ಯಪಡಿಸತಕ್ಕದ್ದು.

(3) ಕಲೆಕ್ಟರ್‌ನು ಯಾವುದೇ ಪ್ರಕರಣದಲ್ಲಿ, ಉಪಪ್ರಕರಣ (2)ರಲ್ಲಿ ತಿಳಿಸಿದಂಥ ವಿವರಣೆಯನ್ನು ಲಿಖಿತದಲ್ಲಿ ಸಲ್ಲಿಸುವಂತೆ ಮತ್ತು ಪಕ್ಷಕಾರನು ಅಥವಾ ಆತನ ಏಜೆಂಟನು ಅದಕ್ಕೆ ಸಹಿ ಮಾಡುವಂತೆ ಅಗತ್ಯಪಡಿಸಬಹುದು.

(4) ಕಲೆಕ್ಟರನು ಅಂಥ ಭೂಮಿಯ ಅಧಿಭೋಗದಾರ ಯಾರಾದರೂ ಇದ್ದರೆ, ಅವನಿಗೆ ಮತ್ತು ಆ ಭೂಮಿಯಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದುಬಂದಿರುವ ಅಥವಾ ನಂಬಲಾಗಿರುವ ಹಾಗೂ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರವಾಗಿ ಕಾರ್ಯನಿರ್ವಹಿಸಲು ಹಕ್ಕುಳ್ಳ, ಸ್ಥಳದಲ್ಲಿ ವಾಸವಾಗಿರುವ ಅಥವಾ ತಮ್ಮ ಪರವಾಗಿ ನೋಟೀಸುಗಳನ್ನು ಸ್ವೀಕರಿಸಲು ಅಧಿಕಾರ ನೀಡಿರುವ ಏಜೆಂಟರುಗಳನ್ನು ಹೊಂದಿರುವ, ಭೂಮಿ ಯಾವ ರೆವಿನ್ಯೂ ಜಿಲ್ಲೆಯಲ್ಲಿ ಇದೆಯೋ ಆ ರೆವಿನ್ಯೂ ಜಿಲ್ಲೆಯೊಳಗಿರುವ ಎಲ್ಲಾ ಅಂಥ ವ್ಯಕ್ತಿಗಳಿಗೆ ಅದೇ ರೀತಿಯಲ್ಲಿ ನೋಟೀಸನ್ನು ಜಾರಿ ಮಾಡತಕ್ಕದ್ದು.

(5) ಹಾಗೆ ಹಿತಾಸಕ್ತಿ ಹೊಂದಿರುವಂಥ ಯಾರೇ ವ್ಯಕ್ತಿಯು ಬೇರೆ ಕಡೆ ವಾಸವಾಗಿರುವ ಮತ್ತು ಯಾರೇ ಏಜೆಂಟ್‌ನನ್ನು ಹೊಂದಿರದಿರುವ ಸಂದರ್ಭದಲ್ಲಿ, ಕಲೆಕ್ಟರ್‌ನು, ಆ ವ್ಯಕ್ತಿಯ ಹೆಸರಿಗೆ ಬರೆದ ಪತ್ರದ ಮೂಲಕ ನೋಟೀಸನ್ನು, ಕೊನೆಯದಾಗಿ ತಿಳಿದು ಬಂದಿರುವ ಅವನ ವಾಸ ಸ್ಥಳದ ಅಥವಾ ವ್ಯವಹಾರದ ಸ್ಥಳದ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಿಕೊಟ್ಟಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಕೊನೆಯ ಪಕ್ಷ ಎರಡು ರಾಷ್ಟ್ರೀಯ ದಿನಪತ್ರಿಕೆಯಲ್ಲಿ ಸಹ ಮತ್ತು ತಮ್ಮ ವೆಬ್‌ಸೈಟ್‌ನಲ್ಲೂ ಸಹ ಆ ನೋಟೀಸನ್ನು ಪ್ರಕಟಿಸತಕ್ಕದ್ದು.

**22. ಹೆಸರುಗಳಿಗೆ ಮತ್ತು ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ವಿವರಣಾ ಪತ್ರಗಳನ್ನು ಸಲ್ಲಿಸುವಂತೆ ಅಗತ್ಯಪಡಿಸಲು ಮತ್ತು ಒತ್ತಾಯಪಡಿಸಲು ಅಧಿಕಾರ.–** (1) ಸಹ ಮಾಲೀಕನಾಗಿ, ಉಪ ಮಾಲೀಕನಾಗಿ, ಅಡಮಾನ ಪಡೆದವನಾಗಿ, ಗೇಣಿದಾರನಾಗಿ ಅಥವಾ ಅನ್ಯಥಾ, ಭೂಮಿಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ಇತರ ವ್ಯಕ್ತಿಯ ಹೆಸರನ್ನು ಮತ್ತು ಅವನು ಹೊಂದಿರುವ ಹಿತಾಸಕ್ತಿಯ ಸ್ವರೂಪವನ್ನು ಮತ್ತು ವಿವರಣಾ ಪತ್ರದ ದಿನಾಂಕದ ನಿಕಟಪೂರ್ವದ ಮೂರು ವರ್ಷಗಳ ಅವಧಿಯಲ್ಲಿ ಆ ಭೂಮಿಯ ಸಂಬಂಧದಲ್ಲಿ ಸ್ವೀಕರಿಸಿದ ಅಥವಾ ಸ್ವೀಕರಿಸಬಹುದಾದ ಗೇಣಿಗಳು ಅಥವಾ ಪ್ರತಿಫಲ ಯಾವುದಾದರೂ ಇದ್ದರೆ ಅದನ್ನು ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಒಳಗೊಂಡಿರುವ ವಿವರಣಾ ಪತ್ರವನ್ನು, ತಿಳಿಸಿರುವ ಕಾಲದಲ್ಲಿ (ಭೂಮಿಯ ಕಡ್ಡಾಯ ಕೋರಿಕೆಯ ದಿನಾಂಕದ ನಂತರ ಮೂವತ್ತು ದಿನಗಳಿಗೆ ಕಡಿಮೆ ಇಲ್ಲದಂಥ ಕಾಲವಾಗಿರುವ) ಮತ್ತು ತಿಳಿಸಿರುವ ಸ್ಥಳದಲ್ಲಿ ತನಗೆ ಸಲ್ಲಿಸುವಂತೆ ಅಥವಾ ಒಪ್ಪಿಸುವಂತೆ ಸಹ ಅಂಥ ಯಾರೇ ವ್ಯಕ್ತಿಯನ್ನು ಕಲೆಕ್ಟರ್‌ನು ಅಗತ್ಯಪಡಿಸಬಹುದು.

(2) ಈ ಪ್ರಕರಣದ ಮೇರೆಗೆ ವಿವರಣಾ ಪತ್ರವನ್ನು ಸಲ್ಲಿಸುವಂತೆ ಅಥವಾ ಒಪ್ಪಿಸುವಂತೆ ಯಾವ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ವಿವರಣಾ ಪತ್ರವನ್ನು ಸಲ್ಲಿಸಲು ಅಥವಾ ಒಪ್ಪಿಸಲು, ಭಾರತ ದಂಡ ಸಂಹಿತೆಯ ಪ್ರಕರಣಗಳಾದ 175 ಮತ್ತು 176ರ ಅರ್ಥವ್ಯಾಪ್ತಿಯೊಳಗೆ ಕಾನೂನುಸಮ್ಮತವಾಗಿ ಬದ್ಧನಾಗಿದ್ದಾನೆಂದು ಭಾವಿಸತಕ್ಕದ್ದು.

**23. ಕಲೆಕ್ಟರ್‌ನಿಂದ ವಿಚಾರಣೆ ಮತ್ತು ಭೂಸ್ವಾಧೀನ ಐತೀರ್ಪು.–** ಪ್ರಕರಣ 20ರ ಮೇರೆಗೆ ಮಾಡಿದ ಅಳತೆಗಳಿಗೆ ಸಂಬಂಧಿಸಿದಂತೆ, ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, ಪ್ರಕರಣ 21ರ ಮೇರೆಗೆ ನೀಡಿದ ನೋಟೀಸಿಗೆ ಅನುಸಾರವಾಗಿ ವ್ಯಕ್ತಪಡಿಸಿರುವ ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳ ಬಗ್ಗೆ, ಮತ್ತು ಅಧಿಸೂಚನೆಯನ್ನು

ಪ್ರಕಟಿಸಿದ ದಿನಾಂಕದಂದು ಇದ್ದ ಭೂಮಿಯ ಮೌಲ್ಯದ ಬಗ್ಗೆ ಮತ್ತು ಪರಿಹಾರವನ್ನು ಮತ್ತು ಪುನರ್‌ವಸತಿಯನ್ನು ಮತ್ತು ಪುನರ್‌ವ್ಯವಸ್ಥೆಯನ್ನು ಕ್ಲೇಮು ಮಾಡಿರುವ ವ್ಯಕ್ತಿಗಳು ಹೊಂದಿರುವ ಅವರವರ ಹಿತಾಸಕ್ತಿಗಳ ಬಗ್ಗೆ, ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಂದು ಅಥವಾ ಯಾವ ದಿನಾಂಕಕ್ಕೆ ವಿಚಾರಣೆಯನ್ನು ಮುಂದೂಡಲಾಗಿದೆಯೋ ಆ ದಿನಾಂಕದಂದು ವಿಚಾರಣೆ ಮಾಡಲು ಕಲೆಕ್ಟರ್‌ನು ಮುಂದಾಗತಕ್ಕದ್ದು,-

(ಎ) ಭೂಮಿಯ ಸರಿಯಾದ ವಿಸ್ತೀರ್ಣದ ಬಗ್ಗೆ;

(ಬಿ) ಪ್ರಕರಣ 31ರ ಮೇರೆಗೆ ನಿರ್ಧರಣೆ ಮಾಡಿದಂತೆ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಐತೀರ್ಪಿನೊಂದಿಗೆ, ಪ್ರಕರಣ 27ರ ಮೇರೆಗೆ ನಿರ್ಧರಣೆ ಮಾಡಿದಂಥ ಮತ್ತು ಭೂಮಿಗೆ ಎಷ್ಟು ಪರಿಹಾರವನ್ನು ನೀಡಬೇಕೆಂದು ಅವನು ಅಭಿಪ್ರಾಯಪಡುತ್ತಾನೋ ಅಂಥ ಪರಿಹಾರದ ಬಗ್ಗೆ; ಮತ್ತು

(ಸಿ) ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವರೆಂದು ತಿಳಿದುಬಂದಿರುವ ಅಥವಾ ನಂಬಲಾಗಿರುವ ಅಥವಾ ಯಾರ ಬಗ್ಗೆ ಅಥವಾ ಯಾರ ಕ್ಲೇಮುಗಳ ಬಗ್ಗೆ ತನಗೆ ಮಾಹಿತಿ ಇದೆಯೋ ಆ ಎಲ್ಲಾ ವ್ಯಕ್ತಿಗಳು ತನ್ನ ಮುಂದೆ ಅನುಕ್ರಮವಾಗಿ ಹಾಜರಾಗಿರಲಿ ಅಥವಾ ಹಾಜರಾಗದಿರಲಿ, ಅವರ ನಡುವೆ ಸದರಿ ಪರಿಹಾರದ ಮೊಬಲಗನ್ನು ಹಂಚಿಕೆ ಮಾಡಿರುವ ಬಗ್ಗೆ

– ಐತೀರ್ಪನ್ನು ನೀಡಿ, ಅದಕ್ಕೆ ತನ್ನ ಸಹಿ ಹಾಕತಕ್ಕದ್ದು.

**24. 1894ರ ಅಧಿನಿಯಮ ಸಂಖ್ಯೆ 1ರ ಮೇರೆಗಿನ ಭೂಸ್ವಾಧೀನ ಪ್ರಕ್ರಿಯೆಯು ಕೆಲವು ಪ್ರಕರಣಗಳಲ್ಲಿ ರದ್ದಾಗಿದೆ ಎಂದು ಭಾವಿಸುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಭೂಸ್ವಾಧೀನ ಅಧಿನಿಯಮ, 1894ರ ಮೇರೆಗೆ ಪ್ರಾರಂಭಿಸಿದ ಭೂಸ್ವಾಧೀನ ವ್ಯವಹರಣೆಗಳ ಯಾವುದೇ ಪ್ರಕರಣದಲ್ಲಿ,–

(ಎ) ಸದರಿ ಭೂಸ್ವಾಧೀನ ಅಧಿನಿಯಮ, 1894ರ ಪ್ರಕರಣ 11ರ ಮೇರೆಗೆ ಯಾವುದೇ ಐತೀರ್ಪನ್ನು ನೀಡಿರದಿದ್ದರೆ, ಆಗ, ಪರಿಹಾರವನ್ನು ನಿರ್ಣಯಿಸುವುದಕ್ಕೆ, ಪುನರ್‌ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿರುವ ಎಲ್ಲಾ ಉಪಬಂಧಗಳು ಅನ್ವಯವಾಗತಕ್ಕದ್ದು; ಅಥವಾ

(ಬಿ) ಸದರಿ ಭೂಸ್ವಾಧೀನ ಅಧಿನಿಯಮ, 1894ರ ಉಪಪ್ರಕರಣ 11ರ ಮೇರೆಗೆ ಐತೀರ್ಪನ್ನು ನೀಡಿದ್ದರೆ, ಆಗ, ಅಂಥ ವ್ಯವಹರಣೆಗಳನ್ನು, ಸದರಿ ಅಧಿನಿಯಮವನ್ನು ನಿರಸನಗೊಳಿಸಿರದಿದ್ದರೆ ಆ ವ್ಯವಹರಣೆಗಳನ್ನು ಹೇಗೆ ಮುಂದುವರಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ, ಆ ಅಧಿನಿಯಮದ ಉಪಬಂಧಗಳ ಮೇರೆಗೆ ಮುಂದುವರಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಭೂಸ್ವಾಧೀನ ಅಧಿನಿಯಮ, 1894ರ ಮೇರೆಗೆ ಪ್ರಾರಂಭಿಸಿದ ಭೂಸ್ವಾಧೀನ ವ್ಯವಹರಣೆಗಳಲ್ಲಿ ಸದರಿ ಪ್ರಕರಣ 11ರ ಮೇರೆಗೆ ಐತೀರ್ಪನ್ನು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಐದು ವರ್ಷಗಳ ಮುಂಚೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಮುಂಚೆಯೇ ನೀಡಿದ್ದರೆ, ಆದರೆ ಭೂಮಿಯನ್ನು ವಾಸ್ತವಿಕವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿರದಿದ್ದರೆ ಅಥವಾ ಪರಿಹಾರವನ್ನು ಸಂದಾಯ ಮಾಡಿರದಿದ್ದರೆ, ಅಂಥ ವ್ಯವಹರಣೆಗಳು ರದ್ದಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಸಮುಚಿತ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಂಥ ಭೂಮಿಯ ಸ್ವಾಧೀನದ ವ್ಯವಹರಣೆಗಳನ್ನು ಹೊಸದಾಗಿ ಪ್ರಾರಂಭಿಸಲು ಬಯಸಿದರೆ, ಅದು ಹಾಗೆ ಮಾಡಬಹುದು.

ಪರಂತು, ಐತೀರ್ಪನ್ನು ನೀಡಿದ್ದರೆ ಮತ್ತು ಭೂ ಹಿಡುವಳಿಗಳ ಪೈಕಿ ಹೆಚ್ಚಿನ ಹಿಡುವಳಿಗಳ ಸಂಬಂಧದಲ್ಲಿ ಪರಿಹಾರವನ್ನು ಫಲಾನುಭವಿಗಳ ಖಾತೆಗೆ ಠೇವಣಿ ಮಾಡಿರದಿದ್ದರೆ, ಆಗ, ಸದರಿ ಭೂಸ್ವಾಧೀನ ಅಧಿನಿಯಮದ ಪ್ರಕರಣ 4ರ ಮೇರೆಗಿನ ಭೂಸ್ವಾಧೀನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಫಲಾನುಭವಿಗಳು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಪರಿಹಾರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**25. ಯಾವ ಅವಧಿಯೊಳಗೆ ಐತೀರ್ಪನ್ನು ನೀಡಬೇಕೋ ಆ ಅವಧಿ.–** ಕಲೆಕ್ಟರ್‌ನು, ಪ್ರಕರಣ 19ರ ಮೇರೆಗಿನ ಘೋಷಣೆಯನ್ನು ಪ್ರಕಟಿಸಿದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯೊಳಗೆ ಐತೀರ್ಪನ್ನು ನೀಡತಕ್ಕದ್ದು ಮತ್ತು ಆ ಅವಧಿಯೊಳಗೆ ಐತೀರ್ಪನ್ನು ನೀಡಿರದಿದ್ದರೆ ಭೂಸ್ವಾಧೀನದ ಇಡೀ ವ್ಯವಹರಣೆಗಳು ರದ್ದಾಗತಕ್ಕದ್ದು:

ಪರಂತು, ಹನ್ನೆರಡು ತಿಂಗಳುಗಳ ಅವಧಿಯ ವಿಸ್ತರಣೆಯನ್ನು ಸಮರ್ಥಿಸುವಂಥ ಸಂದರ್ಭ ಸನ್ನಿವೇಶಗಳು ಇವೆ ಎಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಆ ಅವಧಿಯನ್ನು ವಿಸ್ತರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು:

ಮತ್ತು ಪರಂತು, ಅವಧಿಯನ್ನು ವಿಸ್ತರಿಸುವ ಅಂಥ ಯಾವುದೇ ತೀರ್ಮಾನವನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಅದನ್ನು ಅಧಿಸೂಚಿಸತಕ್ಕದ್ದು ಹಾಗೂ ಸಂಬಂಧಪಟ್ಟ ಪ್ರಾಧಿಕಾರದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**26. ಕಲೆಕ್ಟರ್‌ನಿಂದ ಭೂಮಿಯ ಮಾರುಕಟ್ಟೆ ಮೌಲ್ಯದ ನಿರ್ಧರಣೆ.–** (1) ಕಲೆಕ್ಟರ್‌ನು ಭೂಮಿಯ ಮಾರುಕಟ್ಟೆ ಮೌಲ್ಯವನ್ನು ನಿರ್ಣಯಿಸುವಾಗ ಮತ್ತು ನಿರ್ಧರಣೆ ಮಾಡುವಾಗ ಮತ್ತು ಈ ಮುಂದಿನ ಮಾನದಂಡವನ್ನು ಎಂದರೆ:–

(ಎ) ಭೂಮಿಯು ಯಾವ ಪ್ರದೇಶದಲ್ಲಿ ಇದೆಯೋ ಆ ಪ್ರದೇಶದಲ್ಲಿ ಸಂದರ್ಭಾನುಸಾರ ಕ್ರಯ ಪತ್ರಗಳ ಅಥವಾ ಮಾರಾಟ ಒಪ್ಪಂದ ಪತ್ರಗಳ ನೋಂದಣಿಗಾಗಿ ಭಾರತ ಸ್ಟಾಂಪು ಅಧಿನಿಯಮ, 1899 (1899ರ 2)ರಲ್ಲಿ ಯಾವುದೇ ಮಾರುಕಟ್ಟೆ ಮೌಲ್ಯವನ್ನು ನಿರ್ದಿಷ್ಟಪಡಿಸಿದ್ದರೆ ಆ ಮಾರುಕಟ್ಟೆ ಮೌಲ್ಯ; ಅಥವಾ

(ಬಿ) ಅತ್ಯಂತ ಸಮೀಪದ ಗ್ರಾಮದಲ್ಲಿ ಇರುವ ಅಥವಾ ಅತ್ಯಂತ ಸಮೀಪದ ಅಕ್ಕಪಕ್ಕದ ಪ್ರದೇಶದಲ್ಲಿ ಇರುವ, ಅದೇ ಬಗೆಯ ಭೂಮಿಯ ಸರಾಸರಿ ಮಾರಾಟ ಬೆಲೆ; ಅಥವಾ

(ಸಿ) ಖಾಸಗಿ ಕಂಪೆನಿಗಳಿಗಾಗಿ ಅಥವಾ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಪ್ರಾಜೆಕ್ಟ್‌ಗಳಿಗಾಗಿ, ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಪ್ರಕರಣ 2ರ ಉಪಪ್ರಕರಣ (2)ರ ಮೇರೆಗೆ ಒಪ್ಪಿಕೊಂಡಂತೆ, ಸಮ್ಮತಿಸಿದ ಪರಿಹಾರದ ಮೊಬಲಗು

– ಇವುಗಳಲ್ಲಿ ಯಾವುದು ಹೆಚ್ಚೋ, ಅದನ್ನು ಅಳವಡಿಸಿಕೊಳ್ಳತಕ್ಕದ್ದು.

ಪರಂತು, ಮಾರುಕಟ್ಟೆ ಮೌಲ್ಯವನ್ನು ನಿರ್ಧರಣೆ ಮಾಡುವ ದಿನಾಂಕವು, ಪ್ರಕರಣ 11ರ ಮೇರೆಗೆ ಯಾವ ದಿನಾಂಕದಂದು ಅಧಿಸೂಚನೆ ಹೊರಡಿಸಲಾಯಿತೋ ಆ ದಿನಾಂಕವು ಆಗಿರತಕ್ಕದ್ದು.

**ವಿವರಣೆ 1.–** (ಬಿ) ಖಂಡದಲ್ಲಿ ಹೇಳಿರುವ ಸರಾಸರಿ ಮಾರಾಟ ಬೆಲೆಯನ್ನು, ಯಾವ ವರ್ಷದಲ್ಲಿ ಭೂಮಿಯ ಸ್ವಾಧೀನತೆಗೆ ಪ್ರಸ್ತಾವಿಸಲಾಯಿತೋ ಆ ವರ್ಷದ ನಿಕಟಪೂರ್ವದ ಮೂರು ವರ್ಷಗಳ ಅವಧಿಯಲ್ಲಿ, ಸಮೀಪದ ಗ್ರಾಮದಲ್ಲಿ ಅಥವಾ ಅದಕ್ಕೆ ಸಮೀಪದ ಅಕ್ಕಪಕ್ಕದ ಪ್ರದೇಶದಲ್ಲಿ ಇರುವ ಅದೇ ಬಗೆಯ ಭೂಮಿಗಾಗಿ, ನೋಂದಾಯಿಸಿದ ಕ್ರಯ ಪತ್ರಗಳನ್ನು ಅಥವಾ ಮಾರಾಟ ಒಪ್ಪಂದ ಪತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನಿರ್ಧರಣೆ ಮಾಡತಕ್ಕದ್ದು.

**ವಿವರಣೆ 2.–** ವಿವರಣೆ 1ರಲ್ಲಿ ತಿಳಿಸಿರುವ ಸರಾಸರಿ ಮಾರಾಟ ಬೆಲೆಯನ್ನು ನಿರ್ಧರಣೆ ಮಾಡುವುದಕ್ಕಾಗಿ ಯಾವ ಕ್ರಯ ಪತ್ರಗಳಲ್ಲಿ ಅಥವಾ ಮಾರಾಟ ಒಪ್ಪಂದ ಪತ್ರಗಳಲ್ಲಿ ಅತ್ಯಂತ ಹೆಚ್ಚಿನ ಬೆಲೆಯನ್ನು ನಮೂದಿಸಲಾಗಿದೆಯೋ, ಆ ಕ್ರಯ ಪತ್ರಗಳ ಅಥವಾ ಒಪ್ಪಂದ ಪತ್ರಗಳ ಒಟ್ಟು ಸಂಖ್ಯೆಯ ಅರ್ಧದಷ್ಟು ಪತ್ರಗಳಲ್ಲಿ ತಿಳಿಸಿರುವ ಅತ್ಯಂತ ಹೆಚ್ಚಿನ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

**ವಿವರಣೆ 3.–** ಈ ಉಪಪ್ರಕರಣದ ಮೇರೆಗೆ ಮಾರುಕಟ್ಟೆ ಮೌಲ್ಯವನ್ನು ಮತ್ತು ವಿವರಣೆ 1ರಲ್ಲಿ ಅಥವಾ ವಿವರಣೆ 2ರಲ್ಲಿ ತಿಳಿಸಿರುವ ಸರಾಸರಿ ಮಾರಾಟ ಬೆಲೆಯನ್ನು ನಿರ್ಧರಣೆ ಮಾಡುವಾಗ, ಆ ಜಿಲ್ಲೆಯಲ್ಲಿ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕಾಗಿ, ಪರಿಹಾರವಾಗಿ ಈ ಮೊದಲು ಸಂದಾಯ ಮಾಡಿರುವ ಯಾವುದೇ ಬೆಲೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**ವಿವರಣೆ 4.–** ಈ ಪ್ರಕರಣದ ಮೇರೆಗೆ ಮಾರುಕಟ್ಟೆ ಮೌಲ್ಯವನ್ನು ಮತ್ತು ವಿವರಣೆ 1ರಲ್ಲಿ ಅಥವಾ ವಿವರಣೆ 2ರಲ್ಲಿ ತಿಳಿಸಿದ ಸರಾಸರಿ ಮಾರಾಟ ಬೆಲೆಯನ್ನು ನಿರ್ಧರಣೆ ಮಾಡುವಾಗ, ಸಂದಾಯ ಮಾಡಿದ ಯಾವುದೇ ಬೆಲೆಯು, ಚಾಲ್ತಿಯಲ್ಲಿರುವ ವಾಸ್ತವಿಕ ಮಾರುಕಟ್ಟೆ ಮೌಲ್ಯ ಅಲ್ಲವೆಂದು ಕಲೆಕ್ಟರನು ಅಭಿಪ್ರಾಯಪಟ್ಟರೆ, ಮಾರುಕಟ್ಟೆ ಮೌಲ್ಯವನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಅದನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಉಪಪ್ರಕರಣ (1)ರ ಪ್ರಕಾರ ಲೆಕ್ಕ ಹಾಕಿದ ಮಾರುಕಟ್ಟೆ ಮೌಲ್ಯವನ್ನು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಗುಣಕದಿಂದ ಗುಣಿಸತಕ್ಕದ್ದು.

(3) ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಮೇರೆಗೆ, ಮಾರುಕಟ್ಟೆ ಮೌಲ್ಯವನ್ನು,-

(ಎ) ಯಾವ ಪ್ರದೇಶದಲ್ಲಿ, ಆ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಮೇರೆಗೆ, ಭೂಮಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಿರ್ಬಂಧಿಸಲಾಗಿದೆಯೋ ಅಂಥ ಪ್ರದೇಶದಲ್ಲಿ ಭೂಮಿ ಇದೆ ಎಂಬ ಕಾರಣದಿಂದಾಗಿ; ಅಥವಾ

(ಬಿ) ಅದೇ ಬಗೆಯ ಭೂಮಿಗೆ ಸಂಬಂಧಿಸಿದಂತೆ ಉಪಪ್ರಕರಣ (1)ರ (ಎ) ಖಂಡದಲ್ಲಿ ತಿಳಿಸಿದಂತೆ, ನಿಕಟಪೂರ್ವದ ಮೂರು ವರ್ಷಗಳ ಅವಧಿಯಲ್ಲಿ ನೋಂದಾಯಿತವಾದ ಕ್ರಯ ಪತ್ರಗಳು ಅಥವಾ ಮಾರಾಟ ಒಪ್ಪಂದ ಪತ್ರಗಳು ಲಭ್ಯವಿಲ್ಲ ಎಂಬ ಕಾರಣದಿಂದಾಗಿ; ಅಥವಾ

(ಸಿ) ಸಮುಚಿತ ಪ್ರಾಧಿಕಾರವು, ಭಾರತ ಸ್ಟಾಂಪು ಅಧಿನಿಯಮ, 1899ರ ಮೇರೆಗೆ ಮಾರುಕಟ್ಟೆ ಮೌಲ್ಯವನ್ನು ನಿರ್ದಿಷ್ಟಪಡಿಸದಿರುವ ಕಾರಣದಿಂದಾಗಿ

– ನಿರ್ಧರಣೆ ಮಾಡಲು ಸಾಧ್ಯವಾಗದಿದ್ದಾಗ, ಸಂಬಂಧಪಟ್ಟ ರಾಜ್ಯ ಸರ್ಕಾರವು, ಅಕ್ಕಪಕ್ಕದ ಪ್ರದೇಶದಲ್ಲಿರುವ ಅದೇ ಬಗೆಯ ಭೂಮಿಯ ಸಂಬಂಧದಲ್ಲಿ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಲೆಕ್ಕ ಹಾಕಿದ ಬೆಲೆಯನ್ನು ಆಧರಿಸಿ ಸದರಿ ಭೂಮಿಯ ಪ್ರತಿ ಯುನಿಟ್ ವಿಸ್ತೀರ್ಣಕ್ಕೆ ಫ್ಲೋರ್ ಬೆಲೆಯನ್ನು ಅಥವಾ ಕನಿಷ್ಠ ಬೆಲೆಯನ್ನು ನಿರ್ದಿಷ್ಟಪಡಿಸತಕ್ಕದ್ದು:

ಪರಂತು, ಅಗತ್ಯ ನಿಕಾಯವು ಆ ಭೂಮಿಯ ಸ್ವಾಧೀನತೆಗಾಗಿ, ಪರಿಹಾರದ ಭಾಗವಾಗಿ ಭೂಮಾಲೀಕರಿಗೆ (ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅವರಿಗೆ) ತನ್ನ ಷೇರುಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದ ಸಂದರ್ಭದಲ್ಲಿ,

ಅಂಥ ಷೇರುಗಳು ಯಾವುದೇ ಸಂದರ್ಭಗಳಲ್ಲಿ, ಸಂದರ್ಭಾನುಸಾರ ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಅಥವಾ ಉಪಪ್ರಕರಣ (3)ರ ಮೇರೆಗೆ ಹಾಗೆ ಲೆಕ್ಕ ಹಾಕಿದ ಮೌಲ್ಯದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ಅಗತ್ಯ ನಿಕಾಯವು ಯಾವ ಷೇರುಗಳ ಮೌಲ್ಯವನ್ನು ಉಪಪ್ರಕರಣ (1)ರ ಮೇರೆಗೆ ಲೆಕ್ಕಹಾಕಿದ ಭೂಮಿಯ ಮೌಲ್ಯದಿಂದ ಕಳೆಯಲಾಗುತ್ತದೆಯೋ ಆ ಷೇರುಗಳನ್ನು ತೆಗೆದುಕೊಳ್ಳುವಂತೆ ಯಾರೇ ಮಾಲೀಕನನ್ನು (ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಭೂ ಮಾಲೀಕ) ಯಾವುದೇ ಕಾರಣದಿಂದಲೂ ಒತ್ತಾಯಪಡಿಸತಕ್ಕದ್ದಲ್ಲ.

ಮತ್ತೂ ಪರಂತು, ಕಲೆಕ್ಟರನು, ಯಾವುದೇ ಪ್ರದೇಶದಲ್ಲಿ ಯಾವುದೇ ಭೂಸ್ವಾಧೀನ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಆ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ದರದ ಆಧಾರದ ಮೇಲೆ ಭೂಮಿಯ ಮಾರುಕಟ್ಟೆ ಮೌಲ್ಯವನ್ನು ಪರಿಷ್ಕರಿಸಲು ಮತ್ತು ತಹಲ್‌ವರೆಗೆ ಲೆಕ್ಕ ಹಾಕಿಡಲು ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

ಮತ್ತೂ ಪರಂತು, ಸಮುಚಿತ ಸರ್ಕಾರವು, ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಯು ಸ್ಥಾಪಿಸಿದ ಸಂಸ್ಥೆಗಾಗಿ ಯಾವುದೇ ಭೂಮಿಯನ್ನು ಅಥವಾ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ನಿರ್ಧರಣೆ ಮಾಡಿದ ಮಾರುಕಟ್ಟೆ ಮೌಲ್ಯವು, ಅವರು ತಮ್ಮ ಇಷ್ಟಕ್ಕೆ ಅನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅವರಿಗೆ ಇರುವ ಹಕ್ಕನ್ನು ನಿರ್ಬಂಧಗೊಳಿಸುವ ಹಾಗೆ ಅಥವಾ ಮೊಟಕುಗೊಳಿಸುವ ಹಾಗೆ ಇಲ್ಲ ಎಂಬುದನ್ನು ಸುನಿಶ್ಚಿತಪಡಿಸತಕ್ಕದ್ದು.

**27. ಪರಿಹಾರದ ಮೊಬಲಗನ್ನು ನಿರ್ಧರಣೆ ಮಾಡುವುದು.–** ಕಲೆಕ್ಟರ್‌ನು, ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಮಾರುಕಟ್ಟೆ ಮೌಲ್ಯವನ್ನು ನಿರ್ಧರಣೆ ಮಾಡಿದ ಮೇಲೆ, ಭೂ ಮಾಲೀಕನಿಗೆ (ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅವರಿಗೆ) ಸಂದಾಯ ಮಾಡಬೇಕಾದ ಪರಿಹಾರದ ಒಟ್ಟು ಮೊಬಲಗನ್ನು, ಭೂಮಿಗೆ ಲಗತ್ತಾಗಿರುವ ಎಲ್ಲ ಸ್ವತ್ತುಗಳನ್ನು ಸೇರಿಸಿಕೊಂಡು ಲೆಕ್ಕ ಹಾಕತಕ್ಕದ್ದು.

**28. ಕಲೆಕ್ಟರನು ಐತೀರ್ಪಿನ ಮೊಬಲಗನ್ನು ನಿರ್ಧರಣೆ ಮಾಡುವಾಗ ಪರಿಗಣಿಸಬೇಕಾದ ಮಾನದಂಡಗಳು.–** ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡ ಭೂಮಿಗಾಗಿ ನೀಡಬೇಕಾದ ಪರಿಹಾರದ ಮೊಬಲಗನ್ನು ನಿರ್ಧರಣೆ ಮಾಡುವಾಗ ಕಲೆಕ್ಟರನು,–

**ಮೊದಲನೆಯದಾಗಿ.–** ಪ್ರಕರಣ 26ರ ಮೇರೆಗೆ ನಿರ್ಧರಣೆ ಮಾಡಿದಂಥ ಮಾರುಕಟ್ಟೆ ಮೌಲ್ಯವನ್ನು ಮತ್ತು ಮೊದಲನೆಯ ಮತ್ತು ಎರಡನೆಯ ಅನುಸೂಚಿಗಳಿಗನುಸಾರವಾಗಿ ನೀಡಬೇಕಾದ ಮೊಬಲಗನ್ನು;

**ಎರಡನೆಯದಾಗಿ.–** ಕಲೆಕ್ಟರನು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ, ಭೂಮಿಯ ಮೇಲೆ ಬೆಳೆದಿರಬಹುದಾದ ಯಾವುದೇ ಬೆಳೆಗಳನ್ನು ಮತ್ತು ಮರಗಳನ್ನು ವಶಕ್ಕೆ ತೆಗೆದುಕೊಂಡ ಕಾರಣದಿಂದಾಗಿ ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗೆ ಉಂಟಾದ ಹಾನಿಯನ್ನು;

**ಮೂರನೆಯದಾಗಿ.–** ಕಲೆಕ್ಟರನು, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ, ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯ ಇತರ ಭೂಮಿಯಿಂದ ಅಂಥ ಭೂಮಿಯನ್ನು ಬೇರ್ಪಡಿಸಿದ ಕಾರಣದಿಂದಾಗಿ ಆ ವ್ಯಕ್ತಿಗೆ ಯಾವುದಾದರೂ ಹಾನಿ ಉಂಟಾಗಿದ್ದರೆ, ಆ ಯಾವುದೇ ಹಾನಿಯನ್ನು;

**ನಾಲ್ಕನೆಯದಾಗಿ.–** ಕಲೆಕ್ಟರನು, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ, ಆ ಸ್ವಾಧೀನತೆಯಿಂದಾಗಿ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯ ಇತರ ಚರ ಅಥವಾ ಸ್ಥಿರ ಸ್ವತ್ತಿಗೆ, ಯಾವುದೇ ಇತರ ರೀತಿಯಲ್ಲಿ ತೀವ್ರ ಹಾನಿ ಉಂಟು ಮಾಡಿದ ಅಥವಾ ಅವನ ಗಳಿಕೆಗಳಿಗೆ ತೀವ್ರ ಧಕ್ಕೆ ಉಂಟು ಮಾಡಿದ ಕಾರಣಗಳಿಂದಾಗಿ ಆ ವ್ಯಕ್ತಿಗೆ ಹಾನಿ ಏನಾದರೂ ಉಂಟಾಗಿದ್ದರೆ ಆ ಹಾನಿಯನ್ನು;

**ಐದನೆಯದಾಗಿ.–** ಕಲೆಕ್ಟರನು, ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಪರಿಣಾಮವಾಗಿ, ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯು ತನ್ನ ನಿವಾಸವನ್ನು ಅಥವಾ ವ್ಯವಹಾರದ ಸ್ಥಳವನ್ನು ಅನಿವಾರ್ಯವಾಗಿ ಬದಲಾಯಿಸಬೇಕಾದ ಸಂದರ್ಭದಲ್ಲಿ ಹಾಗೆ ಬದಲಾಯಿಸುವುದಕ್ಕೆ ಆ ವ್ಯಕ್ತಿಯು ವಹಿಸಿದ ಸಮಂಜಸ ವೆಚ್ಚಗಳು ಯಾವುದಾದರೂ ಇದ್ದರೆ ಆ ವೆಚ್ಚಗಳನ್ನು;

**ಆರನೆಯದಾಗಿ.–** ಪ್ರಕರಣ 19ರ ಮೇರೆಗೆ ಘೋಷಣೆಯನ್ನು ಪ್ರಕಟಿಸಿದ ಕಾಲ ಮತ್ತು ಕಲೆಕ್ಟರ್‌ನು, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾಲ, ಇವುಗಳ ನಡುವಿನ ಅವಧಿಯಲ್ಲಿ ಭೂಮಿಯಿಂದ ಬಂದ ಲಾಭವು ಕಡಿಮೆಯಾದ ಕಾರಣದಿಂದಾಗಿ ವಾಸ್ತವಿಕವಾಗಿ ಯಾವುದಾದರೂ ಹಾನಿ ಆಗಿದ್ದರೆ ಆ ಹಾನಿಯನ್ನು; ಮತ್ತು

**ಏಳನೆಯದಾಗಿ.–** ಯಾವ ಆಧಾರವು ನೀತಿಗೆ, ನ್ಯಾಯಕ್ಕೆ ಅನುಗುಣವಾದುದಾಗಿದೆಯೋ ಮತ್ತು ಬಾಧಿತ ಕುಟುಂಬಗಳಿಗೆ ಪ್ರಯೋಜನಕಾರಿಯಾದುದಾಗಿದೆಯೋ ಆ ಇತರ ಯಾವುದೇ ಆಧಾರವನ್ನು

– ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**29. ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ವಸ್ತುಗಳ ಮೌಲ್ಯವನ್ನು ನಿರ್ಧರಣೆ ಮಾಡುವುದು.–** (1) ಸ್ವಾಧೀನಪಡಿಸಿಕೊಳ್ಳಬೇಕಾದ ಕಟ್ಟಡದ ಮತ್ತು ಇತರ ಸ್ಥಿರ ಸ್ವತ್ತಿನ ಅಥವಾ ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ಆಸ್ತಿಗಳ ಮಾರುಕಟ್ಟೆ ಮೌಲ್ಯವನ್ನು ನಿರ್ಧರಣೆ ಮಾಡುವಾಗ ಕಲೆಕ್ಟರ್‌ನು ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ಸಕ್ಷಮ ಇಂಜಿನಿಯರನ ಅಥವಾ ಸಂಬಂಧಪಟ್ಟ ಕ್ಷೇತ್ರದಲ್ಲಿ ಇರುವ ಯಾರೇ ಇತರ ತಜ್ಞನ ಸೇವೆಯನ್ನು ಬಳಸಿಕೊಳ್ಳಬಹುದು.

(2) ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿರುವ ಮರಗಳ ಮತ್ತು ಸಸ್ಯಗಳ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಕಲೆಕ್ಟರ್‌ನು ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ಕೃಷಿ, ಅರಣ್ಯ ನಿರ್ಮಾಣ ತೋಟಗಾರಿಕೆ, ರೇಷ್ಮೆ-ಬೇಸಾಯ ಅಥವಾ ಯಾವುದೇ ಇತರ ಕ್ಷೇತ್ರದಲ್ಲಿ ಅನುಭವವಿರುವ ವ್ಯಕ್ತಿಗಳ ಸೇವೆಯನ್ನು ಬಳಸಿಕೊಳ್ಳಬಹುದು.

(3) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ, ಹಾನಿಗೆ ಒಳಗಾದ ಬೆಳೆದು ನಿಂತಿರುವ ಬೆಳೆಯ ಮೌಲ್ಯವನ್ನು ನಿರ್ಧರಣೆಮಾಡುವ ಉದ್ದೇಶಕ್ಕಾಗಿ ಕಲೆಕ್ಟರ್‌ನು ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ಕೃಷಿ ಕ್ಷೇತ್ರದಲ್ಲಿ ಅನುಭವವಿರುವ ವ್ಯಕ್ತಿಗಳ ಸೇವೆಯನ್ನು ಬಳಸಿಕೊಳ್ಳಬಹುದು.

**30. ಸಮಾಧಾನಾರ್ಥಕ ಪರಿಹಾರದ ಬಗ್ಗೆ ಐತೀರ್ಪು.–** (1) ಕಲೆಕ್ಟರ್‌ನು, ಸಂದಾಯ ಮಾಡಬೇಕಾದ ಒಟ್ಟು ಪರಿಹಾರದ ಮೊಬಲಗನ್ನು ನಿರ್ಧರಣೆ ಮಾಡಿದಾಗ, ಪರಿಹಾರದ ಮೊಬಲಗಿನ ಶೇಕಡಾ ಒಂದು ನೂರಕ್ಕೆ ಸಮನಾದ "ಸಮಾಧಾನಾರ್ಥಕ ಪರಿಹಾರ"ದ ಮೊಬಲಗನ್ನು ವಿಧಿಸಿ ಅಂತಿಮ ಐತೀರ್ಪನ್ನು ನೀಡತಕ್ಕದ್ದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, ಸಮಾಧಾನಾರ್ಥಕ ಪರಿಹಾರದ ಮೊಬಲಗು, ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಯಾರೇ ವ್ಯಕ್ತಿಗೆ ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗಿನ ಜೊತೆಗೆ ಕೊಡುವಂಥದೆಂದು ಈ ಮೂಲಕ ಘೋಷಿಸಲಾಗಿದೆ.

(2) ಕಲೆಕ್ಟರ್‌ನು, ಸಂದಾಯ ಮಾಡಬೇಕಾದ ಪರಿಹಾರದ ವಿವರಗಳನ್ನು ಮತ್ತು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಪರಿಹಾರದ ಮೊಬಲಗಿನ ಸಂದಾಯದ ವಿವರಗಳನ್ನು ವಿವರಿಸಿರುವ ಪ್ರತ್ಯೇಕ ಐತೀರ್ಪುಗಳನ್ನು ಹೊರಡಿಸತಕ್ಕದ್ದು.

(3) ಪ್ರಕರಣ 26ರ ಮೇರೆಗೆ ನಿರ್ಧರಣೆ ಮಾಡಿದ ಭೂಮಿಯ ಮಾರುಕಟ್ಟೆ ಮೌಲ್ಯದ ಜೊತೆಗೆ, ಕಲೆಕ್ಟರ್‌ನು ಭೂಸ್ವಾಧೀನದ ಪ್ರತಿಯೊಂದು ಪ್ರಕರಣದಲ್ಲಿ, ಅಂಥ ಭೂಮಿಯ ಸಂಬಂಧದಲ್ಲಿ ಪ್ರಕರಣ 4ರ ಉಪಪ್ರಕರಣ (2)ರ ಮೇರೆಗೆ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ಕುರಿತ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಾರಂಭಿಸಿ, ಕಲೆಕ್ಟರ್‌ನು ಐತೀರ್ಪನ್ನು ನೀಡುವ ದಿನಾಂಕ ಅಥವಾ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದವರೆಗಿನ ಅವಧಿಗಾಗಿ, ಅಂಥ ಮಾರುಕಟ್ಟೆ ಮೌಲ್ಯದ ಮೇಲೆ ಪ್ರತಿವರ್ಷಕ್ಕೆ ಶೇಕಡಾ ಹನ್ನೆರಡರ ದರದಲ್ಲಿ ಲೆಕ್ಕ ಹಾಕಿದ ಮೊಬಲಗನ್ನೂ ನೀಡುವಂತೆ ಆದೇಶ ಮಾಡತಕ್ಕದ್ದು.

## ಅಧ್ಯಾಯ V

## ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಐತೀರ್ಪು

**31. ಬಾಧಿತ ಕುಟುಂಬಗಳಿಗೆ ಸಂಬಂಧಿಸಿದಂತೆ ಕಲೆಕ್ಟರ್‌ನಿಂದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಐತೀರ್ಪು.–** (1) ಕಲೆಕ್ಟರ್‌ನು, ಎರಡನೇ ಅನುಸೂಚಿಯಲ್ಲಿ ತಿಳಿಸಿರುವ ಹಕ್ಕುಗಳ ಅನ್ವಯ ಪ್ರತಿಯೊಂದು ಬಾಧಿತ ಕುಟುಂಬಕ್ಕೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಐತೀರ್ಪುಗಳನ್ನು ನೀಡತಕ್ಕದ್ದು.

(2) ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಐತೀರ್ಪು ಈ ಕೆಳಕಂಡ ಎಲ್ಲ ಅಂಶಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕುಟುಂಬಕ್ಕೆ ಸಂದಾಯ ಮಾಡಬೇಕಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಮೊಬಲಗು;

(ಬಿ) ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಐತೀರ್ಪಿನಲ್ಲಿ ಹೇಳಿರುವ ಮೊಬಲಗನ್ನು ವ್ಯಕ್ತಿಯ ಯಾವ ಬ್ಯಾಂಕ್ ಖಾತೆಯ ಸಂಖ್ಯೆಗೆ ವರ್ಗಾವಣೆ ಮಾಡಬೇಕಾಗಿದೆಯೋ ಆ ಬ್ಯಾಂಕ್ ಖಾತೆ ಸಂಖ್ಯೆ;

(ಸಿ) ಸ್ಥಳಾಂತರಿತ ಕುಟುಂಬಗಳ ಸಂದರ್ಭದಲ್ಲಿ ಹಂಚಿಕೆ ಮಾಡಬೇಕಾಗಿರುವ ಮನೆ ನಿವೇಶನದ ಅಥವಾ ಮನೆಯ ವಿವರಗಳು;

(ಡಿ) ಸ್ಥಳಾಂತರಿತ ಕುಟುಂಬಗಳಿಗೆ ಹಂಚಿಕೆ ಮಾಡಿದ ಭೂಮಿಯ ವಿವರಗಳು;

(ಇ) ಸ್ಥಳಾಂತರಿತ ಕುಟುಂಬಗಳ ಸಂದರ್ಭದಲ್ಲಿ ಒಂದು ಸಲ ಪಾವತಿಸುವಂಥ ಜೀವನಾಧಾರ ಭತ್ಯೆಯ ಮತ್ತು ಸಾರಿಗೆ ಭತ್ಯೆಯ ವಿವರಗಳು;

(ಎಫ್) ದನದ ಕೊಟ್ಟಿಗೆ ಮತ್ತು ಚಿಲ್ಲರೆ ಅಂಗಡಿಗಳಿಗೆ ಸಂಬಂಧಿಸಿದಂತೆ ಸಂದಾಯದ ವಿವರಗಳು;

(ಜಿ) ಕುಶಲಕರ್ಮಿಗಳಿಗೆ ಮತ್ತು ಸಣ್ಣ ವ್ಯಾಪಾರಿಗಳಿಗೆ ಒಂದು ಸಲ ನೀಡಬೇಕಾದ ಮೊಬಲಗಿನ ವಿವರಗಳು;

(ಎಚ್) ಬಾಧಿತ ಕುಟುಂಬಗಳ ಸದಸ್ಯರಿಗೆ ಕಡ್ಡಾಯವಾಗಿ ಒದಗಿಸಬೇಕಾದ ಉದ್ಯೋಗದ ವಿವರಗಳು;

(ಐ) ಒಳಗೊಂಡಿರಬಹುದಾದ ಯಾವುದೇ ಮೀನುಗಾರಿಕೆ ಹಕ್ಕುಗಳ ವಿವರಗಳು;

(ಜೆ) ಒದಗಿಸಬೇಕಾದ ವರ್ಷಾಶನ ಮತ್ತು ಪಡೆಯಲು ಹಕ್ಕು ಇರುವ ಇತರ ಮೊಬಲಗಿನ ವಿವರಗಳು;

(ಕೆ) ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಕಲ್ಪಿಸಬೇಕಾದ ವಿಶೇಷ ವ್ಯವಸ್ಥೆಗಳ ವಿವರಗಳು:

ಪರಂತು, (ಎ) ಯಿಂದ (ಕೆ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಪೈಕಿ ಯಾವುದೇ ವಿಷಯವು ಬಾಧಿತ ಕುಟುಂಬಕ್ಕೆ ಅನ್ವಯವಾಗದಿರುವ ಸಂದರ್ಭದಲ್ಲಿ, 'ಅನ್ವಯವಾಗುವುದಿಲ್ಲ' ಎಂದು ಸೂಚಿಸತಕ್ಕದ್ದು:

ಮತ್ತು ಪರಂತು, ಸಮುಚಿತ ಸರ್ಕಾರವು, ಬೆಲೆ ಸೂಚ್ಯಂಕದಲ್ಲಿ ಆಗುವ ಹೆಚ್ಚಳವನ್ನು ಗಣನೆಗೆ ತೆಗೆದುಕೊಂಡು, ಬಾಧಿತ ಕುಟುಂಬಗಳಿಗೆ ಸಂದಾಯ ಮಾಡಬೇಕಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಮೊಬಲಗಿನ ದರವನ್ನು ಅಧಿಸೂಚನೆ ಹೊರಡಿಸುವ ಮೂಲಕ ಹೆಚ್ಚಿಸಬಹುದು.

**32. ಪುನರ್ವ್ಯವಸ್ಥೆ ಪ್ರದೇಶದಲ್ಲಿ ಮೂಲ ಸೌಕರ್ಯಗಳ ವ್ಯವಸ್ಥೆ.–** ಈ ಅಧಿನಿಯಮದಲ್ಲಿ ಪರಿಭಾಷಿಸಿರುವ ಪ್ರತಿಯೊಂದು ಪುನರ್ವ್ಯವಸ್ಥೆ ಪ್ರದೇಶದಲ್ಲಿ, ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲ ಮೂಲ ಸೌಲಭ್ಯಗಳನ್ನು ಮತ್ತು ಕನಿಷ್ಠ ನಾಗರಿಕ ಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಕಲೆಕ್ಟರ್‌ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**33. ಐತೀರ್ಪುಗಳಲ್ಲಿನ ತಪ್ಪುಗಳನ್ನು ಕಲೆಕ್ಟರ್‌ನು ಸರಿಪಡಿಸುವುದು.–** (1) ಕಲೆಕ್ಟರ್‌ನು, ಯಾವುದೇ ಕಾಲದಲ್ಲಿ, ಆದರೆ ಐತೀರ್ಪಿನ ದಿನಾಂಕದಿಂದ ಆರು ತಿಂಗಳನ್ನು ಮೀರದ ಅವಧಿಯೊಳಗೆ ಅಥವಾ ಪ್ರಕರಣ 64ರ ಮೇರೆಗೆ ನಿರ್ಧರಣೆಗಾಗಿ ಐತೀರ್ಪನ್ನು ಪ್ರಾಧಿಕಾರಕ್ಕೆ ಕಳುಹಿಸಿಕೊಡಲು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನನ್ನು ಅಗತ್ಯಪಡಿಸಲಾಗಿರುವಲ್ಲಿ, ನಿರ್ಧರಣೆಗಾಗಿ ಐತೀರ್ಪನ್ನು ಹಾಗೆ ಕಳುಹಿಸಿಕೊಡುವುದಕ್ಕೆ ಮುಂಚೆ, ಐತೀರ್ಪುಗಳಲ್ಲಿನ ಯಾವುದೇ ಲಿಪಿಕ ದೋಷಗಳನ್ನು ಅಥವಾ ಲೆಕ್ಕಚಾರದಲ್ಲಿನ ದೋಷಗಳನ್ನು ಅಥವಾ ಅದರಲ್ಲಿ ಕಂಡು ಬರುವ ತಪ್ಪುಗಳನ್ನು ತಾನಾಗಿಯೇ ಆಗಲಿ ಅಥವಾ ಆಸಕ್ತಿಯುಳ್ಳ ಯಾರೇ ವ್ಯಕ್ತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಸಲ್ಲಿಸಿದ ಅರ್ಜಿಯ ಮೇಲೆ ಆಗಲಿ, ಆದೇಶದ ಮೂಲಕ ಸರಿಪಡಿಸಬಹುದು:

ಪರಂತು, ದೋಷಗಳನ್ನು ಅಥವಾ ತಪ್ಪುಗಳನ್ನು ಹಾಗೆ ಸರಿಪಡಿಸುವುದರಿಂದಾಗಿ, ಯಾರೇ ವ್ಯಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವವಿದ್ದರೆ ಆ ವಿಷಯದ ಬಗ್ಗೆ ನಿವೇದಿಸಿಕೊಳ್ಳಲು ಅಂಥ ವ್ಯಕ್ತಿಗೆ ಯುಕ್ತ ಅವಕಾಶವನ್ನು ನೀಡಿದ ಹೊರತು, ಆ ದೋಷಗಳನ್ನು ಅಥವಾ ತಪ್ಪುಗಳನ್ನು ಸರಿಪಡಿಸತಕ್ಕದ್ದಲ್ಲ.

(2) ಕಲೆಕ್ಟರ್‌ನು ಐತೀರ್ಪಿನಲ್ಲಿನ ತಪ್ಪುಗಳನ್ನು ಅಥವಾ ದೋಷಗಳನ್ನು ಸರಿಪಡಿಸಿರುವ ಬಗ್ಗೆ ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ ಕೂಡಲೇ ನೋಟೀಸನ್ನು ನೀಡತಕ್ಕದ್ದು.

(3) ತಪ್ಪುಗಳನ್ನು ಅಥವಾ ದೋಷಗಳನ್ನು ಉಪಪ್ರಕರಣ (1)ರ ಮೇರೆಗೆ ಸರಿಪಡಿಸಿದ ಪರಿಣಾಮವಾಗಿ ಯಾರೇ ವ್ಯಕ್ತಿಗೆ ಯಾವುದೇ ಹೆಚ್ಚುವರಿ ಮೊಬಲಗನ್ನು ಸಂದಾಯ ಮಾಡಿರುವುದು ರುಜುವಾತಾದರೆ, ಹಾಗೆ ಸಂದಾಯ ಮಾಡಿರುವ ಹೆಚ್ಚುವರಿ ಮೊಬಲಗು ಮರುಪಾವತಿ ಮಾಡಲೇ ಬೇಕಾದಂಥದ್ದಾಗಿರತಕ್ಕದ್ದು ಮತ್ತು ಹಾಗೆ ಮರುಪಾವತಿ ಮಾಡಲು ತಪ್ಪಿದ ಅಥವಾ ನಿರಾಕರಿಸಿದ ಸಂದರ್ಭದಲ್ಲಿ ಆ ಹಣವನ್ನು ಸಮುಚಿತ ಸರ್ಕಾರವು ನಿಯಮಿಸಿದಂತೆ ವಸೂಲಿ ಮಾಡಬಹುದು.

**34. ವಿಚಾರಣೆಯ ಮುಂದೂಡಿಕೆ.–** ಕಲೆಕ್ಟರನು, ತಾನು ಸೂಕ್ತವೆಂದು ಭಾವಿಸುವಂಥ ಯಾವುದೇ ಕಾರಣಕ್ಕಾಗಿ, ಕಾಲಕಾಲಕ್ಕೆ, ತಾನು ನಿಗದಿಪಡಿಸಬಹುದಾದಂಥ ದಿನಕ್ಕೆ ವಿಚಾರಣೆಯನ್ನು ಮುಂದೂಡಬಹುದು.

**35. ಸಾಕ್ಷಿದಾರರನ್ನು ಸಮನ್ ಮಾಡಲು ಮತ್ತು ಹಾಜರಾಗುವಂತೆ ಅವರನ್ನು ಒತ್ತಾಯಿಸಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಿಸಲು ಅಧಿಕಾರ.–** ಈ ಅಧಿನಿಯಮದ ಮೇರೆಗೆ ವಿಚಾರಣೆಗಳನ್ನು ಮಾಡುವ ಉದ್ದೇಶಕ್ಕಾಗಿ, ಕಲೆಕ್ಟರನು, ಹಿತಾಸಕ್ತಿಯುಳ್ಳ ಪಕ್ಷಕಾರರ ಪೈಕಿ ಯಾರೇ ಪಕ್ಷಕಾರರೂ ಸೇರಿದಂತೆ ಸಾಕ್ಷಿದಾರರನ್ನು ಸಮನ್ ಮಾಡಲು ಮತ್ತು ಹಾಜರಾಗುವಂತೆ ಅವರನ್ನು ಒತ್ತಾಯಿಸಲು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಮೇರೆಗೆ ಸಿವಿಲ್ ನ್ಯಾಯಾಲಯಗಳ ಸಂದರ್ಭದಲ್ಲಿ ಉಪಬಂಧಿಸಿರುವಂಥದೇ ವಿಧಾನದಲ್ಲಿ ಮತ್ತು (ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ) ಅದೇ ರೀತಿಯಲ್ಲಿ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದು.

**36. ದಾಖಲೆಗಳು, ಮುಂತಾದವುಗಳನ್ನು ತರಿಸಿಕೊಳ್ಳಲು ಅಧಿಕಾರ.–** ಸಮುಚಿತ ಸರ್ಕಾರವು, ಪ್ರಕರಣ 30ರ ಮೇರೆಗೆ ಕಲೆಕ್ಟರನು ಐತೀರ್ಪು ನೀಡುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಯಾವುದೇ ನಿರ್ಣಯಗಳ ಅಥವಾ ಹೊರಡಿಸಿದ ಆದೇಶದ ಕಾನೂನುಸಮ್ಮತತೆಯ ಬಗ್ಗೆ ಅಥವಾ ಔಚಿತ್ಯದ ಬಗ್ಗೆ ಅಥವಾ ಅಂಥ ವ್ಯವಹರಣೆಗಳ ಕ್ರಮಬದ್ಧತೆಯ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ವ್ಯವಹರಣೆಗಳ (ವಿಚಾರಣೆ ಮೂಲಕ ಆದವುಗಳಾಗಿರಲಿ ಅಥವಾ ಅನ್ಯಥಾ) ಯಾವುದೇ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು:

ಪರಂತು, ಸಮುಚಿತ ಸರ್ಕಾರವು, ಯಾರೇ ವ್ಯಕ್ತಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡದೆ ಅಂಥ ವ್ಯಕ್ತಿಗೆ ಪ್ರತಿಕೂಲಕರವಾದಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ ಅಥವಾ ನಿರ್ದೇಶನವನ್ನು ನೀಡತಕ್ಕದ್ದಲ್ಲ.

**37. ಕಲೆಕ್ಟರನ ಐತೀರ್ಪುಗಳು ಯಾವಾಗ ಅಂತಿಮವಾದವುಗಳಾಗುತ್ತವೆ.–** (1) ಐತೀರ್ಪುಗಳನ್ನು ಕಲೆಕ್ಟರನ ಕಚೇರಿಯಲ್ಲಿ ಕಡತಕ್ಕೆ ಸೇರಿಸಿಟ್ಟಿರತಕ್ಕದ್ದು ಮತ್ತು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಹೊರತು, ಅವು ಅಂತಿಮವಾದವುಗಳು ಆಗಿರತಕ್ಕದ್ದು ಮತ್ತು ಕಲೆಕ್ಟರನಿಗೆ ಮತ್ತು ಹಿತಾಸಕ್ತಿಯುಳ್ಳ ಆಯಾಯ ವ್ಯಕ್ತಿಗಳು ಕಲೆಕ್ಟರನ ಮುಂದೆ ಹಾಜರಾಗಿರಲಿ ಅಥವಾ ಹಾಜರಾಗದಿರಲಿ ಅವರಿಗೆ ಸಂಬಂಧಿಸಿದಂತೆ, ಭೂಮಿಯ ಸರಿಯಾದ ವಿಸ್ತೀರ್ಣದ ಮತ್ತು ಮಾರುಕಟ್ಟೆ ಮೌಲ್ಯದ ಮತ್ತು ಭೂಮಿಗೆ ಲಗತ್ತಾಗಿರುವ ಆಸ್ತಿಗಳ, ನಿರ್ಧರಿಸಲಾಗಿರುವ ಸಮಾಧಾನಾರ್ಥಕ ಪರಿಹಾರದ ಮೊಬಲಗಿನ ಮತ್ತು ಹಿತಾಸಕ್ತಿಯುಳ್ಳ ವ್ಯಕ್ತಿಗಳ ನಡುವೆ ಪರಿಹಾರದ ಮೊಬಲಗನ್ನು ಹಂಚಿಕೆ ಮಾಡಿರುವುದರ ಕುರಿತ ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು.

(2) ಕಲೆಕ್ಟರನು, ಐತೀರ್ಪುಗಳನ್ನು ನೀಡಿದಾಗ ಖುದ್ದಾಗಿ ಅಥವಾ ತಮ್ಮ ಪ್ರತಿನಿಧಿಗಳ ಮೂಲಕ ಹಾಜರಾಗಿಲ್ಲದ ಹಿತಾಸಕ್ತಿಯುಳ್ಳ ಅಂಥ ವ್ಯಕ್ತಿಗಳಿಗೆ ತನ್ನ ಐತೀರ್ಪುಗಳ ಬಗ್ಗೆ ಕೂಡಲೇ ನೋಟೀಸನ್ನು ನೀಡತಕ್ಕದ್ದು.

(3) ಕಲೆಕ್ಟರನು, ಈ ಅಧಿನಿಯಮದ ಮೇರೆಗೆ ಅಂತಿಮವಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯ ವಿವರಗಳ ಜೊತೆಗೆ ಪ್ರತಿಯೊಬ್ಬ ವ್ಯಕ್ತಿಗೆ ಐತೀರ್ಪಿನಲ್ಲಿ ತಿಳಿಸಿರುವ ಪರಿಹಾರದ ಮೊಬಲಗೂ ಸೇರಿದಂತೆ ಭೂಸ್ವಾಧೀನದ ಪ್ರಕರಣದಲ್ಲಿ ಕೈಗೊಳ್ಳಲಾದ ಇಡೀ ವ್ಯವಹರಣೆಗಳ ಸಾರಾಂಶವನ್ನು ಸಾರ್ವಜನಿಕರು ನೋಡಲು ಮುಕ್ತವಾಗಿರಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಸೃಜಿಸಿದ ವೆಬ್‌ಸೈಟ್‌ಗೂ ಹಾಕತಕ್ಕದ್ದು.

**38. ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ.–** (1) ಕಲೆಕ್ಟರನು, ಪರಿಹಾರದ ಮೊಬಲಗನ್ನು ಮತ್ತು ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಗಾಗಿ ಪಡೆಯಲು ಹಕ್ಕಿರುವ ಮೊಬಲಗನ್ನು, ಪ್ರಕರಣ 30ರ ಮೇರೆಗೆ ನೀಡಿದ ಐತೀರ್ಪಿನ ದಿನಾಂಕದಿಂದ ಪ್ರಾರಂಭಿಸಿ ಪರಿಹಾರದ ಮೊಬಲಗಾದರೆ ಮೂರು ತಿಂಗಳ ಅವಧಿಯೊಳಗೆ ಮತ್ತು ಎರಡನೇ ಅನುಸೂಚಿಯಲ್ಲಿ ಪಟ್ಟಿ ಮಾಡಿರುವ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಗಾಗಿ ಪಡೆಯಲು ಹಕ್ಕುಳ್ಳ ಮೊಬಲಗಿನ ಭಾಗವಾಗಿದ್ದರೆ ಆರು ತಿಂಗಳುಗಳ ಅವಧಿಯೊಳಗೆ, ಅದನ್ನು ಪಡೆಯಲು ಹಕ್ಕಿರುವ ವ್ಯಕ್ತಿಗಳಿಗೆ ಪೂರ್ಣವಾಗಿ ಸಂದಾಯ ಮಾಡಲಾಗಿದೆ ಅಥವಾ ಕೊಡಲಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಂಡ ನಂತರ, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು:

ಪರಂತು, ಪಡೆಯಲು ಹಕ್ಕುಳ್ಳ ಮೂಲ ಸೌಲಭ್ಯಗಳಿಗೆ ಸಂಬಂಧಿಸಿದಂಥ, ಎರಡನೇ ಮತ್ತು ಮೂರನೇ ಅನುಸೂಚಿಗಳಲ್ಲಿ ಹೇಳಿರುವ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ಯಾಕೇಜಿನ ಘಟಕಾಂಶಗಳನ್ನು ಐತೀರ್ಪಿನ ದಿನಾಂಕದಿಂದ ಹದಿನೆಂಟು ತಿಂಗಳುಗಳ ಅವಧಿಯೊಳಗಾಗಿ ಒದಗಿಸತಕ್ಕದ್ದು.

ಮತ್ತೂ ಪರಂತು, ಸಾರ್ವಜನಿಕ ಉದ್ದೇಶಕ್ಕಾಗಿ ಇರುವಂಥ ನೀರಾವರಿ ಅಥವಾ ಜಲ ವಿದ್ಯುತ್ ಪ್ರಾಜೆಕ್ಟ್‌ಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ, ಸ್ವಾಧೀನಪಡಿಸಿಕೊಂಡ ಭೂಮಿಗಳು ಮುಳುಗಡೆಯಾಗುವ ದಿನಾಂಕಕ್ಕೆ ಆರು ತಿಂಗಳುಗಳಿಗೆ ಮುಂಚೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

(2) ಕಲೆಕ್ಟರನು, ಬಾಧಿತ ಕುಟುಂಬಗಳನ್ನು ಸ್ಥಳಾಂತರಿಸುವುದಕ್ಕೆ ಮುಂಚೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ರಕ್ರಿಯೆಯು ಎಲ್ಲ ದೃಷ್ಟಿಯಿಂದಲೂ ಪೂರ್ಣಗೊಂಡಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಜವಾಬ್ದಾರನಾಗಿರತಕ್ಕದ್ದು.

**39. ಅನೇಕ ಸಲ ಸ್ಥಳಾಂತರ ಮಾಡಿಸಿದ ಸಂದರ್ಭದಲ್ಲಿ ಹೆಚ್ಚುವರಿ ಪರಿಹಾರ.–** ಕಲೆಕ್ಟರನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಸಮುಚಿತ ಸರ್ಕಾರವು ಈಗಾಗಲೇ ಸ್ಥಳಾಂತರಿಸಿರುವ ಯಾವುದೇ ಕುಟುಂಬವನ್ನು ಸಾಧ್ಯವಾದಷ್ಟು ಮಟ್ಟಿಗೆ ಸ್ಥಳಾಂತರಿಸತಕ್ಕದ್ದಲ್ಲ ಮತ್ತು ಹಾಗೆ ಸ್ಥಳಾಂತರಿಸಿದ ಪಕ್ಷದಲ್ಲಿ ಎರಡನೆಯ ಸಲದ ಸ್ಥಳಾಂತರಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಮಾಡುವ ಸ್ಥಳಾಂತರಗಳಿಗೆ ಈ ಅಧಿನಿಯಮದ ಮೇರೆಗೆ ನಿರ್ಧರಣೆ ಮಾಡಿರುವ ಪರಿಹಾರದ ಮೊಬಲಗಿಗೆ ಸಮನಾದ ಹೆಚ್ಚುವರಿ ಪರಿಹಾರದ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

**40. ಕೆಲವು ಪ್ರಕರಣಗಳಲ್ಲಿ ಭೂಮಿಯನ್ನು ತುರ್ತಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ವಿಶೇಷ ಅಧಿಕಾರಗಳು.–** (1) ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುವ ಯಾವುದೇ ಭೂಮಿಯನ್ನು ತುರ್ತು ಸಂದರ್ಭಗಳಲ್ಲಿ,

ಯಾವುದೇ ಅಂಥ ಐತೀರ್ಪನ್ನು ನೀಡದಿದ್ದರೂ, ಪ್ರಕರಣ 21ರಲ್ಲಿ ತಿಳಿಸಿರುವ ನೋಟೀಸನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾದ ಮೇಲೆ ಸ್ವಾಧೀನಕ್ಕೆ ತೆಗೆದುಕೊಳ್ಳುವಂತೆ ಸಮುಚಿತ ಸರ್ಕಾರವು ನಿರ್ದೇಶಿಸಿದರೆ ಕಲೆಕ್ಟರನು ಹಾಗೆ ಮಾಡತಕ್ಕದ್ದು ಮತ್ತು ಆ ತರುವಾಯ ಆ ಭೂಮಿಯು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಸಂಪೂರ್ಣವಾಗಿ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸಮುಚಿತ ಸರ್ಕಾರಕ್ಕೆ, ಇರುವ ಅಧಿಕಾರಗಳು, ಸಂಸತ್ತಿನ ಅನುಮೋದನೆ ಪಡೆದು, ಭಾರತದ ರಕ್ಷಣೆಗಾಗಿ ಅಥವಾ ರಾಷ್ಟ್ರೀಯ ಭದ್ರತೆಗಾಗಿ ಅಥವಾ ನೈಸರ್ಗಿಕ ವಿಕೋಪಗಳಿಂದ ಉದ್ಭವಿಸುವ ಯಾವುದೇ ತುರ್ತು ಸಂದರ್ಭಗಳಿಗಾಗಿ ಅಥವಾ ಯಾವುದೇ ಇತರ ತುರ್ತು ಪರಿಸ್ಥಿತಿಗಳಿಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಭೂಮಿಯ ಕನಿಷ್ಠ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.

ಪರಂತು, ಕಲೆಕ್ಟರನು, ಈ ಉಪಪ್ರಕರಣದ ಮೇರೆಗೆ ಯಾವುದೇ ಕಟ್ಟಡವನ್ನು ಅಥವಾ ಕಟ್ಟಡದ ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ತನ್ನ ಉದ್ದೇಶವನ್ನು ತಿಳಿಸಿ, ಅದರ ಅಧಿಭೋಗದಾರನಿಗೆ ಕನಿಷ್ಠ ನಲವತ್ತೆಂಟು ಗಂಟೆಗಳ ಅವಧಿಯ ನೋಟೀಸನ್ನು ನೀಡದೆ ಅಥವಾ ಅನಗತ್ಯ ತೊಂದರೆ ಅನುಭವಿಸದೆ ಅಂಥ ಕಟ್ಟಡದಿಂದ ತನ್ನ ಚರ ಸ್ವತ್ತನ್ನು ಸ್ಥಳಾಂತರಿಸಲು ಅಂಥ ಅಧಿಭೋಗದಾರನಿಗೆ ಸಾಧ್ಯವಾಗುವಂತೆ ಮಾಡಲು ಎಷ್ಟು ದೀರ್ಘಾವಧಿ ಬೇಕಾಗಬಹುದೋ ಅಷ್ಟು ದೀರ್ಘಾವಧಿಯ ನೋಟೀಸನ್ನು ನೀಡದೆ, ಅಂಥ ಯಾವುದೇ ಕಟ್ಟಡವನ್ನು ಅಥವಾ ಕಟ್ಟಡದ ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಉಪಪ್ರಕರಣ (1)ರ ಮೇರೆಗೆ ಅಥವಾ ಉಪಪ್ರಕರಣ (2)ರ ಮೇರೆಗೆ ಯಾವುದೇ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಮುಂಚೆ, ಕಲೆಕ್ಟರನು, ಅಂಥ ಭೂಮಿಗೆ ತಾನು ಅಂದಾಜು ಮಾಡಿರುವಂಥ ಪರಿಹಾರದ ಮೊಬಲಗಿನ ಶೇಕಡಾ ಎಂಬತ್ತರಷ್ಟು ಮೊಬಲಗನ್ನು ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳ, ಪರಿಹಾರದ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(4) ಯಾವ ಭೂಮಿಗೆ ಉಪಪ್ರಕರಣ (1)ರ, ಉಪಪ್ರಕರಣ (2)ರ ಅಥವಾ ಉಪಪ್ರಕರಣ (3)ರ ಉಪಬಂಧಗಳು ಅನ್ವಯವಾಗುತ್ತವೆ ಎಂದು ಸಮುಚಿತ ಸರ್ಕಾರವು ಅಭಿಪ್ರಾಯಪಡುವುದೋ ಆ ಭೂಮಿಗೆ ಅಧ್ಯಾಯ II ರಿಂದ ಅಧ್ಯಾಯ VI ರ ವರೆಗಿನ ಅಧ್ಯಾಯಗಳ ಯಾವುದೇ ಅಥವಾ ಎಲ್ಲ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲವೆಂದು ಸಮುಚಿತ ಸರ್ಕಾರವು ನಿರ್ದೇಶನ ನೀಡಬಹುದು, ಮತ್ತು, ಸಮುಚಿತ ಸರ್ಕಾರವು ಹಾಗೆ ನಿರ್ದೇಶನ ನೀಡಿದರೆ, ಪ್ರಕರಣ 11ರ ಉಪಪ್ರಕರಣ (1)ರ ಮೇರೆಗೆ ಪ್ರಾಥಮಿಕ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದ ತರುವಾಯ, ಯಾವುದೇ ಕಾಲದಲ್ಲಿ, ಆ ಭೂಮಿಯ ಸಂಬಂಧದಲ್ಲಿ ಪ್ರಕರಣ 19ರ ಮೇರೆಗೆ ಘೋಷಣೆಯನ್ನು ಮಾಡಬಹುದು.

(5) ಈ ಪ್ರಕರಣದ ಉಪಪ್ರಕರಣ (1)ರ ಮೇರೆಗೆ ಯಾವ ಭೂಮಿಯ ಮತ್ತು ಸ್ವತ್ತಿನ ಸ್ವಾಧೀನಕ್ಕಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದೆಯೋ ಆ ಭೂಮಿಗೆ ಮತ್ತು ಸ್ವತ್ತಿಗೆ ಕಲೆಕ್ಟರನು ಪ್ರಕರಣ 27ರ ಮೇರೆಗೆ ನಿರ್ಧರಣೆ ಮಾಡಿರುವಂಥ ಒಟ್ಟು ಪರಿಹಾರ ಮೊಬಲಗಿನ ಶೇ. ಎಪ್ಪತ್ತೈದರಷ್ಟು ಹೆಚ್ಚುವರಿ ಪರಿಹಾರದ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಪರಂತು, ಪ್ರಾಜೆಕ್ಟ್ ಭಾರತದ ಸಾರ್ವಭೌಮತ್ವಕ್ಕೆ ಮತ್ತು ಅಖಂಡತೆಗೆ, ದೇಶದ ಭದ್ರತೆಗೆ ಮತ್ತು ಸೇನಾ ಕಾರ್ಯತಂತ್ರ ಹಿತಾಸಕ್ತಿಗಳಿಗೆ ಅಥವಾ ವಿದೇಶಗಳೊಂದಿಗಿನ ಸಂಬಂಧಗಳಿಗೆ ಸಂಬಂಧಿಸಿದ ಪ್ರಾಜೆಕ್ಟ್ ಆಗಿರುವ ಸಂದರ್ಭದಲ್ಲಿ ಯಾವುದೇ ಹೆಚ್ಚುವರಿ ಪರಿಹಾರವನ್ನು ಸಂದಾಯ ಮಾಡುವ ಅವಶ್ಯಕತೆ ಇರುವುದಿಲ್ಲ.

**41. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ವಿಶೇಷ ಉಪಬಂಧಗಳು.–** (1) ಸಾಧ್ಯವಾದಷ್ಟು ಮಟ್ಟಿಗೆ, ಅನುಸೂಚಿತ ಪ್ರದೇಶಗಳಲ್ಲಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದಲ್ಲ.

(2) ಹಾಗೆ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದಲ್ಲಿ, ಅನ್ಯ ಮಾರ್ಗವಿಲ್ಲದೇ ಕೊನೆಯ ಪ್ರಯತ್ನವಾಗಿ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದು.

(3) ಅನುಸೂಚಿತ ಪ್ರದೇಶಗಳಲ್ಲಿರುವ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದ ಅಥವಾ ಪರಭಾರೆ ಮಾಡಬೇಕಾದ ಸಂದರ್ಭದಲ್ಲಿ, ತುರ್ತು ಸಂದರ್ಭದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದೂ ಸೇರಿದಂತೆ ಅಂಥ ಪ್ರದೇಶಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಎಲ್ಲ ಪ್ರಕರಣಗಳಲ್ಲಿ ಸಂವಿಧಾನದ ಐದನೇ ಅನುಸೂಚಿಯಲ್ಲಿ ತಿಳಿಸಿರುವ ಅನುಸೂಚಿತ ಪ್ರದೇಶಗಳಲ್ಲಿರುವ ಆಯಾಯ ಹಂತದ, ಸಂದರ್ಭಾನುಸಾರ ಸಂಬಂಧಪಟ್ಟ ಗ್ರಾಮ ಸಭಾದ ಅಥವಾ ಪಂಚಾಯಿತಿಗಳ ಅಥವಾ ಸ್ವಾಯತ್ತ ಜಿಲ್ಲಾ ಪರಿಷತ್ತುಗಳ ಪೂರ್ವ ಸಮ್ಮತಿಯನ್ನು ಈ ಅಧಿನಿಯಮದ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ಪಡೆಯತಕ್ಕದ್ದು:

ಪರಂತು, ಗ್ರಾಮ ಸಭೆಯು ಅಸ್ತಿತ್ವದಲ್ಲಿಲ್ಲದಿರುವ ಅಥವಾ ಅದನ್ನು ರಚಿಸದಿರುವ ಕಡೆಗಳಲ್ಲಿ ಪಂಚಾಯಿತಿಗಳ ಅಥವಾ ಸ್ವಾಯತ್ತ ಜಿಲ್ಲಾ ಪರಿಷತ್ತುಗಳ ಸಮ್ಮತಿಯನ್ನು ಪಡೆಯತಕ್ಕದ್ದು.

(4) ಅಗತ್ಯ ನಿಕಾಯದ ಪರವಾಗಿ ಯಾವ ಪ್ರಾಜೆಕ್ಟ್‌ಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆಯೋ, ಯಾವ ಪ್ರಾಜೆಕ್ಟ್‌ನಲ್ಲಿ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಬುಡಕಟ್ಟುಗಳ ಕುಟುಂಬಗಳನ್ನು ಒಲ್ಲದ ಮನಸ್ಸಿನಿಂದ ಸ್ಥಳಾಂತರಿಸಬೇಕಾಗಿದೆಯೋ ಆ ಪ್ರಾಜೆಕ್ಟ್‌ನ ಸಂದರ್ಭದಲ್ಲಿ, ಭೂಸ್ವಾಧೀನದ ಜೊತೆ ಜೊತೆಗೆ ವಿಶೇಷ ಅಭಿಯಾನವನ್ನು ಕೈಗೊಳ್ಳುವ ಮೂಲಕ, ನಿರ್ಣಯಿಸಬೇಕಾಗಿರುವ ಆದರೆ ನಿರ್ಣಯಿಸಿರದ ಭೂ ಹಕ್ಕುಗಳನ್ನು ನಿರ್ಣಯಿಸುವುದಕ್ಕೆ ಮತ್ತು ಪರಭಾರೆ ಮಾಡಿದ ಭೂಮಿಗಳ ಮೇಲೆ ಅನುಸೂಚಿತ ಬುಡಕಟ್ಟುಗಳಿಗೆ ಹಾಗೂ ಅನುಸೂಚಿತ ಜಾತಿಗಳಿಗೆ ಇದ್ದ ಹಕ್ಕುಗಳನ್ನು ಪುನಃ ಅವರಿಗೆ ಕೊಡುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನದ ವಿವರಗಳನ್ನು ನಿರೂಪಿಸಿ, ನಿಯಮಿಸಬಹುದಾದಂಥ ರೀತಿಯಲ್ಲಿ ಅಭಿವೃದ್ಧಿ ಯೋಜನೆಯೊಂದನ್ನು ತಯಾರಿಸತಕ್ಕದ್ದು.

(5) ಅಭಿವೃದ್ಧಿ ಯೋಜನೆಯಲ್ಲಿ, ಬುಡಕಟ್ಟು ಸಮುದಾಯಗಳ ಹಾಗೂ ಅನುಸೂಚಿತ ಜಾತಿಗಳ ಅಗತ್ಯತೆಗಳನ್ನು ಪೂರೈಸಲು, ಸಾಕಾಗುವಷ್ಟು, ಬದಲಿ ಉರುವಲು, ಮೇವು ಮತ್ತು ಚೌಬೀನೆಯೇತರ ಅರಣ್ಯ ಉತ್ಪನ್ನ ಸಂಪನ್ಮೂಲಗಳನ್ನು ಅರಣ್ಯೇತರ ಭೂಮಿಯಲ್ಲಿ ಐದು ವರ್ಷಗಳ ಅವಧಿಯೊಳಗಾಗಿ ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರಮವು ಸಹ ಒಳಗೊಂಡಿರತಕ್ಕದ್ದು.

(6) ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಬುಡಕಟ್ಟುಗಳ ಜನರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ, ಕೊಡಬೇಕಾದ ಪರಿಹಾರ ಮೊಬಲಗಿನ ಪೈಕಿ ಕನಿಷ್ಠಪಕ್ಷ ಮೂರನೇ ಒಂದು ಭಾಗದ ಮೊಬಲಗನ್ನು ಪ್ರಾರಂಭದಲ್ಲಿ ಮೊದಲ ಕಂತಾಗಿ ಬಾಧಿತ ಕುಟುಂಬಗಳಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದ ಪರಿಹಾರದ ಮೊಬಲಗನ್ನು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ತರುವಾಯ ಸಂದಾಯ ಮಾಡತಕ್ಕದ್ದು.

(7) ಅನುಸೂಚಿತ ಬುಡಕಟ್ಟುಗಳ ಬಾಧಿತ ಕುಟುಂಬಗಳನ್ನು ಆದಷ್ಟು ಮಟ್ಟಿಗೆ ಅದೇ ಅನುಸೂಚಿತ ಪ್ರದೇಶದಲ್ಲಿ ಒಂದೇ ಸ್ಥಳದಲ್ಲಿ ಪುನರ್ ನೆಲೆಗೊಳಿಸತಕ್ಕದ್ದು ಹೀಗೆ ಮಾಡುವುದರಿಂದ ತಮ್ಮ ಜನಾಂಗೀಯ, ಭಾಷೆಯ ಮತ್ತು ಸಾಂಸ್ಕೃತಿಕ ವಿಶಿಷ್ಟತೆಯನ್ನು ಉಳಿಸಿಕೊಂಡು ಬರಲು ಅವರಿಗೆ ಸಾಧ್ಯವಾಗುತ್ತದೆ.

(8) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನರು ಪ್ರಧಾನವಾಗಿ ವಾಸವಾಗಿರುವ ಪುನರ್ವ್ಯವಸ್ಥೆ ಪ್ರದೇಶಗಳಲ್ಲಿ ಆ ಸಮುದಾಯದ ಮತ್ತು ಸಾಮಾಜಿಕ ಸಮಾರಂಭಗಳಿಗಾಗಿ, ಸಮುಚಿತ ಸರ್ಕಾರವು ನಿರ್ಧರಿಸಬಹುದಾದಷ್ಟು ಪ್ರಮಾಣದ ಭೂಮಿಯನ್ನು ಉಚಿತವಾಗಿ ಒದಗಿಸತಕ್ಕದ್ದು.

(9) ಬುಡಕಟ್ಟು ಜನರ ಭೂಮಿಗಳನ್ನು ಅಥವಾ ಅನುಸೂಚಿತ ಜಾತಿಗಳ ಜನರ ಭೂಮಿಗಳನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನನ್ನು ಮತ್ತು ವಿನಿಯಮಗಳನ್ನು ಉಪೇಕ್ಷಿಸಿ ಯಾವುದೇ ರೀತಿಯಲ್ಲಿ ಪರಭಾರೆ ಮಾಡಿದರೆ ಅದನ್ನು ಅನೂರ್ಜಿತ ಎಂದು ಪರಿಗಣಿಸತಕ್ಕದ್ದು, ಮತ್ತು ಅಂಥ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಪ್ರಯೋಜನಗಳು ಬುಡಕಟ್ಟಿಗೆ ಸೇರಿದ ಮೂಲ ಭೂ ಮಾಲೀಕರಿಗೆ ಅಥವಾ ಅನುಸೂಚಿತ ಜಾತಿಗಳಿಗೆ ಸೇರಿದ ಭೂ ಮಾಲೀಕರಿಗೆ ದೊರೆಯುವಂತೆ ಮಾಡತಕ್ಕದ್ದು.

(10) ಭೂಸ್ವಾಧೀನ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶದಲ್ಲಿರುವ ನದಿಯಲ್ಲಿ ಅಥವಾ ಕೊಳದಲ್ಲಿ ಅಥವಾ ಅಣೆಕಟ್ಟೆಯಲ್ಲಿ ಮೀನು ಹಿಡಿಯುವ ಹಕ್ಕುಗಳನ್ನು ಹೊಂದಿರುವ ಬಾಧಿತ ಅನುಸೂಚಿತ ಬುಡಕಟ್ಟು ಜನರಿಗೆ, ಇತರ ಪಾರಂಪರಿಕ ಅರಣ್ಯವಾಸಿಗಳಿಗೆ ಮತ್ತು ಅನುಸೂಚಿತ ಜಾತಿಗಳ ಜನರಿಗೆ ನೀರಾವರಿಯ ಅಥವಾ ಜಲ ವಿದ್ಯುತ್ ಯೋಜನೆಯ ಜಲಾಶಯ ಪ್ರದೇಶದಲ್ಲಿ ಮೀನು ಹಿಡಿಯುವ ಹಕ್ಕನ್ನು ನೀಡತಕ್ಕದ್ದು.

(11) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಬಾಧಿತ ಕುಟುಂಬಗಳಿಗೆ ಜಿಲ್ಲೆಯಿಂದ ಹೊರಗೆ ಮರು ನೆಲೆ ಕಲ್ಪಿಸಿದ್ದರೆ, ಆಗ, ಅವರಿಗೆ ಐವತ್ತು ಸಾವಿರ ರೂಪಾಯಿಗಳ ಒಂದು ಸಲದ ಹಕ್ಕಿನ ಮೊಬಲಗಿನ ಜೊತೆಗೆ ಅವರು ಪುನರ್ವಸತಿಯ ಮತ್ತು ಪುನರ್ವ್ಯವಸ್ಥೆಯ ಯಾವ ಯಾವ ಸೌಲಭ್ಯಗಳಿಗೆ ಹಕ್ಕು ಹೊಂದಿದ್ದಾರೋ ಆ ಸೌಲಭ್ಯಗಳಿಗಿಂತ ಶೇಕಡಾ 25ರಷ್ಟು ಹೆಚ್ಚಿನ ಸೌಲಭ್ಯಗಳನ್ನು ಹಣದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

**42. ಮೀಸಲಾತಿ ಮತ್ತು ಇತರ ಸೌಲಭ್ಯಗಳು.–** (1) ಭೂಸ್ವಾಧೀನದ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶಗಳಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಅನುಸೂಚಿತ ಜಾತಿಗಳಿಗೆ ದೊರೆಯುವ ಮೀಸಲಾತಿ ಸೌಲಭ್ಯಗಳೂ ಸೇರಿದಂತೆ ಎಲ್ಲ ಸೌಲಭ್ಯಗಳೂ ಪುನರ್ವ್ಯವಸ್ಥೆ ಪ್ರದೇಶದಲ್ಲಿಯೂ ಮುಂದುವರೆಯತಕ್ಕದ್ದು.

(2) ಸಂವಿಧಾನದ ಐದನೇ ಅನುಸೂಚಿಯಲ್ಲಿ ತಿಳಿಸಿರುವ ಅನುಸೂಚಿತ ಪ್ರದೇಶಗಳಲ್ಲಿ ಅಥವಾ ಸಂವಿಧಾನದ ಆರನೇ ಅನುಸೂಚಿಯಲ್ಲಿ ತಿಳಿಸಿರುವ ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನುಸೂಚಿತ ಬುಡಕಟ್ಟುಗಳ ಬಾಧಿತ ಕುಟುಂಬಗಳಿಗೆ ಆ ಪ್ರದೇಶಗಳಿಂದ ಹೊರಗಡೆ ಮರು ನೆಲೆ ಕಲ್ಪಿಸಿದಾಗ, ಈ ಅಧಿನಿಯಮದ ಮೇರೆಗೆ ಅವರು ಅನುಭವಿಸುತ್ತಿರುವ ಎಲ್ಲ ಶಾಸನಾತ್ಮಕ ರಕ್ಷಣೆಗಳನ್ನು, ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು, ಪುನರ್ ವ್ಯವಸ್ಥೆ ಪ್ರದೇಶವು ಐದನೇ ಅನುಸೂಚಿಯಲ್ಲಿ ತಿಳಿಸಿರುವ ಅನುಸೂಚಿತ ಪ್ರದೇಶವಾಗಿರಲಿ ಅಥವಾ ಆಗಿಲ್ಲದಿರಲಿ, ಅಥವಾ ಆರನೇ ಅನುಸೂಚಿಯಲ್ಲಿ ತಿಳಿಸಿರುವ ಬುಡಕಟ್ಟು ಪ್ರದೇಶವಾಗಿರಲಿ ಅಥವಾ ಆಗಿಲ್ಲದಿರಲಿ ಅದನ್ನು ಪರಿಗಣಿಸದೆ, ಅವರನ್ನು ಯಾವ ಪ್ರದೇಶದಲ್ಲಿ ಪುನರ್ ನೆಲೆಗೊಳಿಸಲಾಯಿತೋ ಆ ಪ್ರದೇಶಕ್ಕೆ ವಿಸ್ತರಿಸತಕ್ಕದ್ದು.

(3) ಸಮುದಾಯದ ಹಕ್ಕುಗಳನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006ರ (2007ರ 2) ಉಪಬಂಧಗಳ ಮೇರೆಗೆ ನಿರ್ಣಯಿಸಲಾಗಿದ್ದರೆ, ಅವುಗಳ ಪ್ರಮಾಣವನ್ನು ಹಣದ ರೂಪದಲ್ಲಿ ನಿಷ್ಕರ್ಷೆ ಮಾಡತಕ್ಕದ್ದು ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಕಾರಣದಿಂದಾಗಿ ಸ್ಥಳಾಂತರಗೊಂಡ ಸಂಬಂಧಪಟ್ಟ ವ್ಯಕ್ತಿಗೆ, ಅವನು ಸಮುದಾಯ ಹಕ್ಕುಗಳಲ್ಲಿ ಹೊಂದಿರುವ ಪಾಲಿನ ಪ್ರಮಾಣಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು.

## ಅಧ್ಯಾಯ VI

## ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಯ ಕಾರ್ಯವಿಧಾನ ಮತ್ತು ರೀತಿ

**43. ಆಡಳಿತಗಾರನ ನೇಮಕ.–** (1) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರಣದಿಂದಾಗಿ ಜನರನ್ನು ಒಲ್ಲದ ಮನಸ್ಸಿನಿಂದ ಸ್ಥಳಾಂತರ ಮಾಡಬೇಕಾದ ಸಂಭವವಿದೆಯೆಂದು ಸಮುಚಿತ ಸರ್ಕಾರಕ್ಕೆ ಮನದಟ್ಟಾದರೆ, ಆಗ, ರಾಜ್ಯ ಸರ್ಕಾರವು, ಆ ಯೋಜನೆಗೆ ಸಂಬಂಧಿಸಿದಂತೆ, ಜಂಟಿ ಕಲೆಕ್ಟರನ ಅಥವಾ ಹೆಚ್ಚುವರಿ ಕಲೆಕ್ಟರನ ಅಥವಾ ಉಪಕಲೆಕ್ಟರನ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯನ್ನು ಅಥವಾ ಕಂದಾಯ ಇಲಾಖೆಯ ತತ್ಸಮಾನ ದರ್ಜೆಯ ಅಧಿಕಾರಿಯನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಆಡಳಿತಗಾರನಾಗಿ ಅಧಿಸೂಚನೆಯ ಮೂಲಕ ನೇಮಕ ಮಾಡತಕ್ಕದ್ದು.

(2) ಸಮರ್ಥವಾಗಿ ಕಾರ್ಯನಿರ್ವಹಿಸಲು ಮತ್ತು ವಿಶೇಷ ಕಾಲಮಿತಿಯೊಳಗೆ ಕಾರ್ಯಗಳನ್ನು ಪೂರ್ಣಗೊಳಿಸಲು ಆಡಳಿತಗಾರನಿಗೆ ಸಾಧ್ಯವಾಗುವಂತೆ ಮಾಡುವ ದೃಷ್ಟಿಯಿಂದ, ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಅವನಿಗೆ ಜವಾಬ್ದಾರಿಗಳನ್ನು ನೀಡತಕ್ಕದ್ದು ಮತ್ತು ಕಚೇರಿ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು ಮತ್ತು ಸಮುಚಿತ ಸರ್ಕಾರವು ನಿರ್ಧರಿಸಬಹುದಾದಂಥ, ಅವನಿಗೆ ಅಧೀನರಾಗಿರತಕ್ಕಂತೆ ಅಧಿಕಾರಿಗಳು ಮತ್ತು ನೌಕರರು ಅವನಿಗೆ ನೆರವಾಗತಕ್ಕದ್ದು.

(3) ಸಮುಚಿತ ಸರ್ಕಾರದ ಮತ್ತು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಆಯುಕ್ತರ ಅಧೀಕ್ಷಣೆಗೆ, ನಿರ್ದೇಶನಗಳಿಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಯೋಜನೆಯನ್ನು ರೂಪಿಸುವ, ಜಾರಿಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವು ಆಡಳಿತಗಾರನಲ್ಲಿ ನಿಹಿತವಾಗಿರತಕ್ಕದ್ದು.

**44. ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಆಯುಕ್ತ.–** (1) ರಾಜ್ಯ ಸರ್ಕಾರವು, ಬಾಧಿತ ಕುಟುಂಬಗಳ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಾಗಿ ಆಯುಕ್ತನ ದರ್ಜೆಯ ಅಥವಾ ಆ ಸರ್ಕಾರದ ಕಾರ್ಯದರ್ಶಿಯ ದರ್ಜೆಯ ಒಬ್ಬ ಅಧಿಕಾರಿಯನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಆಯುಕ್ತನನ್ನಾಗಿ ಈ ಅಧಿನಿಯಮದ ಮೇರೆಗೆ ನೇಮಕ ಮಾಡತಕ್ಕದ್ದು.

(2) ಆಯುಕ್ತನು ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾರ್ಯಯೋಜನೆಗಳನ್ನು ಅಥವಾ ಯೋಜನೆಗಳನ್ನು ರೂಪಿಸುವ ಕಾರ್ಯವನ್ನು ಮತ್ತು ಅಂಥ ಕಾರ್ಯ ಯೋಜನೆಗಳ ಅಥವಾ ಯೋಜನೆಗಳ ಸಮರ್ಪಕ ಅನುಷ್ಠಾನ ಕಾರ್ಯವನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

(3) ಆಯುಕ್ತನು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಸಭಾಗಳೊಂದಿಗೆ ಹಾಗೂ ನಗರ ಪ್ರದೇಶಗಳಲ್ಲಿ ಪುರಸಭೆಗಳೊಂದಿಗೆ ಸಮಾಲೋಚಿಸಿ ಅನುಷ್ಠಾನೋತ್ತರ ಸಾಮಾಜಿಕ ಪರಿಶೋಧನೆಯನ್ನು ನಡೆಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

**45. ಪ್ರಾಜೆಕ್ಟ್ ಮಟ್ಟದಲ್ಲಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಸಮಿತಿ.–** (1) ಸಮುಚಿತ ಸರ್ಕಾರವು, ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯು ಒಂದು ನೂರು ಎಕರೆಗೆ ಸಮನಾಗಿದ್ದರೆ ಅಥವಾ ಒಂದು ನೂರು ಎಕರೆಗಿಂತ ಹೆಚ್ಚಿದ್ದರೆ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾರ್ಯ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಪರಿಶೀಲಿಸಲು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಸಭಾದೊಂದಿಗೆ ಮತ್ತು ನಗರ ಪ್ರದೇಶಗಳಲ್ಲಿ ಪುರಸಭೆಗಳೊಂದಿಗೆ ಸಮಾಲೋಚಿಸಿ ಅನುಷ್ಠಾನೋತ್ತರ ಸಾಮಾಜಿಕ ಪರಿಶೋಧನೆಗಳನ್ನು ನಡೆಸಲು ಕಲೆಕ್ಟರ್‌ನ ಅಧ್ಯಕ್ಷತೆಯಲ್ಲಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಸಮಿತಿಯು, ಸಮುಚಿತ ಸರ್ಕಾರದ ಅಧಿಕಾರಿಗಳಲ್ಲದೆ, ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಭೂಸ್ವಾಧೀನ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶದಲ್ಲಿ ವಾಸವಾಗಿರುವ ಮಹಿಳೆಯರ ಒಬ್ಬ ಪ್ರತಿನಿಧಿ;

(ಬಿ) ಭೂಸ್ವಾಧೀನ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಬುಡಕಟ್ಟುಗಳ ತಲಾ ಒಬ್ಬ ಪ್ರತಿನಿಧಿ;

(ಸಿ) ಆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಒಬ್ಬ ಪ್ರತಿನಿಧಿ;

(ಡಿ) ರಾಷ್ಟ್ರೀಕೃತ ಬ್ಯಾಂಕಿನ ಒಬ್ಬ ಪ್ರತಿನಿಧಿ;

(ಇ) ಪ್ರಾಜೆಕ್ಟ್‌ನ ಭೂಸ್ವಾಧೀನಾಧಿಕಾರಿ;

(ಎಫ್) ಭೂಸ್ವಾಧೀನ ಉದ್ದೇಶಕ್ಕಾಗಿ ಅಧಿಸೂಚಿಸಿರುವ ಪ್ರದೇಶದಲ್ಲಿರುವ ಪಂಚಾಯಿತಿಗಳ ಅಥವಾ ಪುರಸಭೆಗಳ ಅಧ್ಯಕ್ಷರು ಅಥವಾ ಅವರ ನಾಮನಿರ್ದೇಶಿತರು;

(ಜಿ) ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷ ಅಥವಾ ಅವನ ನಾಮನಿರ್ದೇಶಿತ;

(ಹೆಚ್) ಸಂಬಂಧಪಟ್ಟ ಪ್ರದೇಶದ ಸಂಸತ್ ಸದಸ್ಯ ಮತ್ತು ವಿಧಾನ ಸಭಾ ಸದಸ್ಯ ಅಥವಾ ಅವರ ನಾಮನಿರ್ದೇಶಿತರು;

(ಐ) ಅಗತ್ಯ ನಿಕಾಯದ ಒಬ್ಬ ಪ್ರತಿನಿಧಿ; ಮತ್ತು

(ಜೆ) ಸದಸ್ಯ–ಸಂಚಾಲಕನಾಗಿ ಪುನರ್ವಸತಿ ಮತ್ತು ಪುನರ್–ವ್ಯವಸ್ಥೆಯ ಆಡಳಿತಗಾರ.

(3) ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಸಮಿತಿಯ, ಈ ಪ್ರಕರಣದಲ್ಲಿ ತಿಳಿಸಿರುವ ಪ್ರಕ್ರಿಯೆಯ ನಿರ್ವಹಣೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ನಿಯಂತ್ರಿಸುವ ಕಾರ್ಯವಿಧಾನವು ಸಮುಚಿತ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**46. ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಉಪಬಂಧಗಳು ನಿರ್ದಿಷ್ಟಪಡಿಸಿದ ವ್ಯಕ್ತಿಗಳಲ್ಲದ ಕೆಲವು ವ್ಯಕ್ತಿಗಳ ಪ್ರಕರಣದಲ್ಲಿ ಅನ್ವಯವಾಗುವುದು.–** (1) ನಿರ್ದಿಷ್ಟಪಡಿಸಿದ ವ್ಯಕ್ತಿಯಲ್ಲದ ಯಾರೇ ವ್ಯಕ್ತಿಯು, ಸಮುಚಿತ

ಸರ್ಕಾರವು ರಾಜ್ಯದ ನಿರ್ದಿಷ್ಟ ಸುಸಂಗತ ಸಂಗತಿಗಳನ್ನು ಮತ್ತು ಸಂದರ್ಭ ಸನ್ನಿವೇಶಗಳನ್ನು ಪರಿಗಣಿಸಿ ಅಧಿಸೂಚಿಸಬಹುದಾದಂಥ ಯಾವ ಪರಿಮಿತಿಗಳಿಗೆ ಈ ಅಧಿನಿಯಮದ ಮೇರೆಗೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ವೆಚ್ಚಗಳನ್ನು ಪಾವತಿಸುವುದು ಅಗತ್ಯವಾಗಿದೆಯೋ ಆ ಪರಿಮಿತಿಗಳಿಗೆ ಸಮನಾದ ಅಥವಾ ಆ ಪರಿಮಿತಿಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಭೂಮಿಯನ್ನು ಖಾಸಗಿ ಮಾತುಕತೆಗಳ ಮೂಲಕ ಖರೀದಿಸುತ್ತಿದ್ದರೆ ಆಗ ಅವನು,–

(ಎ) ಖರೀದಿಯ ಇಂಗಿತವನ್ನು;

(ಬಿ) ಯಾವ ಉದ್ದೇಶಕ್ಕಾಗಿ ಅಂಥ ಖರೀದಿಯನ್ನು ಮಾಡಲಾಗುತ್ತಿದೆಯೋ ಆ ಉದ್ದೇಶವನ್ನು;

(ಸಿ) ಖರೀದಿಸಬೇಕಾದ ಭೂಮಿಯ ವಿವರಗಳನ್ನು

– ಸ್ಪಷ್ಟವಾಗಿ ತಿಳಿಸಿ ಜಿಲ್ಲಾ ಕಲೆಕ್ಟರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಈ ಅಧಿನಿಯಮದ ಮೇರೆಗಿನ ಸಂಬಂಧಪಟ್ಟ ಎಲ್ಲಾ ಉಪಬಂಧಗಳ ಪಾಲನೆ ಕುರಿತಂತೆ ವಿಷಯವನ್ನು ಆಯುಕ್ತನಿಗೆ ಕಳುಹಿಸಿಕೊಡುವುದು ಕಲೆಕ್ಟರ್‌ನ ಕರ್ತವ್ಯವಾಗಿರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಆಯುಕ್ತನು ಅನುಮೋದಿಸಿದ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಯೋಜನೆಯ ಆಧಾರದ ಮೇಲೆ, ಕಲೆಕ್ಟರನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಗಾಗಿ ಪಡೆಯಲು ಇರುವ ಮೊಬಲಗಿನ ವಿವರಗಳನ್ನು ಒಳಗೊಂಡ ಪ್ರತ್ಯೇಕ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸದಿದ್ದರೆ ಭೂಮಿಯ ಬಳಕೆಯ ಯಾವುದೇ ಬದಲಾವಣೆಗೆ ಅನುಮತಿ ನೀಡತಕ್ಕದ್ದಲ್ಲ.

(5) ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಏರ್ಪಾಡುಗಳನ್ನು ನೆರವೇರಿಸದೇ ನಿರ್ದಿಷ್ಟಪಡಿಸಿದ ವ್ಯಕ್ತಿಗಳಲ್ಲದ ಯಾರೇ ವ್ಯಕ್ತಿಯು ಮಾಡುವ ಭೂಮಿಯ ಯಾವುದೇ ಖರೀದಿಯು ಆರಂಭದಿಂದಲೇ ಅನೂರ್ಜಿತವಾಗತಕ್ಕದ್ದು:

ಪರಂತು, ಭೂಮಿಯ ಮಾರಾಟಕ್ಕಾಗಿ ಅಥವಾ ಖರೀದಿಗಾಗಿ ಸಮುಚಿತ ಸರ್ಕಾರವು ತನ್ನ ರಾಜ್ಯದಲ್ಲಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಏರ್ಪಾಟುಗಳಲ್ಲಿ ಅವಕಾಶ ಕಲ್ಪಿಸಬಹುದು ಮತ್ತು ಸದರಿ ಉದ್ದೇಶಕ್ಕಾಗಿ ಮಿತಿಗಳನ್ನು ಅಥವಾ ಗರಿಷ್ಠ ಪರಿಮಿತಿಯನ್ನು ಕೂಡ ನಿಗದಿಪಡಿಸತಕ್ಕದ್ದು.

(6) 2011ರ ಸೆಪ್ಟೆಂಬರ್ 5 ರಂದು ಅಥವಾ ಆ ತರುವಾಯ ಯಾರೇ ವ್ಯಕ್ತಿಯು ಖಾಸಗಿ ಮಾತುಕತೆಗಳ ಮೂಲಕ ಯಾವುದೇ ಜಮೀನನ್ನು ಖರೀದಿಸಿದ್ದರೆ ಅದು ಉಪಪ್ರಕರಣ (1)ರಲ್ಲಿ ತಿಳಿಸಿದ ಮಿತಿಗಳಿಗಿಂತ ಹೆಚ್ಚಾಗಿದ್ದರೆ ಮತ್ತು ಆ ಭೂಮಿಯನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಒಳಗಾಗಿ ಸ್ವಾಧೀನಪಡಿಸಿಕೊಂಡಿದ್ದರೆ, ಆಗ, ಅಂಥ ಭೂಮಿಯ ಸ್ವಾಧೀನಕ್ಕಾಗಿ ಸಂದಾಯಮಾಡಿದ ಪರಿಹಾರ ಮೊಬಲಗಿನ ಶೇಕಡಾ ನಲ್ವತ್ತರಷ್ಟು ಮೊಬಲಗನ್ನು ಮೂಲ ಭೂ ಮಾಲೀಕರಿಗೆ ಹಂಚಿಕೆ ಮಾಡತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಮೂಲ ಭೂ ಮಾಲೀಕ" ಎಂದರೆ, 2011ರ ಸೆಪ್ಟೆಂಬರ್ 5 ರಂದು ಯಾರು ಭೂಮಿಯ ಮಾಲೀಕನಾಗಿದ್ದನೋ ಆ ವ್ಯಕ್ತಿ;

(ಬಿ) "ನಿರ್ದಿಷ್ಟಪಡಿಸಿದ ವ್ಯಕ್ತಿಗಳು" ಎಂಬ ಪದಾವಳಿಯಲ್ಲಿ –

(i) ಸಮುಚಿತ ಸರ್ಕಾರ;

(ii) ಸರ್ಕಾರಿ ಕಂಪನಿ;

(iii) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21)ರ ಮೇರೆಗೆ ನೋಂದಣಿಯಾದ ಸಂಪೂರ್ಣವಾಗಿ ಅಥವಾ ಭಾಗಶಃ ಸಮುಚಿತ ಸರ್ಕಾರದಿಂದ ನೆರವು ಪಡೆದ ಅಥವಾ ಸಮುಚಿತ ಸರ್ಕಾರದ ನಿಯಂತ್ರಣಕ್ಕೊಳಪಟ್ಟ ವ್ಯಕ್ತಿಗಳ ಸಂಘ ಅಥವಾ ಟ್ರಸ್ಟ್ ಅಥವಾ ಸಂಘ

– ಹೊರತಾಗಿ ಯಾರೇ ವ್ಯಕ್ತಿಯು ಒಳಗೊಳ್ಳುತ್ತಾನೆ.

**47. ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಹಣದ ಪರಿಮಾಣ ನಿರ್ಧರಣೆ ಮತ್ತು ಠೇವಣಿ.–** ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದಂತೆ ಅಗತ್ಯ ನಿಕಾಯದ ಹೊಣೆಗಾರಿಕೆಗಳನ್ನು ಹಣದ ರೂಪದಲ್ಲಿ ಲೆಕ್ಕಹಾಕಬಹುದೆಂದು ಕಲೆಕ್ಟರ್‌ನು ಅಭಿಪ್ರಾಯಪಟ್ಟರೆ, ಆಗ ಅಂಥ ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಈಡೇರಿಸುವುದಕ್ಕಾಗಿ ಅಂಥ ಹಣವನ್ನು ಒಂದು ಖಾತೆಗೆ ಸಂದಾಯ ಮಾಡಲು ಕಲೆಕ್ಟರನು ಅನುಮತಿ ನೀಡತಕ್ಕದ್ದು ಮತ್ತು ಆ ಖಾತೆಯನ್ನು ಪ್ರಕರಣ 43ರ ಮೇರೆಗೆ ನೇಮಕಗೊಂಡ ಆಡಳಿತಗಾರನು ಕಲೆಕ್ಟರನ ಮೇಲ್ವಿಚಾರಣೆಯಲ್ಲಿ ನಿರ್ವಹಿಸತಕ್ಕದ್ದು.

## ಅಧ್ಯಾಯ VII

## ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಮೇಲ್ವಿಚಾರಣಾ ಸಮಿತಿ

**48. ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಮೇಲ್ವಿಚಾರಣಾ ಸಮಿತಿಯ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ರಾಷ್ಟ್ರೀಯ ಅಥವಾ ಅಂತರರಾಜ್ಯ ಪ್ರಾಜೆಕ್ಟ್‌ಗಳಿಗಾಗಿ, ಈ ಅಧಿನಿಯಮದ ಮೇರೆಗಿನ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾರ್ಯಯೋಜನೆಗಳ ಅಥವಾ ಯೋಜನೆಗಳ ಅನುಷ್ಠಾನ ಕಾರ್ಯವನ್ನು ಪುನರಾವಲೋಕನ ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ ಒಂದು ರಾಷ್ಟ್ರೀಯ ಮೇಲ್ವಿಚಾರಣಾ ಸಮಿತಿಯನ್ನು ಅಗತ್ಯವಿದ್ದಾಗಲೆಲ್ಲಾ ರಚಿಸಬಹುದು.

(2) ಸಮಿತಿಯು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧಪಟ್ಟ ಮಂತ್ರಾಲಯಗಳ ಮತ್ತು ಇಲಾಖೆಗಳ ಪ್ರಾತಿನಿಧ್ಯವನ್ನು ಹೊಂದಿರುವುದರ ಜೊತೆಗೆ ಸಂಬಂಧಪಟ್ಟ ಕ್ಷೇತ್ರಗಳ ಪ್ರಸಿದ್ಧ ತಜ್ಞರುಗಳನ್ನು ಸಮಿತಿಗೆ ಸೇರಿಸಿಕೊಳ್ಳಬಹುದು.

(3) ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನಗಳು ಮತ್ತು ತಜ್ಞರುಗಳಿಗೆ ಪಾವತಿಸಬೇಕಾದ ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಕೇಂದ್ರ ಸರ್ಕಾರವು, ಸಮಿತಿಯು ದಕ್ಷತೆಯಿಂದ ಕಾರ್ಯನಿರ್ವಹಣೆ ಮಾಡುವುದಕ್ಕಾಗಿ ಸಮಿತಿಗೆ ಅಗತ್ಯವಾದ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

**49. ಮಾಹಿತಿಯನ್ನು ಒದಗಿಸುವುದು.–** ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಈ ಅಧಿನಿಯಮದ ವ್ಯಾಪ್ತಿಯಲ್ಲಿ ಬರುವ ವಿಷಯಗಳ ಬಗ್ಗೆ ಸಂಬಂಧಪಟ್ಟ ಎಲ್ಲಾ ಸುಸಂಗತ ಮಾಹಿತಿಯನ್ನು, ನಿಯತವಾಗಿ ಮತ್ತು ಸಕಾಲದಲ್ಲಿ ಹಾಗೂ ಅಗತ್ಯಪಡಿಸಿದಾಗಲೆಲ್ಲಾ ರಾಷ್ಟ್ರೀಯ ಮೇಲ್ವಿಚಾರಣಾ ಸಮಿತಿಗೆ ಒದಗಿಸತಕ್ಕದ್ದು.

**50. ರಾಜ್ಯ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಮೇಲ್ವಿಚಾರಣಾ ಸಮಿತಿಯ ಸ್ಥಾಪನೆ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗಿನ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಪರಿಯೋಜನೆಗಳ ಅಥವಾ ಯೋಜನೆಗಳ ಅನುಷ್ಠಾನ ಕಾರ್ಯವನ್ನು ಪುನರಾವಲೋಕನ ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ ರಾಜ್ಯ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಸಮಿತಿಯು, ರಾಜ್ಯ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳ ಮತ್ತು ಇಲಾಖೆಗಳ ಪ್ರಾತಿನಿಧ್ಯವನ್ನು ಹೊಂದಿರುವುದರ ಜೊತೆಗೆ, ಸಂಬಂಧಪಟ್ಟ ಕ್ಷೇತ್ರಗಳ ಪ್ರಸಿದ್ಧ ತಜ್ಞರುಗಳನ್ನು ಸಮಿತಿಗೆ ಸೇರಿಸಿಕೊಳ್ಳಬಹುದು.

(3) ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನಗಳು ಮತ್ತು ತಜ್ಞರುಗಳಿಗೆ ಪಾವತಿಸಬೇಕಾದ ಭತ್ಯೆಗಳು ರಾಜ್ಯವು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ರಾಜ್ಯ ಸರ್ಕಾರವು, ಸಮಿತಿಯು ದಕ್ಷತೆಯಿಂದ ಕಾರ್ಯನಿರ್ವಹಣೆ ಮಾಡುವುದಕ್ಕಾಗಿ ಸಮಿತಿಗೆ ಅಗತ್ಯವಾದ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

## ಅಧ್ಯಾಯ VIII

## ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಾಧಿಕಾರದ ಸ್ಥಾಪನೆ

**51. ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಾಧಿಕಾರದ ಸ್ಥಾಪನೆ.–** (1) ಸಮುಚಿತ ಸರ್ಕಾರವು, ಭೂಸ್ವಾಧೀನಕ್ಕೆ, ಪರಿಹಾರಕ್ಕೆ, ಪುನರ್ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ವಿವಾದಗಳ ತ್ವರಿತ ವಿಲೇವಾರಿಗೆ ಅವಕಾಶ ಕಲ್ಪಿಸುವ ಉದ್ದೇಶಕ್ಕಾಗಿ, ಈ ಅಧಿನಿಯಮದಿಂದ ಅಥವಾ ಅಧಿನಿಯಮದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ವಿಧ್ಯುಕ್ತ ಅಧಿಕಾರವನ್ನು ಚಲಾಯಿಸಲು "ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಾಧಿಕಾರ" ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಅಥವಾ ಒಂದಕ್ಕಿಂತ ಹೆಚ್ಚು ಪ್ರಾಧಿಕಾರಗಳನ್ನು ಅಧಿಸೂಚನೆಯ ಮೂಲಕ ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು, ಪ್ರಕರಣ 64ರ ಮೇರೆಗೆ ತನಗೆ ಒಪ್ಪಿಸಿದ ವಿಷಯಗಳನ್ನು ಅಥವಾ ಪ್ರಕರಣ 64ರ ಉಪಪ್ರಕರಣ (1)ರಲ್ಲಿ ಇರುವ ಎರಡನೇ ಪರಂತುಕದ ಮೇರೆಗೆ ಅರ್ಜಿದಾರನು ಸಲ್ಲಿಸಿದ ಅರ್ಜಿಗಳನ್ನು ಅಂಗೀಕರಿಸುವುದಕ್ಕಾಗಿ ಮತ್ತು ತೀರ್ಮಾನಿಸುವುದಕ್ಕಾಗಿ ಯಾವ ಪ್ರದೇಶಗಳ ಒಳಗೆ ಪ್ರಾಧಿಕಾರವು ಅಧಿಕಾರ ಚಲಾಯಿಸಬಹುದೋ ಆ ಪ್ರದೇಶಗಳನ್ನು ಸಮುಚಿತ ಸರ್ಕಾರವು, ಉಪಪ್ರಕರಣ (1)ರಲ್ಲಿ ಹೇಳಿರುವ ಅಧಿಸೂಚನೆಯಲ್ಲಿ ಸಹ ನಿರ್ದಿಷ್ಟಪಡಿಸತಕ್ಕದ್ದು.

**52. ಪ್ರಾಧಿಕಾರದ ಸಂರಚನೆ.–** (1) ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕಮಾಡುವ ಒಬ್ಬ ವ್ಯಕ್ತಿಯನ್ನು ಮಾತ್ರವೇ ಪ್ರಾಧಿಕಾರವು ಒಳಗೊಂಡಿರತಕ್ಕದ್ದು (ಇದರಲ್ಲಿ ಇನ್ನು ಮುಂದೆ ಪೀಠಾಸೀನ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ).

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಸಮುಚಿತ ಸರ್ಕಾರವು, ಒಂದು ಪ್ರಾಧಿಕಾರದ ಪೀಠಾಸೀನ ಅಧಿಕಾರಿಗೆ ಇನ್ನೊಂದು ಪ್ರಾಧಿಕಾರದ ಪೀಠಾಸೀನ ಅಧಿಕಾರಿಯ ಪ್ರಕಾರ್ಯಗಳನ್ನು ಸಹ ಚಲಾಯಿಸಲು ಅಧಿಕಾರವನ್ನು ನೀಡಬಹುದು.

**53. ಪೀಠಾಸೀನ ಅಧಿಕಾರಿಯಾಗಿ ನೇಮಕಗೊಳ್ಳಲು ಅರ್ಹತೆಗಳು.–** (1) ಯಾರೇ ವ್ಯಕ್ತಿಯು,–

(ಎ) ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಜಿಲ್ಲಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಬಿ) ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಅರ್ಹ ಕಾನೂನು ವೃತ್ತಿಗಾರನಾಗಿದ್ದ ಹೊರತು

– ಪ್ರಾಧಿಕಾರದ ಪೀಠಾಸೀನ ಅಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(2) ಸಮುಚಿತ ಸರ್ಕಾರವು, ಯಾವ ಉಚ್ಚನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿದೆಯೋ ಆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಪೀಠಾಸೀನ ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು.

**54. ಪೀಠಾಸೀನ ಅಧಿಕಾರಿಯ ಪದಾವಧಿ.–** ಪ್ರಾಧಿಕಾರದ ಪೀಠಾಸೀನ ಅಧಿಕಾರಿಯು, ತಾನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ತನಗೆ ಅರವತ್ತೈದು ವರ್ಷ ವಯಸ್ಸಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

**55. ಪ್ರಾಧಿಕಾರದ ಸಿಬ್ಬಂದಿ.–** (1) ಸಮುಚಿತ ಸರ್ಕಾರವು, ಪ್ರಾಧಿಕಾರಕ್ಕೆ ರಿಜಿಸ್ಟ್ರಾರರನ್ನು ಮತ್ತು ಆ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಹಾಗೂ ನೌಕರರನ್ನು ಒದಗಿಸತಕ್ಕದ್ದು.

(2) ಪ್ರಾಧಿಕಾರದ ರಿಜಿಸ್ಟ್ರಾರ್‌ನು ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರು ಪೀಠಾಸೀನ ಅಧಿಕಾರಿಯ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಪ್ರಾಧಿಕಾರದ ರಿಜಿಸ್ಟ್ರಾರ್‌ನ ಮತ್ತು ಇತರ ಅಧಿಕಾರಿಗಳ ಹಾಗೂ ನೌಕರರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**56. ಪೀಠಾಸೀನ ಅಧಿಕಾರಿಗಳ ಸಂಬಳ ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು.–** ಪ್ರಾಧಿಕಾರದ ಪೀಠಾಸೀನ ಅಧಿಕಾರಿಗೆ ಪಾವತಿಸಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಹಾಗೂ ಇತರ ನಿವೃತ್ತಿ ಸೌಲಭ್ಯಗಳೂ ಸೇರಿದಂತೆ) ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಸದರಿ ಪೀಠಾಸೀನ ಅಧಿಕಾರಿಯ ಸಂಬಳ ಮತ್ತು ಭತ್ಯೆಗಳಾಗಲಿ ಇಲ್ಲವೆ ಸೇವೆಯ ಇತರ ನಿಬಂಧನೆ ಮತ್ತು ಷರತ್ತುಗಳನ್ನಾಗಲಿ ನೇಮಕದ ನಂತರ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳ್ಳತಕ್ಕದ್ದಲ್ಲ.

**57. ಖಾಲಿ ಹುದ್ದೆಗಳ ಭರ್ತಿ.–** ತಾತ್ಕಾಲಿಕ ಗೈರುಹಾಜರಿಯನ್ನು ಹೊರತುಪಡಿಸಿ ಇತರ ಯಾವುದೇ ಕಾರಣಕ್ಕಾಗಿ, ಪ್ರಾಧಿಕಾರದ ಪೀಠಾಸೀನ ಅಧಿಕಾರಿಯ ಸ್ಥಾನವೇನಾದರೂ ತೆರವಾದರೆ ಆಗ ಸಮುಚಿತ ಸರ್ಕಾರವು ಆ ಖಾಲಿ ಸ್ಥಾನವನ್ನು

ಭರ್ತಿಮಾಡಲು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಖಾಲಿ ಸ್ಥಾನವನ್ನು ಭರ್ತಿಮಾಡಿದ ಹಂತದಿಂದ ಪ್ರಾಧಿಕಾರದ ಮುಂದಿರುವ ವ್ಯವಹರಣೆಗಳನ್ನು ಮುಂದುವರಿಸಬಹುದು.

**58. ರಾಜೀನಾಮೆ ಮತ್ತು ಪದದಿಂದ ತೆಗೆದು ಹಾಕುವುದು.–** (1) ಪ್ರಾಧಿಕಾರದ ಪೀಠಾಸೀನ ಅಧಿಕಾರಿಯು, ಸಮುಚಿತ ಸರ್ಕಾರಕ್ಕೆ ತನ್ನ ಸಹಿಯುಳ್ಳ ಲಿಖಿತ ನೋಟೀಸನ್ನು ನೀಡಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು:

ಪರಂತು, ಪೀಠಾಸೀನ ಅಧಿಕಾರಿಯು, ಕೂಡಲೇ ತನ್ನ ಪದವನ್ನು ತ್ಯಜಿಸಲು ಸಮುಚಿತ ಸರ್ಕಾರವು ಅವನಿಗೆ ಅನುಮತಿ ನೀಡಿದ್ದ ಹೊರತು, ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳು ಮುಗಿಯುವವರೆಗೆ ಅಥವಾ ತನ್ನ ಉತ್ತರಾಧಿಕಾರಿಯಾಗಿ ವಿದ್ಯುಕ್ತವಾಗಿ ನೇಮಕಗೊಂಡ ಯಾರೇ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ತನ್ನ ಪದಾವಧಿಯು ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಪ್ರಾಧಿಕಾರದ ಪೀಠಾಸೀನ ಅಧಿಕಾರಿಯ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನು ಮಾಡಿದ ಯಾವ ವಿಚಾರಣೆಯಲ್ಲಿ ಅವನ ವಿರುದ್ಧ ಮಾಡಿರುವ ದೋಷಾರೋಪಗಳನ್ನು ಸಂಬಂಧಪಟ್ಟ ಪೀಠಾಸೀನ ಅಧಿಕಾರಿಗೆ ತಿಳಿಸಲಾಗಿದೆಯೋ ಮತ್ತು ಈ ದೋಷಾರೋಪಗಳ ಸಂಬಂಧದಲ್ಲಿ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಅವನಿಗೆ ನೀಡಲಾಗಿದೆಯೋ ಆ ವಿಚಾರಣೆಯ ನಂತರ ದುರ್ನಡತೆಯು ಅಥವಾ ಅಸಾಮರ್ಥ್ಯವು ರುಜುವಾತಾದ ಕಾರಣದ ಮೇಲೆ ಸಮುಚಿತ ಸರ್ಕಾರವು ಮಾಡಿದ ಆದೇಶದ ಮೂಲಕ ಹೊರತು, ಪ್ರಾಧಿಕಾರದ ಪೀಠಾಸೀನ ಅಧಿಕಾರಿಯನ್ನು ಅವನ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಸಮುಚಿತ ಸರ್ಕಾರವು, ಮೇಲೆ ಹೇಳಿದ ಪೀಠಾಸೀನ ಅಧಿಕಾರಿಯ ದುರ್ನಡತೆಯ ಅಥವಾ ಅಸಾಮರ್ಥ್ಯದ ಬಗ್ಗೆ ತನಿಖೆ ನಡೆಸುವ ಕಾರ್ಯವಿಧಾನವನ್ನು ನಿಯಮಗಳ ಮೂಲಕ ವಿನಿಯಮಿಸಬಹುದು.

**59. ಪ್ರಾಧಿಕಾರವನ್ನು ರಚಿಸುವ ಆದೇಶವು ಅಂತಿಮವಾದುದಾಗಿರುವುದು ಮತ್ತು ಅದರ ವ್ಯವಹರಣೆಗಳು ಅಸಿಂಧುವಾಗದಿರುವುದು.–** ಪ್ರಾಧಿಕಾರದ ಪೀಠಾಸೀನ ಅಧಿಕಾರಿಯಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಸಮುಚಿತ ಸರ್ಕಾರದ ಯಾವುದೇ ಆದೇಶವನ್ನು ಯಾವುದೇ ರೀತಿಯಲ್ಲೂ ಪ್ರಶ್ನಿಸತಕ್ಕದ್ದಲ್ಲ ಮತ್ತು ಪ್ರಾಧಿಕಾರದ ಯಾವುದೇ ಕಾರ್ಯವನ್ನು ಅಥವಾ ಅದರ ಮುಂದಿರುವ ಯಾವುದೇ ವ್ಯವಹರಣೆಯನ್ನು, ಪ್ರಾಧಿಕಾರದ ರಚನೆಯಲ್ಲಿ ಯಾವುದೇ ನ್ಯೂನತೆಯಿದೆ ಎಂಬ ಕಾರಣ ಮಾತ್ರದಿಂದಲೇ ಯಾವುದೇ ರೀತಿಯಲ್ಲೂ ಪ್ರಶ್ನಿಸತಕ್ಕದ್ದಲ್ಲ.

**60. ಪ್ರಾಧಿಕಾರದ ಅಧಿಕಾರಗಳು ಮತ್ತು ಅದರ ಮುಂದೆ ನಡೆಯುವ ಕಾರ್ಯವಿಧಾನ.–** (1) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ಉದ್ದೇಶಕ್ಕಾಗಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನುಮಾಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಹಾಗೂ ಪ್ರಮಾಣ ಮಾಡಿಸಿ ಅವನನ್ನು ವಿಚಾರಣೆಮಾಡುವುದು;

(ಬಿ) ಸಾಕ್ಷ್ಯವಾಗಿ ಹಾಜರುಪಡಿಸಬೇಕಾದ ಯಾವುದೇ ದಾಖಲೆಯನ್ನು ಅಥವಾ ಇತರ ಮುದ್ದೆ ಮಾಲನ್ನು ಪತ್ತೆ ಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಆದೇಶಿಸುವುದು;

(ಸಿ) ಅಫಿಡಾವಿಟ್‌ಗಳಲ್ಲಿ ಸಾಕ್ಷ್ಯವನ್ನು ಪಡೆಯುವುದು;

(ಡಿ) ಯಾವುದೇ ಸಾರ್ವಜನಿಕ ದಾಖಲೆಯನ್ನು ಒದಗಿಸುವಂತೆ ಆದೇಶಿಸುವುದು;

(ಇ) ಸಾಕ್ಷಿದಾರರ ವಿಚಾರಣೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ನಿರ್ದೇಶನಗಳನ್ನು ಮತ್ತು ಆದೇಶಗಳನ್ನು ಪುನರ್ ಪರಿಶೀಲಿಸುವುದು;

(ಜಿ) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(2) ಪ್ರಾಧಿಕಾರವು, ಪ್ರಕರಣ 64ರ ಮೇರೆಗೆ ತನಗೆ ಒಪ್ಪಿಸಿದ ಪ್ರತಿಯೊಂದು ವಿಷಯದ ಬಗ್ಗೆ ನ್ಯಾಯ ನಿರ್ಣಯ ಮಾಡಲು ಮೂಲ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(3) ಪ್ರಾಧಿಕಾರವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ನಿರೂಪಿಸಿರುವ ಕಾರ್ಯವಿಧಾನಕ್ಕೆ ಬದ್ಧವಾಗಿರಬೇಕಾಗಿಲ್ಲ. ಆದರೆ ಸಹಜ ನ್ಯಾಯದ ಮೂಲ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಹಾಗೂ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು, ಪ್ರಾಧಿಕಾರವು ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು, ಪ್ರಕರಣ 64ರ ಮೇರೆಗೆ ತನಗೆ ಒಪ್ಪಿಸಿದ ವಿಷಯವನ್ನು ಸ್ವೀಕರಿಸಿದ ನಂತರ ಮತ್ತು ಆ ವಿಷಯವನ್ನು ಹಾಗೆ ಒಪ್ಪಿಸಿರುವ ಬಗ್ಗೆ ಸಂಬಂಧಪಟ್ಟ ಎಲ್ಲಾ ಪಕ್ಷಕಾರರಿಗೆ ನೋಟೀಸನ್ನು ನೀಡಿದ ನಂತರ ಹಾಗೂ ಎಲ್ಲಾ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಂಥ ವಿಷಯವನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗಾಗಿ ಆ ವಿಷಯವನ್ನು ವಿಲೆಮಾಡತಕ್ಕದ್ದು ಮತ್ತು ತದನುಸಾರವಾಗಿ ಐತೀರ್ಪನ್ನು ನೀಡತಕ್ಕದ್ದು.

(5) ಪ್ರಾಧಿಕಾರವು, ಅಂಥ ಐತೀರ್ಪನ್ನು ನೀಡಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗಾಗಿ ಸಂಬಂಧಪಟ್ಟ ಪಕ್ಷಕಾರರಿಗೆ ಐತೀರ್ಪಿನ ಪ್ರತಿಗಳನ್ನು ನೀಡಲು ವ್ಯವಸ್ಥೆ ಮಾಡತಕ್ಕದ್ದು.

**61. ಪ್ರಾಧಿಕಾರದ ಮುಂದೆ ನಡೆಯುವ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು.–** ಪ್ರಾಧಿಕಾರದ ಮುಂದೆ ನಡೆಯುವ ಎಲ್ಲಾ ವ್ಯವಹರಣೆಗಳನ್ನು, ಭಾರತ ದಂಡ ಸಂಹಿತೆ (1860ರ 45) ಯ ಪ್ರಕರಣಗಳಾದ 193ರ ಮತ್ತು 228ರ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು ಮತ್ತು ಪ್ರಾಧಿಕಾರವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣಗಳಾದ 345ರ ಮತ್ತು 346ರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**62. ಪ್ರಾಧಿಕಾರದ ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು.–** ಪ್ರಾಧಿಕಾರದ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**63. ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಗೆ ಪ್ರತಿಷೇಧ.–** ಯಾವ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಕಲೆಕ್ಟರನಿಗೆ ಅಥವಾ ಪ್ರಾಧಿಕಾರಕ್ಕೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಭೂಸ್ವಾಧೀನಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಪುರಸ್ಕರಿಸುವುದಕ್ಕೆ (ಭಾರತ ಸಂವಿಧಾನದ 226ನೇ ಅನುಚ್ಛೇದದ ಅಥವಾ 227ನೇ ಅನುಚ್ಛೇದದ ಮೇರೆಗೆ ಉಚ್ಚ ನ್ಯಾಯಾಲಯವಲ್ಲದ ಅಥವಾ ಸರ್ವೋಚ್ಚ ನ್ಯಾಯಾಲಯವಲ್ಲದ) ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಅಂಥ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ಪ್ರತಿಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**64. ಪ್ರಾಧಿಕಾರದ ನಿರ್ಧರಣೆಗಾಗಿ ವಿಷಯವನ್ನು ಒಪ್ಪಿಸುವುದು.–** (1) ಐತೀರ್ಪನ್ನು ಹಿತಾಸಕ್ತಿಯುಳ್ಳ ಯಾವ ವ್ಯಕ್ತಿಯು ಒಪ್ಪಿಲ್ಲವೋ, ಆ ಯಾರೇ ವ್ಯಕ್ತಿಯು ತನ್ನ ಆಕ್ಷೇಪಣೆಯು, ಸಂದರ್ಭಾನುಸಾರ ಭೂಮಿಯ ಅಳತೆಗೆ ಸಂಬಂಧಿಸಿದ್ದಾಗಿರಲಿ, ಪರಿಹಾರದ ಮೊಬಲಗಿಗೆ ಸಂಬಂಧಿಸದ್ದಾಗಿರಲಿ, ಅದನ್ನು ಯಾವ ವ್ಯಕ್ತಿಗೆ ಪಾವತಿಸಬೇಕು ಎಂಬುದಕ್ಕೆ ಸಂಬಂಧಿಸಿದ್ದಾಗಿರಲಿ ಅಧ್ಯಾಯ–V ಮತ್ತು ಅಧ್ಯಾಯ VI ರ ಮೇರೆಗೆ ಪುನರ್ವ್ಯವಸ್ಥೆಯ ಹಾಗೂ ಪುನರ್ವಸತಿಯ ಹಕ್ಕುಗಳಿಗೆ ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಗಳ ನಡುವೆ ಪರಿಹಾರದ ಮೊಬಲಗನ್ನು ಹಂಚಿ ಹಾಕುವುದಕ್ಕೆ ಸಂಬಂಧಿಸಿದ್ದಾಗಿರಲಿ, ಲಿಖಿತ ಅರ್ಜಿಯನ್ನು ಕಲೆಕ್ಟರನಿಗೆ ಸಲ್ಲಿಸಿ ವಿಷಯವನ್ನು ನಿರ್ಧರಣೆಗಾಗಿ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕಲೆಕ್ಟರನನ್ನು ಕೋರಬಹುದು:

ಪರಂತು, ಕಲೆಕ್ಟರನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ವಿಷಯವನ್ನು ನಿರ್ಧರಣೆಗಾಗಿ ಸಮುಚಿತ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು.

ಮತ್ತೂ ಪರಂತು, ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ವಿಷಯವನ್ನು ಒಪ್ಪಿಸಲು ಕಲೆಕ್ಟರನು ವಿಫಲನಾದರೆ, ಅರ್ಜಿದಾರನು, ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ಮೂವತ್ತು ದಿನಗಳ ಅವಧಿಯೊಳಗಾಗಿ ವಿಷಯವನ್ನು ನಿರ್ಧರಣೆಗಾಗಿ ಪ್ರಾಧಿಕಾರಕ್ಕೆ ಒಪ್ಪಿಸಬೇಕೆಂದು ಕಲೆಕ್ಟರನಿಗೆ ನಿರ್ದೇಶನ ನೀಡುವಂತೆ ಪ್ರಾಧಿಕಾರವನ್ನು ಕೋರಬಹುದು.

(2) ಯಾವ ಕಾರಣಗಳ ಮೇಲೆ ಐತೀರ್ಪಿನ ಬಗ್ಗೆ ಆಕ್ಷೇಪಣೆಗಳನ್ನು ಎತ್ತಲಾಗಿದೆಯೋ ಆ ಕಾರಣಗಳನ್ನು ಅರ್ಜಿಯಲ್ಲಿ ತಿಳಿಸಿರತಕ್ಕದ್ದು:

ಪರಂತು ಅಂಥ ಪ್ರತಿಯೊಂದು ಅರ್ಜಿಯನ್ನು,–

(ಎ) ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ಕಲೆಕ್ಟರನು ಐತೀರ್ಪನ್ನು ನೀಡುವ ಕಾಲದಲ್ಲಿ ಅವನ ಮುಂದೆ ಹಾಜರಾಗಿದ್ದರೆ ಅಥವಾ ಅವನ ಪ್ರತಿನಿಧಿಯು, ಹಾಜರಾಗಿದ್ದರೆ, ಕಲೆಕ್ಟರನು ಐತೀರ್ಪನ್ನು ನೀಡಿದ ದಿನಾಂಕದಿಂದ ಆರು ವಾರಗಳೊಳಗಾಗಿ;

(ಬಿ) ಇತರ ಸಂದರ್ಭಗಳಲ್ಲಿ, ಪ್ರಕರಣ 21ರ ಮೇರೆಗೆ ಕಲೆಕ್ಟರನಿಂದ ನೋಟೀಸನ್ನು ಸ್ವೀಕರಿಸಿದಂದಿನಿಂದ ಆರು ವಾರಗಳೊಳಗಾಗಿ ಅಥವಾ ಕಲೆಕ್ಟರನು ಐತೀರ್ಪು ನೀಡಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಇವುಗಳೆರಡರಲ್ಲಿ ಯಾವ ಅವಧಿಯು ಮೊದಲು ಮುಕ್ತಾಯವಾಗುತ್ತದೆಯೋ ಆ ಅವಧಿಯೊಳಗೆ

– ಸಲ್ಲಿಸತಕ್ಕದ್ದು:

ಮತ್ತೂ ಪರಂತು, ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅರ್ಜಿಯನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಕಲೆಕ್ಟರನಿಗೆ ಮನವರಿಕೆಯಾದರೆ, ಅವನು ಸದರಿ ಅವಧಿಯ ಮುಕ್ತಾಯಗೊಂಡ ನಂತರ ಇನ್ನೂ ಒಂದು ವರ್ಷದ ಅವಧಿಯೊಳಗೆ ಅರ್ಜಿಯನ್ನು ಪುರಸ್ಕರಿಸಬಹುದು.

**65. ಪ್ರಾಧಿಕಾರಕ್ಕೆ ಕಲೆಕ್ಟರನ ವಿವರಣಾ ಪತ್ರ.–** (1) ಪ್ರಾಧಿಕಾರದ ನಿರ್ಧರಣೆಗಾಗಿ ವಿಷಯವನ್ನು ಒಪ್ಪಿಸುವಾಗ, ಪ್ರಾಧಿಕಾರದ ಮಾಹಿತಿಗಾಗಿ, ಕಲೆಕ್ಟರನು,–

(ಎ) ಭೂಮಿಯಲ್ಲಿರುವ ಯಾವುದೇ ಮರಗಳ, ಕಟ್ಟಡಗಳ ಅಥವಾ ಬೆಳೆದು ನಿಂತಿರುವ ಬೆಳೆಗಳ ವಿವರಗಳೊಂದಿಗೆ ಭೂಮಿಯ ಸ್ಥಿತಿಯನ್ನು ಮತ್ತು ವಿಸ್ತೀರ್ಣವನ್ನು;

(ಬಿ) ಅಂಥ ಭೂಮಿಯಲ್ಲಿ ಯಾವ ವ್ಯಕ್ತಿಗಳು ಹಿತಾಸಕ್ತಿಯುಳ್ಳವರಾಗಿದ್ದಾರೆಂದು ಭಾವಿಸಲು ತನಗೆ ಕಾರಣವಿದೆಯೋ ಆ ವ್ಯಕ್ತಿಗಳ ಹೆಸರುಗಳನ್ನು;

(ಸಿ) ಪ್ರಕರಣ 13ರ ಮೇರೆಗೆ ಹಾನಿಗಳಿಗಾಗಿ ಐತೀರ್ಪಿನಲ್ಲಿ ತಿಳಿಸಿದ, ಸಂದಾಯ ಮಾಡಿದ ಅಥವಾ ನೀಡಿದ ಮೊಬಲಗನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಐತೀರ್ಪಿನಲ್ಲಿ ತಿಳಿಸಿದ ಪರಿಹಾರದ ಮೊಬಲಗನ್ನು;

(ಡಿ) ಈ ಅಧಿನಿಯಮದ ಇತರ ಯಾವುದೇ ಉಪಬಂಧಗಳ ಮೇರೆಗೆ ಸಂದಾಯ ಮಾಡಿದ ಅಥವಾ ಠೇವಣಿ ಮಾಡಿದ ಮೊಬಲಗನ್ನು; ಮತ್ತು

(ಇ) ಆಕ್ಷೇಪಣೆಯು ಪರಿಹಾರದ ಮೊಬಲಗಿಗೆ ಸಂಬಂಧಿಸಿದ್ದರೆ, ಯಾವ ಆಧಾರಗಳ ಮೇಲೆ ಪರಿಹಾರದ ಮೊಬಲಗನ್ನು ನಿರ್ಧರಿಸಲಾಗಿದೆಯೋ ಆ ಆಧಾರಗಳನ್ನು

– ಲಿಖಿತದಲ್ಲಿ ತಿಳಿಸಿ ಅದಕ್ಕೆ ತನ್ನ ಸಹಿ ಹಾಕಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ನೀಡಿದ ವಿವರಣಾ ಪತ್ರದೊಂದಿಗೆ ಹಿತಾಸಕ್ತಿ ಹೊಂದಿರುವ ಆಯಾಯ ವ್ಯಕ್ತಿಗಳಿಗೆ ಜಾರಿ ಮಾಡಿದ ನೋಟೀಸುಗಳ ವಿವರಗಳನ್ನು ಮತ್ತು ಅವರು ಲಿಖಿತದಲ್ಲಿ ನೀಡಿರುವ ಅಥವಾ ಕೊಟ್ಟಿರುವ ಹೇಳಿಕೆಗಳನ್ನು ಲಗತ್ತಿಸಿರತಕ್ಕದ್ದು.

**66. ಪ್ರಾಧಿಕಾರದಿಂದ ನೋಟೀಸ್ ಜಾರಿ.–** ಪ್ರಾಧಿಕಾರವು ಆ ನಂತರ ಆಕ್ಷೇಪಣೆಯನ್ನು ಇತ್ಯರ್ಥಪಡಿಸಲು ಪ್ರಾಧಿಕಾರವು ಯಾವ ದಿನಾಂಕದಂದು ಮುಂದಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸಿರುವ ಮತ್ತು ಆ ದಿನದಂದು ಪ್ರಾಧಿಕಾರದ ಮುಂದೆ ಹಾಜರಾಗುವಂತೆ ಈ ಮುಂದಿನ ವ್ಯಕ್ತಿಗಳಿಗೆ ನಿರ್ದೇಶನ ನೀಡಿರುವ ನೋಟೀಸನ್ನು ಆ ವ್ಯಕ್ತಿಗಳಿಗೆ, ಎಂದರೆ:–

(ಎ) ಅರ್ಜಿದಾರನಿಗೆ;

(ಬಿ) ಐತೀರ್ಪಿನಲ್ಲಿ ತಿಳಿಸಿದ ಪರಿಹಾರದ ಮೊಬಲಗನ್ನು ಸಂದಾಯವನ್ನು ಸ್ವೀಕರಿಸಲು ಯಾವುದೇ ವಿರೋಧ ತೋರದೆ, ಒಪ್ಪಿಗೆ ನೀಡಿರುವ ವ್ಯಕ್ತಿಗಳು ಯಾರಾದರೂ ಇದ್ದರೆ ಅವರನ್ನು ಹೊರತುಪಡಿಸಿ, ಆಕ್ಷೇಪಣೆಯಲ್ಲಿ ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ; ಮತ್ತು

(ಸಿ) ಆಕ್ಷೇಪಣೆಯು ಭೂಮಿಯ ವಿಸ್ತೀರ್ಣಕ್ಕೆ ಅಥವಾ ಪರಿಹಾರದ ಮೊಬಲಗಿಗೆ ಸಂಬಂಧಿಸಿದ್ದರೆ, ಕಲೆಕ್ಟರನಿಗೆ

–ಜಾರಿ ಮಾಡಿಸತಕ್ಕದ್ದು.

**67. ವ್ಯವಹರಣೆಗಳ ವ್ಯಾಪ್ತಿಯ ಮೇಲೆ ನಿರ್ಬಂಧ.–** ಅಂಥ ಪ್ರತಿಯೊಂದು ವ್ಯವಹರಣೆಯಲ್ಲಿನ ವಿಚಾರಣೆಯ ವ್ಯಾಪ್ತಿಯು ಆಕ್ಷೇಪಣೆಯಿಂದ ಬಾಧಿತರಾದ ವ್ಯಕ್ತಿಗಳ ಹಿತಾಸಕ್ತಿಯನ್ನು ಪರಿಗಣಿಸುವುದಕ್ಕೆ ಸೀಮಿತವಾಗಿರತಕ್ಕದ್ದು.

**68. ವ್ಯವಹರಣೆಗಳನ್ನು ಬಹಿರಂಗವಾಗಿ ನಡೆಸುವುದು.–** ಅಂಥ ಪ್ರತಿಯೊಂದು ವ್ಯವಹರಣೆಯನ್ನು ಬಹಿರಂಗವಾಗಿ ನಡೆಸತಕ್ಕದ್ದು ಮತ್ತು ರಾಜ್ಯದ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ನ್ಯಾಯವಾದಿ ವೃತ್ತಿಯನ್ನು ನಡೆಸಲು ಹಕ್ಕುಳ್ಳ ಎಲ್ಲಾ ವ್ಯಕ್ತಿಗಳು ಅಂಥ ವ್ಯವಹರಣೆಯಲ್ಲಿ ಹಾಜರಾಗಲು, ವಾದ ಮಾಡಲು ಮತ್ತು ಕಾರ್ಯ ನಿರ್ವಹಿಸಲು (ಸಂದರ್ಭಾನುಸಾರವಾಗಿ) ಹಕ್ಕುಳ್ಳವರಾಗಿರತಕ್ಕದ್ದು.

**69. ಪ್ರಾಧಿಕಾರದಿಂದ ಪರಿಹಾರ ಮೊಬಲಗಿನ ನಿರ್ಧರಣೆ.–** (1) ಪ್ರಾಧಿಕಾರವು, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆಗೆ, ವ್ಯಕ್ತಿಗಳಿಗೆ ಇರುವ ಹಕ್ಕುದಾರಿಕೆಗಳೂ ಸೇರಿದಂತೆ ಸ್ವಾಧೀನಪಡಿಸಿಕೊಂಡ ಭೂಮಿಗಾಗಿ ನೀಡಬೇಕಾದ ಪರಿಹಾರದ ಮೊಬಲಗಿನ ನಿರ್ಧರಣೆ ಮಾಡುವಾಗ ಕಲೆಕ್ಟರನು ಈ ಅಧಿನಿಯಮದ ಪ್ರಕರಣಗಳಾದ 26ರಿಂದ ಪ್ರಕರಣ 30ರಲ್ಲಿ ನಿರೂಪಿಸಿದ ಮಾನದಂಡಗಳನ್ನು ಮತ್ತು ಅಧ್ಯಾಯ Vರ ಮೇರೆಗಿನ ಉಪಬಂಧಗಳನ್ನು ಪಾಲಿಸಿದ್ದಾನೆಯೇ, ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ಮೇಲೆ ಹೇಳಿದಂತೆ, ಪ್ರಾಧಿಕಾರವು ಪ್ರತಿಯೊಂದು ಪ್ರಕರಣದಲ್ಲಿ ಭೂಮಿಯ ಮಾರುಕಟ್ಟೆ ಮೌಲ್ಯದ ಜೊತೆಗೆ, ಅಂಥ ಭೂಮಿಯ ಸಂಬಂಧದಲ್ಲಿ ಪ್ರಕರಣ 11ರ ಮೇರೆಗೆ ಪ್ರಾರಂಭಿಕ ಅಧಿಸೂಚನೆಯ ಪ್ರಕಟಣೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಪ್ರಾರಂಭಿಸಿ ಕಲೆಕ್ಟರನು ಐತೀರ್ಪು ನೀಡಿದ ದಿನಾಂಕ ಅಥವಾ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕ, –ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗಿನ ಅವಧಿಗಾಗಿ ಅಂಥ ಮಾರುಕಟ್ಟೆ ಮೌಲ್ಯದ ಮೇಲೆ ವಾರ್ಷಿಕ ಶೇಕಡ ಹನ್ನೆರಡರ ದರದಲ್ಲಿ ಲೆಕ್ಕಹಾಕಿದ ಮೊಬಲಗನ್ನು, ನೀಡುವಂತೆ ಐತೀರ್ಪು ನೀಡತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದಲ್ಲಿ ತಿಳಿಸಿದ ಅವಧಿಯನ್ನು ಲೆಕ್ಕಹಾಕುವಾಗ, ಯಾವುದೇ ನ್ಯಾಯಾಲಯದ ಆದೇಶದ ಮೂಲಕ ನೀಡಿದ ಯಾವುದೇ ತಡೆಯಾಜ್ಞೆಯ ಅಥವಾ ನಿರ್ಬಂಧಕಾಜ್ಞೆಯ ಕಾರಣದಿಂದಾಗಿ, ಭೂಸ್ವಾಧೀನದ ವ್ಯವಹರಣೆಗಳನ್ನು ಯಾವ ಅವಧಿಯವರೆಗೆ ಅಥವಾ ಅವಧಿಗಳವರೆಗೆ ತಡೆಹಿಡಿಯಲಾಗಿತ್ತೋ ಆ ಯಾವುದೇ ಅವಧಿ ಅಥವಾ ಅವಧಿಗಳನ್ನು ಬಿಟ್ಟುಬಿಡತಕ್ಕದ್ದು.

(3) ಮೇಲೆ ಹೇಳಿದಂತೆ, ಭೂಮಿಯ ಮಾರುಕಟ್ಟೆ ಮೌಲ್ಯದ ಜೊತೆಗೆ, ಪ್ರಾಧಿಕಾರವು ಪ್ರತಿಯೊಂದು ಪ್ರಕರಣದಲ್ಲಿ ಒಟ್ಟು ಪರಿಹಾರದ ಮೊಬಲಗಿನ ಮೇಲೆ ಶೇಕಡ ನೂರರಷ್ಟು ಸಮಾಧಾನಾರ್ಥಕ ಪರಿಹಾರದ ಮೊಬಲಗಿನ ನೀಡಿಕೆಗೆ ಐತೀರ್ಪು ನೀಡತಕ್ಕದ್ದು.

**70. ಐತೀರ್ಪಿನ ನಮೂನೆ.–** (1) ಈ ಅಧ್ಯಾಯದ ಮೇರೆಗಿನ ಪ್ರತಿಯೊಂದು ಐತೀರ್ಪು ಲಿಖಿತದಲ್ಲಿರತಕ್ಕದ್ದು ಮತ್ತು ಪ್ರಾಧಿಕಾರದ ಪೀಠಾಸೀನ ಅಧಿಕಾರಿಯು ಅದಕ್ಕೆ ಸಹಿ ಮಾಡಿರತಕ್ಕದ್ದು ಮತ್ತು ಪ್ರಕರಣ 28ರ ಮೊದಲನೇ ಖಂಡದ ಮೇರೆಗೆ ಐತೀರ್ಪಿನಲ್ಲಿ ಆದೇಶಿಸಿದ ಹಣವನ್ನು ಅದರಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮೊಬಲಗನ್ನು ನೀಡುವಂತೆ ಐತೀರ್ಪಿನಲ್ಲಿ ಆದೇಶಿಸುವುದಕ್ಕೆ ಇರುವ ಕಾರಣಗಳ ಜೊತೆಗೆ ಅದೇ ಪ್ರಕರಣದ ಇತರ ಖಂಡಗಳ ಪೈಕಿ

ಪ್ರತಿಯೊಂದು ಖಂಡದ ಮೇರೆಗೆ ಅನುಕ್ರಮವಾಗಿ ಐತೀರ್ಪಿನಲ್ಲಿ ಯಾವುದಾದರೂ ಮೊಬಲಗನ್ನು ನೀಡಿಕೆಗೆ ಆದೇಶಿಸಿದ್ದರೆ ಆ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(2) ಅಂಥ ಪ್ರತಿಯೊಂದು ಐತೀರ್ಪನ್ನು ಡಿಕ್ರಿಯೆಂದು ಭಾವಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಐತೀರ್ಪನ್ನು ನೀಡುವುದಕ್ಕೆ ಇರುವ ಕಾರಣಗಳ ವಿವರಣೆಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಪ್ರಕರಣ 2ರ, ಅನುಕ್ರಮವಾಗಿ (2)ನೇ ಮತ್ತು (9)ನೇ ಖಂಡಗಳ ಅರ್ಥವ್ಯಾಪ್ತಿಯೊಳಗೆ ತೀರ್ಪು ಎಂದು ಭಾವಿಸತಕ್ಕದ್ದು.

**71. ವೆಚ್ಚಗಳು.–** (1) ಅಂಥ ಪ್ರತಿಯೊಂದು ಐತೀರ್ಪಿನಲ್ಲಿ ಈ ಅಧ್ಯಾಯದ ಮೇರೆಗಿನ ವ್ಯವಹರಣೆಯಲ್ಲಿ ವಹಿಸಿದ ವೆಚ್ಚದ ಮೊಬಲಗನ್ನು ತಿಳಿಸತಕ್ಕದ್ದು ಮತ್ತು ಆ ವೆಚ್ಚಗಳನ್ನು ಯಾವ ಯಾವ ವ್ಯಕ್ತಿಗಳು ಸಂದಾಯ ಮಾಡಬೇಕು ಮತ್ತು ಯಾವ ಯಾವ ಅನುಪಾತದಲ್ಲಿ ಅವರು ಸಂದಾಯ ಮಾಡಬೇಕು ಎಂಬುದನ್ನು ಸಹ ತಿಳಿಸತಕ್ಕದ್ದು.

(2) ಕಲೆಕ್ಟರನು ಮಾಡಿದ ಐತೀರ್ಪನ್ನು ಎತ್ತಿ ಹಿಡಿಯದಿದ್ದಾಗ, ಸಂಬಂಧಪಟ್ಟ ಪ್ರಾಧಿಕಾರವು, ಅರ್ಜಿದಾರರ ಕ್ಲೇಮು ಅತಿ ಹೆಚ್ಚು ವೆಚ್ಚದ ಕ್ಲೇಮು ಆಗಿದೆ ಎಂದು ಅಥವಾ ಅವನು ಕಲೆಕ್ಟರನ ಮುಂದೆ ತನ್ನ ವಾದವನ್ನು ಮಂಡಿಸುವಲ್ಲಿ ತುಂಬಾ ನಿರ್ಲಕ್ಷö್ಯಯ ತೋರಿರುವುದರಿಂದ ಆತನ ವೆಚ್ಚಗಳಿಂದ ಸ್ವಲ್ಪಮಟ್ಟಿನ ಕಡಿತ ಮಾಡಬೇಕೆಂದು ಅಥವಾ ಆತನು ಕಲೆಕ್ಟರನ ವೆಚ್ಚಗಳಲ್ಲಿ ಒಂದು ಭಾಗವನ್ನು ಸಂದಾಯ ಮಾಡಬೇಕೆಂದು ಅಭಿಪ್ರಾಯಪಟ್ಟ ಹೊರತು, ಸಾಮಾನ್ಯವಾಗಿ ಕಲೆಕ್ಟರನು ಆ ವೆಚ್ಚವನ್ನು ಸಂದಾಯ ಮಾಡತಕ್ಕದ್ದು.

**72. ಕೊಡಬೇಕಾದಕ್ಕಿಂತ ಹೆಚ್ಚಿನ ಪರಿಹಾರ ಮೊಬಲಗಿನ ಮೇಲೆ ಬಡ್ಡಿಯನ್ನು ಸಂದಾಯ ಮಾಡುವಂತೆ ಕಲೆಕ್ಟರನಿಗೆ ನಿರ್ದೇಶಿಸುವುದು.–** ಕಲೆಕ್ಟರನು ಪರಿಹಾರದ ಮೊಬಲಾಗಿ ಐತೀರ್ಪಿನಲ್ಲಿ ಆದೇಶಿಸಿರುವ ಯಾವ ಮೊಬಲಗು, ಕಲೆಕ್ಟರನು ಪರಿಹಾರದ ಮೊಬಲಾಗಿ ಐತೀರ್ಪಿನಲ್ಲಿ ಆದೇಶಿಸಬೇಕಾಗಿದ್ದ ಹಣಕ್ಕಿಂತ ಹೆಚ್ಚಾಗಿದೆ ಎಂದು ಸಂಬಂಧಪಟ್ಟ ಪ್ರಾಧಿಕಾರವು ಅಭಿಪ್ರಾಯಪಡುವುದೋ ಅಂಥ ಹೆಚ್ಚುವರಿ ಮೊಬಲಗಿನ ಮೇಲೆ, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಹೆಚ್ಚುವರಿ ಮೊಬಲಗನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡುವ ದಿನಾಂಕದವರೆಗೆ ವರ್ಷಕ್ಕೆ ಶೇಕಡಾ ಒಂಭತ್ತರ ದರದಲ್ಲಿ ಬಡ್ಡಿಯನ್ನು ಕಲೆಕ್ಟರನು ಸಂದಾಯ ಮಾಡತಕ್ಕದ್ದೆಂದು ಸಂಬಂಧಪಟ್ಟ ಪ್ರಾಧಿಕಾರದ ಐತೀರ್ಪಿನಲ್ಲಿ ನಿರ್ದೇಶನ ನೀಡಬಹುದು.

ಪರಂತು, ಅಂಥ ಹೆಚ್ಚಿನ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ದಿನಾಂಕದಂದು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿತ್ತೋ ಆ ದಿನಾಂಕದ ತರುವಾಯ ಅಥವಾ ಆ ದಿನಾಂಕದಿಂದ ಒಂದು ವರ್ಷದ ಅವಧಿಯು ಮುಕ್ತಾಯವಾದ ತರುವಾಯ ಪ್ರಾಧಿಕಾರಕ್ಕೆ ಸಂದಾಯ ಮಾಡಿದರೆ, ಅಂಥ ಮುಕ್ತಾಯದ ದಿನಾಂಕಕ್ಕೂ ಮುಂಚೆ ಪ್ರಾಧಿಕಾರಕ್ಕೆ ಸಂದಾಯ ಮಾಡಿರದ ಅಂಥ ಹೆಚ್ಚಿನ ಮೊಬಲಗಿನ ಅಥವಾ ಅದರ ಭಾಗದ ಮೇಲೆ ಸದರಿ ಒಂದು ವರ್ಷದ ಅವಧಿಯು ಮುಕ್ತಾಯದ ದಿನಾಂಕದಿಂದ ವರ್ಷಕ್ಕೆ ಶೇಕಡಾ ಹದಿನೈದರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದೆಂದು ಸಹ ಸಂಬಂಧಪಟ್ಟ ಪ್ರಾಧಿಕಾರವು ಐತೀರ್ಪಿನಲ್ಲಿ ನಿರ್ದೇಶಿಸಬಹುದು.

**73. ಪ್ರಾಧಿಕಾರದ ಐತೀರ್ಪಿನ ಆಧಾರದ ಮೇಲೆ ಪರಿಹಾರದ ಮೊಬಲಗಿನ ಪುನರ್‌ನಿರ್ಧರಣೆ.–** (1) ಈ ಅಧ್ಯಾಯದ ಮೇರೆಗಿನ ಐತೀರ್ಪಿನಲ್ಲಿ, ಕಲೆಕ್ಟರನು ಪ್ರಕರಣ 23ರ ಮೇರೆಗೆ ಐತೀರ್ಪಿನಲ್ಲಿ ಆದೇಶಿಸಿರುವ ಮೊಬಲಗಿಗಿಂತ ಹೆಚ್ಚಿಗೆಯಾಗಿ ಯಾವುದೇ ಪರಿಹಾರದ ಮೊಬಲಗನ್ನು ಅರ್ಜಿದಾರನಿಗೆ ನೀಡುವುದಕ್ಕೆ ಸಂಬಂಧಪಟ್ಟ ಪ್ರಾಧಿಕಾರವು ಅನುಮತಿಸಿದರೆ, ಪ್ರಕರಣ 11ರ ಮೇರೆಗೆ ಅದೇ ಪ್ರಾರಂಭಿಕ ಅಧಿಸೂಚನೆಯಲ್ಲಿ ಒಳಗೊಳ್ಳುವ ಇತರ ಎಲ್ಲಾ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳು ಮತ್ತು ಕಲೆಕ್ಟರನ ಐತೀರ್ಪಿನಿಂದ ಬಾಧಿತರಾದ ವ್ಯಕ್ತಿಗಳು, ಕಲೆಕ್ಟರನಿಗೆ ಯಾವುದೇ

ಅರ್ಜಿಯನ್ನು ಸಲ್ಲಿಸದಿದ್ದರೂ ಸಹ ಸಂಬಂಧಪಟ್ಟ ಪ್ರಾಧಿಕಾರದ ಐತೀರ್ಪಿನ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಕಲೆಕ್ಟರನಿಗೆ ಲಿಖಿತ ಅರ್ಜಿಯನ್ನು ಸಲ್ಲಿಸಿ, ಪ್ರಾಧಿಕಾರವು ಐತೀರ್ಪು ನೀಡಿದ ಪರಿಹಾರದ ಮೊಬಲಗಿನ ಅಧಾರದ ಮೇಲೆ ತಮಗೆ ಸಂದಾಯವಾಗಬೇಕಾದ ಪರಿಹಾರದ ಮೊಬಲಗಿನ ಪುನರ್‌ನಿರ್ಧರಣೆ ಮಾಡಬೇಕೆಂದು ಅಗತ್ಯಪಡಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಕಲೆಕ್ಟರನಿಗೆ ಯಾವ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಬೇಕೋ ಆ ಮೂರು ತಿಂಗಳ ಅವಧಿಯನ್ನು ಲೆಕ್ಕಹಾಕುವಾಗ, ಐತೀರ್ಪನ್ನು ಯಾವ ದಿನದಂದು ಘೋಷಿಸಲಾಯಿತೋ ಮತ್ತು ಐತೀರ್ಪಿನ ಪ್ರತಿಯನ್ನು ಪಡೆಯುವುದಕ್ಕಾಗಿ ಅಗತ್ಯವಾದ ಕಾಲವನ್ನು ಹೊರತುಪಡಿಸತಕ್ಕದ್ದು.

(2) ಕಲೆಕ್ಟರನು ಉಪಪ್ರಕರಣ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳಿಗೆ ನೋಟೀಸನ್ನು ನೀಡಿದ ತರುವಾಯ ಮತ್ತು ಅಹವಾಲನ್ನು ಹೇಳಿಕೊಳ್ಳಲು ಅವರಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅರ್ಜಿದಾರರಿಗೆ ಸಂದಾಯವಾಗಬೇಕಾದ ಪರಿಹಾರದ ಮೊಬಲಗಿನ ನಿರ್ಧರಣೆ ಮಾಡಿ ಐತೀರ್ಪನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ನೀಡಿದ ಐತೀರ್ಪನ್ನು ಒಪ್ಪಿಕೊಳ್ಳದ ಯಾರೇ ವ್ಯಕ್ತಿಯು, ಕಲೆಕ್ಟರನಿಗೆ ಲಿಖಿತ ಅರ್ಜಿಯನ್ನು ಸಲ್ಲಿಸಿ ಆ ವಿಷಯವನ್ನು ಸಂಬಂಧಪಟ್ಟ ಪ್ರಾಧಿಕಾರದ ನಿರ್ಧರಣೆಗಾಗಿ ಕಲೆಕ್ಟರನು ಕಳುಹಿಸಿಕೊಡಬೇಕೆಂದು ಕೋರಬಹುದು.

**74. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** (1) ಪ್ರಕರಣ 69ರ ಮೇರೆಗೆ ಪ್ರಾಧಿಕಾರವು ನೀಡಿದ ಐತೀರ್ಪಿನಿಂದ ಬಾಧಿತವಾದ ಅಗತ್ಯ ನಿಕಾಯವು ಅಥವಾ ಯಾರೇ ವ್ಯಕ್ತಿಯು, ಐತೀರ್ಪಿನ ದಿನಾಂಕದಿಂದ ಅರವತ್ತು ದಿನಗಳೊಳಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸದರಿ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಅರ್ಜಿದಾರನಿಗೆ ಸಾಧ್ಯವಾಗಲಿಲ್ಲವೆಂದು ಉಚ್ಚನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಅರವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಬಹುದು.

(2) ಉಪಪ್ರಕರಣ (1)ರಲ್ಲಿ ತಿಳಿಸಿದ ಪ್ರತಿಯೊಂದು ಅಪೀಲನ್ನು ಸಾಧ್ಯವಾದಷ್ಟು ತ್ವರಿತವಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಅಂಥ ಅಪೀಲನ್ನು ವಿಲೇ ಮಾಡಲು ಪ್ರಯತ್ನಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಉಚ್ಚ ನ್ಯಾಯಾಲಯ" ಎಂದರೆ ಯಾವ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಗೆ ಸ್ವಾಧೀನಪಡಿಸಿಕೊಂಡ ಅಥವಾ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯು ಇರುವುದೋ ಆ ಉಚ್ಚ ನ್ಯಾಯಾಲಯ.

## ಅಧ್ಯಾಯ IX

### ಪರಿಹಾರದ ಹಂಚಿಕೆ

**75. ಹಂಚಿಕೆಗೆ ಸಂಬಂಧಿಸಿದ ವಿವರಗಳನ್ನು ನಿರ್ದಿಷ್ಟಪಡಿಸುವುದು.–** ಹಲವಾರು ವ್ಯಕ್ತಿಗಳು ಹಿತಾಸಕ್ತಿಯುಳ್ಳವರಾಗಿದ್ದಾಗ, ಪರಿಹಾರದ ಮೊಬಲಗನ್ನು ಹಂಚಿಕೊಳ್ಳುವುದಕ್ಕೆ ಅಂಥ ವ್ಯಕ್ತಿಗಳು ಒಪ್ಪಿದರೆ, ಅಂಥ ಹಂಚಿಕೆಯ ವಿವರಗಳನ್ನು ಐತೀರ್ಪಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಆ ಐತೀರ್ಪು ಅಂಥ ವ್ಯಕ್ತಿಗಳ ನಡುವೆ, ಪರಿಹಾರವನ್ನು ಸರಿಯಾಗಿ ಹಂಚಿಕೆ ಮಾಡಿರುವುದರ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**76. ಹಂಚಿಕೆಗೆ ಸಂಬಂಧಿಸಿದ ವಿವಾದ.–** ಪರಿಹಾರದ ಮೊಬಲಗಿನ ಬಗ್ಗೆ ಇತ್ಯರ್ಥ ಆಗಿದ್ದಾಗ, ಪರಿಹಾರದ ಮೊಬಲಗನ್ನು ಅಥವಾ ಅದರ ಯಾವುದೇ ಭಾಗದ ಹಂಚಿಕೆಯ ಬಗ್ಗೆ ಅಥವಾ ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ವ್ಯಕ್ತಿಗಳಿಗೆ ಸಂದಾಯ ಮಾಡಬೇಕು ಎಂಬುದರ ಬಗ್ಗೆ ವಿವಾದವೇನಾದರೂ ಉದ್ಭವಿಸಿದರೆ, ಅಂಥ ವಿವಾದಗಳನ್ನು ಕಲೆಕ್ಟರನು ಪ್ರಾಧಿಕಾರಕ್ಕೆ ಒಪ್ಪಿಸಬಹುದು.

## ಅಧ್ಯಾಯ X

### ಪರಿಹಾರದ ಮೊಬಲಗಿನ ಸಂದಾಯ

**77. ಪರಿಹಾರದ ಮೊಬಲಗಿನ ಸಂದಾಯ ಅಥವಾ ಅದನ್ನು ಪ್ರಾಧಿಕಾರದಲ್ಲಿ ಠೇವಣಿ ಇಡುವುದು.–** (1) ಪ್ರಕರಣ 30ರ ಮೇರೆಗೆ ಐತೀರ್ಪನ್ನು ನೀಡಿದ ಮೇಲೆ ಕಲೆಕ್ಟರನು ಆ ಐತೀರ್ಪಿಗೆ ಅನುಸಾರವಾಗಿ ಆ ಪರಿಹಾರದ ಮೊಬಲಗನ್ನು ಪಡೆಯಲು ಹಕ್ಕುಳ್ಳ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ಕಲೆಕ್ಟರನು ಐತೀರ್ಪಿನಲ್ಲಿ ತಿಳಿಸಿರುವಂಥ ಪರಿಹಾರದ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಉಪಪ್ರಕರಣ (2)ರಲ್ಲಿ ತಿಳಿಸಿರುವ ಯಾವುದಾದರೂ ಒಂದು ಅಥವಾ ಹೆಚ್ಚು ಅನಿರೀಕ್ಷಿತ ಸಂದರ್ಭಗಳಿಂದಾಗಿ ಪರಿಹಾರದ ಮೊಬಲಗನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಗಳಿಗೆ ಖುದ್ದಾಗಿ ಸಂದಾಯ ಮಾಡಲಾಗದಿದ್ದರೆ ಅವರ ಬ್ಯಾಂಕ್ ಖಾತೆಗಳಲ್ಲಿ ಆ ಮೊಬಲಗನ್ನು ಠೇವಣಿ ಇಡುವ ಮೂಲಕ ಅದನ್ನು ಅವರಿಗೆ ಸಂದಾಯಮಾಡತಕ್ಕದ್ದು.

(2) ಪರಿಹಾರದ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಯು ಅದನ್ನು ಸ್ವೀಕರಿಸಲು ಒಪ್ಪಿಗೆ ನೀಡದಿದ್ದರೆ ಅಥವಾ ಆ ಭೂಮಿಯನ್ನು ಪರಭಾರೆ ಮಾಡಲು ಸಕ್ಷಮನಾದ ಯಾರೇ ವ್ಯಕ್ತಿ ಇಲ್ಲದಿದ್ದರೆ, ಅಥವಾ ಪರಿಹಾರವನ್ನು ಸ್ವೀಕರಿಸುವುದಕ್ಕೆ ಇರುವ ಹಕ್ಕಿಗೆ ಸಂಬಂಧಿಸಿದಂತೆ ಅಥವಾ ಅದರ ಹಂಚಿಕೆಗೆ ಸಂಬಂಧಿಸಿದಂತೆ ಯಾವುದೇ ವಿವಾದವಿದ್ದರೆ, ಪ್ರಕರಣ 64ರ ಮೇರೆಗೆ ಯಾವ ಪ್ರಾಧಿಕಾರಕ್ಕೆ ಆ ವಿಷಯವನ್ನು ಒಪ್ಪಿಸಲಾಗುವುದೋ ಆ ಪ್ರಾಧಿಕಾರದಲ್ಲಿ ಕಲೆಕ್ಟರನು ಆ ಪರಿಹಾರದ ಮೊಬಲಗನ್ನು ಠೇವಣಿ ಇಡತಕ್ಕದ್ದು:

ಪರಂತು, ಹಿತಾಸಕ್ತಿಯುಳ್ಳವನೆಂದು ಒಪ್ಪಿಕೊಂಡ ಯಾರೇ ವ್ಯಕ್ತಿಯು, ಆ ಮೊಬಲಗಿನ ಪರ್ಯಾಪ್ತತೆಯ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿ ಅಂಥ ಸಂದಾಯವನ್ನು ಸ್ವೀಕರಿಸಬಹುದು:

ಮತ್ತು ಪರಂತು, ವಿರೋಧ ವ್ಯಕ್ತಪಡಿಸದೆಯೇ ಮೊಬಲಗನ್ನು ಸ್ವೀಕರಿಸಿದ ಯಾರೇ ವ್ಯಕ್ತಿಯು, ಪ್ರಕರಣ 64ರ ಉಪಪ್ರಕರಣ (1)ರ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಇದರಲ್ಲಿ ಒಳಗೊಂಡಿರುವುದು ಯಾವುದೂ, ಈ ಅಧಿನಿಯಮದ ಮೇರೆಗೆ ಐತೀರ್ಪಿನಲ್ಲಿ ತಿಳಿಸಿದ ಯಾವುದೇ ಪರಿಹಾರದ ಮೊಬಲಗನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಸ್ವೀಕರಿಸಬಹುದಾದ ಯಾರೇ ವ್ಯಕ್ತಿಯು ಆ ಪರಿಹಾರದ ಮೊಬಲಗಿಗೆ ಕಾನೂನುಬದ್ಧವಾಗಿ ಹಕ್ಕುಳ್ಳ ವ್ಯಕ್ತಿಗೆ ಅದನ್ನು ಸಂದಾಯ ಮಾಡಲು ಅವನಿಗಿರುವ ಹೊಣೆಗಾರಿಕೆಗೆ ಬಾಧಕವುಂಟು ಮಾಡತಕ್ಕದ್ದಲ್ಲ.

**78. ಭೂಮಿಯನ್ನು ಪರಭಾರೆ ಮಾಡಲು ಸಕ್ಷಮನಲ್ಲದ ವ್ಯಕ್ತಿಯ ಭೂಮಿಗಳ ಸಂಬಂಧದಲ್ಲಿ ಠೇವಣಿ ಇಟ್ಟ ಹಣದ ಹೂಡಿಕೆ.–** (1) ಯಾವುದೇ ಹಣವನ್ನು ಪ್ರಕರಣ 77ರ ಉಪಪ್ರಕರಣ (2)ರ ಮೇರೆಗೆ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಠೇವಣಿ ಇಟ್ಟಿದ್ದರೆ ಮತ್ತು ಯಾವ ಭೂಮಿಯ ಸಂಬಂಧದಲ್ಲಿ ಆ ಪರಿಹಾರದ ಮೊಬಲಗಿನ ಬಗ್ಗೆ ಐತೀರ್ಪು ನೀಡಲಾಗಿದೆಯೋ ಆ ಭೂಮಿಯು ಅದನ್ನು ಪರಭಾರೆ ಮಾಡಲು ಯಾವುದೇ ಅಧಿಕಾರವಿಲ್ಲದ ಯಾರೇ ವ್ಯಕ್ತಿಗೆ ಸೇರಿದೆ ಎಂದು ಕಂಡುಬಂದರೆ, ಸಂಬಂಧಪಟ್ಟ ಪ್ರಾಧಿಕಾರವು–

(ಎ) ಯಾವ ಭೂಮಿಗೆ ಸಂಬಂಧಿಸಿದಂತೆ, ಅಂಥ ಹಣವನ್ನು ಠೇವಣಿ ಇಡಬೇಕಾಗಿತ್ತೋ ಆ ಭೂಮಿಗೆ ಇದ್ದ ಹಕ್ಕುಸ್ವಾಮ್ಯದಂಥದೇ ಹಕ್ಕು ಸ್ವಾಮ್ಯವನ್ನು ಮತ್ತು ಮಾಲೀಕತ್ವದ ಷರತ್ತುಗಳಂಥವೇ ಷರತ್ತುಗಳನ್ನು ಹೊಂದಿರುವ ಇತರ ಭೂಮಿಗಳ ಖರೀದಿಗೆ ಆ ಹಣವನ್ನು ಹೂಡುವಂತೆ ಆದೇಶಿಸತಕ್ಕದ್ದು; ಅಥವಾ

(ಬಿ) ಅಂಥ ಖರೀದಿಯನ್ನು ಕೂಡಲೇ ಮಾಡಲಾಗದಿದ್ದರೆ, ಆಗ, ಸಂಬಂಧ ಪಟ್ಟ ಪ್ರಾಧಿಕಾರವು ಯಾವ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಅಥವಾ ಇತರ ಅನುಮೋದಿತ ಭದ್ರತಾ ಪತ್ರಗಳಲ್ಲಿ ಹೂಡುವುದು ಸೂಕ್ತ ಎಂದು ಭಾವಿಸುತ್ತದೋ ಅಂಥ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಅಥವಾ ಇತರ ಅನುಮೋದಿತ ಭದ್ರತಾ ಪತ್ರಗಳಲ್ಲಿ ಆ ಹಣವನ್ನು ಹೂಡುವಂತೆ ಆದೇಶಿಸತಕ್ಕದ್ದು.

ಮತ್ತು ಅಂಥ ಹೂಡಿಕೆಯಿಂದ ಬರುವ ಬಡ್ಡಿಯನ್ನು ಅಥವಾ ಇತರ ಉತ್ಪತ್ತಿಗಳನ್ನು ಸದರಿ ಭೂಮಿಯ ಸ್ವಾಧೀನತೆಗೆ ತತ್ಕಾಲದಲ್ಲಿ ಹಕ್ಕು ಹೊಂದಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡುವಂತೆ ನಿರ್ದೇಶನ ನೀಡತಕ್ಕದ್ದು ಮತ್ತು ಅಂಥ ಹಣವನ್ನು–

(i) ಮೇಲೆ ಹೇಳಿದಂತೆ ಅಂಥ ಇತರ ಭೂಮಿಗಳ ಖರೀದಿಗಾಗಿ; ಅಥವಾ

(ii) ಅದಕ್ಕೆ ಸಂಪೂರ್ಣವಾಗಿ ಹಕ್ಕುಳ್ಳರಾಗುವಂಥ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡುವುದಕ್ಕಾಗಿ

– ಅದನ್ನು ವಿನಿಯೋಗಿಸುವ ತನಕ ಅದನ್ನು ಹಾಗೆಯೇ ಠೇವಣಿ ಇಟ್ಟಿರತಕ್ಕದ್ದು ಮತ್ತು ಹೂಡಿಕೆ ಮಾಡಿ ಇಟ್ಟಿರತಕ್ಕದ್ದು.

(2) ಹಣ ಠೇವಣಿ ಇಟ್ಟಿರುವ ಯಾವ ಪ್ರಕರಣಗಳಿಗೆ ಈ ಪ್ರಕರಣವು ಅನ್ವಯವಾಗುತ್ತದೆಯೋ ಆ ಎಲ್ಲಾ ಪ್ರಕರಣಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರವು, ಈ ಮುಂದೆ ಹೇಳಿರುವಂಥವುಗಳಿಗೆ ಆದ ವೆಚ್ಚಗಳನ್ನು ಅವುಗಳ ಮೇಲಿನ ಎಲ್ಲಾ ಸಮಂಜಸ ಶುಲ್ಕವನ್ನು ಮತ್ತು ಪ್ರಾಸಂಗಿಕ ಖರ್ಚುಗಳನ್ನು ಸೇರಿಸಿ ಕಲೆಕ್ಟರನು ಸಂದಾಯ ಮಾಡತಕ್ಕದೆಂದು ಅದೇಶಿಸತಕ್ಕದ್ದು, ಎಂದರೆ:–

(ಎ) ಮೇಲೆ ಹೇಳಿದಂಥ ಹೂಡಿಕೆಗಳಿಗಾಗಿ ಆದ ವೆಚ್ಚಗಳು;

(ಬಿ) ಯಾವ ಭದ್ರತಾ ಪತ್ರಗಳಲ್ಲಿ ಅಂಥ ಹಣವನ್ನು ತತ್ಕಾಲದಲ್ಲಿ ಹೂಡಿಕೆ ಮಾಡಲಾಗಿದೆಯೋ ಆ ಭದ್ರತಾ ಪತ್ರಗಳಿಂದ ಪ್ರಾಪ್ತವಾಗುವ ಬಡ್ಡಿಯ ಅಥವಾ ಇತರ ಉತ್ಪತ್ತಿಗಳ ಸಂದಾಯಕ್ಕಾಗಿ ಮತ್ತು ಅಂಥ ಹಣದ ಅಸಲನ್ನು ಮತ್ತು ತದ್ವಿರುದ್ಧ ಕ್ಲೇಮುದಾರರ ನಡುವಿನ ವ್ಯಾಜ್ಯದಿಂದಾಗಿ ಉಂಟಾಗಬಹುದಾದ ವ್ಯವಹರಣೆಗಳನ್ನು ಹೊರತುಪಡಿಸಿ, ಆ ಅಸಲಿಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳ ಖರ್ಚನ್ನು ಸಂಬಂಧಪಟ್ಟ ಪ್ರಾಧಿಕಾರದ ನಿಧಿಯಿಂದಲೇ ಸಂದಾಯ ಮಾಡುವುದಕ್ಕಾಗಿ ಮಾಡಿದ ಆದೇಶಗಳ ವೆಚ್ಚಗಳು.

**79. ಇತರ ಪ್ರಕರಣಗಳಲ್ಲಿ ಠೇವಣಿ ಇಟ್ಟ ಹಣದ ಹೂಡಿಕೆ.–** ಪ್ರಕರಣ 78ರಲ್ಲಿ ತಿಳಿಸಿದ ಕಾರಣಗಳನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕಾಗಿ ಈ ಅಧಿನಿಯಮದ ಮೇರೆಗೆ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಯಾವುದೇ ಹಣವನ್ನು ಠೇವಣಿ ಇಟ್ಟಿರುವಾಗ, ಆ ಪ್ರಾಧಿಕಾರವು, ಹಿತಾಸಕ್ತಿಯುಳ್ಳ ಅಥವಾ ಅಂಥ ಹಣದಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾರೇ ಪಕ್ಷಕಾರನು ಸಲ್ಲಿಸಿದ ಅರ್ಜಿಯ ಮೇಲೆ, ಸೂಕ್ತವೆಂದು ತಾನು ಭಾವಿಸುವಂಥ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಅಥವಾ ಇತರ ಅನುಮೋದಿತ ಭದ್ರತಾ ಪತ್ರಗಳಲ್ಲಿ ಆ ಹಣವನ್ನು ಹೂಡಿಕೆ ಮಾಡುವುದಕ್ಕೆ ಆದೇಶ ನೀಡತಕ್ಕದ್ದು ಮತ್ತು ಯಾವ ರೀತಿಯಲ್ಲಿ ಸಂದಾಯ ಮಾಡಿದರೆ, ಹಿತಾಸಕ್ತಿಯುಳ್ಳ ಪಕ್ಷಕಾರರಿಗೆ, ಅಂಥ ಹಣವನ್ನು ಯಾವ ಭೂಮಿಯ ಸಂಬಂಧದಲ್ಲಿ ಠೇವಣಿ ಇಡಲಾಗಿದೆಯೋ ಆ ಭೂಮಿಯಿಂದ ಅವರು ಪಡೆಯಬಹುದಾಗಿದ್ದಷ್ಟೇ ಅಥವಾ ಸರಿಸುಮಾರು ಅದರಷ್ಟೇ ಲಾಭವು ಆ ಹೂಡಿಕೆಯಿಂದ ಆಗುತ್ತದೆ ಎಂದು ಪ್ರಾಧಿಕಾರವು ಪರಿಗಣಿಸುವುದೋ ಆ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

**80. ಬಡ್ಡಿಯ ಸಂದಾಯ.–** ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ ಅಥವಾ ಅದಕ್ಕೂ ಮೊದಲು ಅಂಥ ಪರಿಹಾರದ ಮೊಬಲಗನ್ನು ಸಂದಾಯ ಮಾಡದಿದ್ದಾಗ ಅಥವಾ ಠೇವಣಿ ಇಡದಿದ್ದಾಗ, ಕಲೆಕ್ಟರನು, ಐತೀರ್ಪಿನಲ್ಲಿ ತಿಳಿಸಿರುವ ಹಾಗೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಕಾಲದಿಂದ ಆ ಮೊಬಲಗನ್ನು ಹಾಗೆ ಸಂದಾಯ ಮಾಡುವವರೆಗೆ ಅಥವಾ ಮೊಬಲಗನ್ನು ಠೇವಣಿಯಿಡುವವರೆಗೆ ಆ ಮೊಬಲಗಿನ ಮೇಲೆ ವರ್ಷಕ್ಕೆ ಶೇಕಡ ಒಂಬತ್ತರ ದರದಲ್ಲಿ ಬಡ್ಡಿಯೊಂದಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅಂಥ ಪರಿಹಾರದ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡದಿದ್ದರೆ ಅಥವಾ ಠೇವಣಿ ಇಟ್ಟಿರದಿದ್ದರೆ, ಆ ಅವಧಿಯ ದಿನಾಂಕಕ್ಕೆ ಮುಂಚೆ ಸಂದಾಯ ಮಾಡದ ಅಥವಾ ಠೇವಣಿ ಇಟ್ಟಿರದ ಪರಿಹಾರದ ಮೊಬಲಗಿನ ಅಥವಾ ಅದರ ಭಾಗದ ಮೇಲೆ ಆ ದಿನಾಂಕದಿಂದ ಅಥವಾ ಸದರಿ ಒಂದು ವರ್ಷದ ಅವಧಿಯು ಮುಕ್ತಾಯವಾಗುವ ದಿನಾಂಕದಿಂದ ವರ್ಷಕ್ಕೆ ಶೇಕಡಾ ಹದಿನೈದರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ XI

## ಭೂಮಿಯ ತಾತ್ಕಾಲಿಕ ಅಧಿಭೋಗ

**81. ಬರಡು ಅಥವಾ ಕೃಷಿಯೋಗ್ಯ ಭೂಮಿಯ ತಾತ್ಕಾಲಿಕ ಅಧಿಭೋಗ ಪರಿಹಾರದ ಬಗ್ಗೆ ಭಿನ್ನಾಭಿಪ್ರಾಯವಿದ್ದಾಗ ಕಾರ್ಯವಿಧಾನ.–** (1) ಯಾವುದೇ ಬರಡು ಅಥವಾ ಕೃಷಿಯೋಗ್ಯ ಭೂಮಿಯ ತಾತ್ಕಾಲಿಕ ಅಧಿಭೋಗವು ಮತ್ತು ಬಳಕೆಯು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿದೆಯೆಂದು ಸಮುಚಿತ ಸರ್ಕಾರಕ್ಕೆ ಕಂಡುಬಂದಲೆಲ್ಲಾ ಸಮುಚಿತ ಸರ್ಕಾರವು, ಅಂಥ ಅಧಿಭೋಗದ ಪ್ರಾರಂಭದಿಂದ ಮೂರು ವರ್ಷಗಳಿಗೆ ಮೀರದಂತೆ, ಸೂಕ್ತವೆಂದು ತಾನು ಭಾವಿಸುವಂಥ

ಅವಧಿಯವರೆಗೆ ಆ ಭೂಮಿಯ ಅಧಿಭೋಗವನ್ನು ಪಡೆದುಕೊಳ್ಳುವಂತೆ ಆ ಭೂಮಿಯನ್ನು ಆ ಉದ್ದೇಶಕ್ಕೆ ಬಳಸಿಕೊಳ್ಳುವಂತೆ ಕಲೆಕ್ಟರನಿಗೆ ನಿರ್ದೇಶಿಸಬಹುದು.

(2) ಕಲೆಕ್ಟರನು, ಆ ತರುವಾಯ, ಅಂಥ ಭೂಮಿಯು ಯಾವ ಉದ್ದೇಶಕ್ಕೆ ಅಗತ್ಯವಿದೆಯೋ ಆ ಅಗತ್ಯವನ್ನು ತಿಳಿಸಿ ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಲಿಖಿತ ನೋಟೀಸನ್ನು ನೀಡತಕ್ಕದ್ದು ಮತ್ತು ಮೇಲೆ ತಿಳಿಸಿದಂಥ ಅವಧಿಗೆ ಅದರ ಅಧಿಭೋಗಕ್ಕಾಗಿ ಮತ್ತು ಬಳಕೆಗಾಗಿ ಮತ್ತು ಅದರಿಂದ ತೆಗೆದುಕೊಳ್ಳಲಾಗುವ ವಸ್ತುಗಳು ಯಾವುವಾದರೂ ಇದ್ದರೆ ಅವುಗಳಿಗಾಗಿ ತನ್ನ ಮತ್ತು ಆಯಾಯ ವ್ಯಕ್ತಿಗಳ ನಡುವೆ ಲಿಖಿತ ರೂಪದಲ್ಲಿ ಆದ ಒಪ್ಪಂದಂತೆ ಪರಿಹಾರದ ಮೊಬಲಗನ್ನು ಇಡಿ ಗಂಟಾಗಿಯಾಗಲಿ ಅಥವಾ ಮಾಸಿಕ ಅಥವಾ ಇತರ ನಿಯತಕಾಲಿಕ ಸಂದಾಯಗಳ ರೂಪದಲ್ಲಿ ಆಗಲಿ ಅವರಿಗೆ ಸಂದಾಯ ಮಾಡತಕ್ಕದ್ದು.

(3) ಪರಿಹಾರದ ಮೊಬಲಗಿನ ಪರ್ಯಾಪ್ತತೆಯ ಬಗ್ಗೆ ಅಥವಾ ಅದರ ಹಂಚಿಕೆಯ ಬಗ್ಗೆ ಕಲೆಕ್ಟರನ ಹಾಗೂ ಹಿತಾಸಕ್ತಿಯುಳ್ಳ ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯವುಂಟಾದ ಸಂದರ್ಭದಲ್ಲಿ, ಕಲೆಕ್ಟರನು ಅಂಥ ಭಿನ್ನಾಭಿಪ್ರಾಯವನ್ನು ಪ್ರಾಧಿಕಾರದ ನಿರ್ಣಯಕ್ಕೆ ಒಪ್ಪಿಸತಕ್ಕದ್ದು.

**82. ಭೂಮಿಗೆ ಪ್ರವೇಶಿಸಲು ಮತ್ತು ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ ಮತ್ತು ಭೂಮಿಯನ್ನು ಹಿಂದಿರುಗಿಸಿದ ಮೇಲೆ ಪರಿಹಾರ ನೀಡುವುದು.–** (1) ಅಂಥ ಪರಿಹಾರವನ್ನು ಸಂದಾಯ ಮಾಡಿದ ಮೇಲೆ, ಅಥವಾ ಅಂಥ ಒಪ್ಪಂದವನ್ನು ಮಾಡಿಕೊಂಡ ಮೇಲೆ, ಅಥವಾ ಪ್ರಕರಣ 64ರ ಮೇರೆಗೆ ನಿರ್ಧರಣೆಗಾಗಿ ಪ್ರಾಧಿಕಾರಕ್ಕೆ ಒಪ್ಪಿಸಿದ ಮೇಲೆ, ಕಲೆಕ್ಟರನು ಆ ಭೂಮಿಗೆ ಪ್ರವೇಶಿಸಬಹುದು ಮತ್ತು ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಸದರಿ ನೋಟೀಸಿನ ನಿಬಂಧನೆಗಳಿಗನುಸಾರವಾಗಿ ಅದನ್ನು ಬಳಸಬಹುದು ಅಥವಾ ಬಳಸಲು ಅನುಮತಿ ನೀಡಬಹುದು.

(2) ಅವಧಿ ಮುಕ್ತಾಯವಾದ ನಂತರ, ಕಲೆಕ್ಟರನು ಭೂಮಿಗೆ ಯಾವುದಾದರೂ ಹಾನಿ ಆಗಿದ್ದರೆ ಆ ಹಾನಿಗಾಗಿ ಮತ್ತು ಒಪ್ಪಂದ ಪತ್ರದಲ್ಲಿ ಅವಕಾಶ ಕಲ್ಪಿಸಿರದ ಪರಿಹಾರವನ್ನು ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು ಅಥವಾ ನೀಡತಕ್ಕದ್ದು ಮತ್ತು ಆ ಭೂಮಿಯನ್ನು ಅದರಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಹಿಂದಿರುಗಿಸತಕ್ಕದ್ದು:

ಪರಂತು, ಅಂಥ ಅವಧಿಯ ಪ್ರಾರಂಭದ ನಿಕಟಪೂರ್ವದಲ್ಲಿ ಆ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿತ್ತೋ ಆ ಉದ್ದೇಶಕ್ಕಾಗಿ ಬಳಸುವುದಕ್ಕೆ ಅದು ಶಾಶ್ವತವಾಗಿ ಅನುಪಯುಕ್ತಗೊಂಡರೆ ಮತ್ತು ಆ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಶಾಶ್ವತವಾಗಿ ಅಗತ್ಯವಿದ್ದರೆ ಅದನ್ನು ಸ್ವಾಧೀನಪಡಿಸಿಕೊಳ್ಳುವಂತೆ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಕೋರಿದರೆ, ಸಮುಚಿತ ಸರ್ಕಾರವು, ಈ ಅಧಿನಿಯಮದ ಮೇರೆಗೆ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳತಕ್ಕದ್ದು.

**83. ಭೂಮಿಯ ಸ್ಥಿತಿಯ ಬಗ್ಗೆ ಭಿನ್ನಾಭಿಪ್ರಾಯ.–** ಅವಧಿ ಮುಕ್ತಾಯಗೊಳ್ಳುವ ಸಮಯದಲ್ಲಿ ಭೂಮಿಯ ಸ್ಥಿತಿಯ ಬಗ್ಗೆ ಅಥವಾ ಸದರಿ ಒಪ್ಪಂದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕಲೆಕ್ಟರನ ಮತ್ತು ಹಿತಾಸಕ್ತಿಯುಳ್ಳ ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ಕಲೆಕ್ಟರನು, ಅಂಥ ಭಿನ್ನಾಭಿಪ್ರಾಯವನ್ನು ಸಂಬಂಧಪಟ್ಟ ಪ್ರಾಧಿಕಾರದ ನಿರ್ಣಯಕ್ಕೆ ಒಪ್ಪಿಸತಕ್ಕದ್ದು.

## ಅಧ್ಯಾಯ XII

## ಅಪರಾಧಗಳು ಮತ್ತು ದಂಡನೆಗಳು

**84. ಸುಳ್ಳು ಮಾಹಿತಿ, ದುರ್ಭಾವನೆಯಿಂದ ಕೈಗೊಂಡ ಕ್ರಮ, ಮುಂತಾದವುಗಳಿಗೆ ದಂಡನೆ.–** (1) ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿರುವುದಕ್ಕೆ ಅಥವಾ ನೀಡಿರುವ ನಿರ್ದೇಶನಕ್ಕೆ ಸಂಬಂಧಿಸಿದಂತೆ ವ್ಯಕ್ತಿಯು ಸುಳ್ಳಾದ ಅಥವಾ ತಪ್ಪುದಾರಿಗೆ ಎಳೆಯುವ ಯಾವುದೇ ಮಾಹಿತಿಯನ್ನು ಒದಗಿಸಿದರೆ, ಅಥವಾ ಯಾವುದೇ ಸುಳ್ಳು ದಸ್ತಾವೇಜನ್ನು ಹಾಜರುಪಡಿಸಿದರೆ, ಅವನು, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಸುಳ್ಳು ಕ್ಲೇಮನ್ನು ಮಾಡಿ ಅಥವಾ ಮೋಸದ ಮಾರ್ಗೋಪಾಯಗಳ ಮುಖಾಂತರ ದೊರಕಿಸಿಕೊಂಡ ಯಾವುದೇ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಯ ಪ್ರಯೋಜನವನ್ನು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಸೂಲಿ ಮಾಡಿಕೊಳ್ಳತಕ್ಕದ್ದು.

(3) ಯಾವ ಸರ್ಕಾರಿ ನೌಕರನು ಈ ಅಧಿನಿಯಮದ ಯಾವುದೇ ಉಪಬಂಧದ ಸಂಬಂಧದಲ್ಲಿ ದುರ್ಭಾವನೆಯ ಕ್ರಮವನ್ನು ಕೈಗೊಂಡ ತಪ್ಪಿತಸ್ಥನೆಂದು ರುಜುವಾತಾಗಿದೆಯೋ ಆ ಸರ್ಕಾರಿ ನೌಕರನ ವಿರುದ್ಧ ಶಿಸ್ತು ಪ್ರಾಧಿಕಾರವು, ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳಬಹುದು ಮತ್ತು ಜುಲ್ಮಾನೆಯೂ ಸೇರಿದಂತೆ ಶಿಸ್ತು ಪ್ರಾಧಿಕಾರವು ನಿರ್ಧರಿಸಬಹುದಾದಂಥ ಶಿಕ್ಷೆಗೆ ಅವನು ಗುರಿಯಾಗತಕ್ಕದ್ದು.

**85. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** ಯಾರೇ ವ್ಯಕ್ತಿಯು ಪರಿಹಾರದ ಸಂದಾಯಕ್ಕೆ ಸಂಬಂಧಿಸಿದ ಅಥವಾ ಪುನರ್ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ, ಅಂಥ ಪ್ರತಿಯೊಬ್ಬ ವ್ಯಕ್ತಿಯು, ಆರು ತಿಂಗಳುಗಳ ಅವಧಿಯ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**86. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು ಅಪರಾಧವು ತನ್ನ ಅರಿವಿಗೆ ಬಾರದೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು,

ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಮತ್ತು ಅಗತ್ಯ ನಿಕಾಯವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ, ಆ ಫರ್ಮ್ ನ ಪಾಲುದಾರ.

**87. ಸರ್ಕಾರದ ಇಲಾಖೆಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಆ ಇಲಾಖೆಯ ಮುಖ್ಯಸ್ಥನನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು, ಅಪರಾಧವು ತನ್ನ ಅರಿವಿಗೆ ಬಾರದೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಅಂಥ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಇಲಾಖೆಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಇಲಾಖಾ ಮುಖ್ಯಸ್ಥನಲ್ಲದ, ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ನಿರ್ಲಕ್ಷತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**88. ನ್ಯಾಯಾಲಯದಿಂದ ಅಪರಾಧಗಳ ಸಂಜ್ಞಾನ.–** ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡಲು, ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಸಕ್ಷಮವಾದುದಾಗಿರತಕ್ಕದ್ದಲ್ಲ.

**89. ಅಪರಾಧಗಳು ಅಸಂಜ್ಞೇಯವಾದವುಗಳಾಗಿರುವುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವನ್ನು ಅಸಂಜ್ಞೇಯವಾದ ಅಪರಾಧವೆಂದು ಭಾವಿಸತಕ್ಕದ್ದು.

**90. ಕೆಲವು ನಿರ್ದಿಷ್ಟ ವ್ಯಕ್ತಿಗಳು ಸಲ್ಲಿಸಿದ ದೂರಿನ ಮೇಲೆ ಮಾತ್ರ ಅಪರಾಧಗಳು ಸಂಜ್ಞೇಯವಾದವುಗಳಾಗಿರುವುದು.–** ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಅಗತ್ಯ ನಿಕಾಯವು ಎಸಗಿದೆ ಎಂದು ಆರೋಪಿಸಲಾಗಿದೆಯೋ ಆ ಅಪರಾಧವನ್ನು ಯಾವುದೇ ನ್ಯಾಯಾಲಯವು, ಕಲೆಕ್ಟರನು ಅಥವಾ ಸಮುಚಿತ

ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಅಥವಾ ಬಾಧಿತ ಕುಟುಂಬದ ಯಾರೇ ಸದಸ್ಯನು ಸಲ್ಲಿಸಿದ ಲಿಖಿತ ದೂರಿನ ಮೇಲೆ ಹೊರತು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ XIII

### ಸಂಕೀರ್ಣ

**91. ಭೂಮಿಯನ್ನು ಒಪ್ಪಿಸುವಂತೆ ಮ್ಯಾಜಿಸ್ಟ್ರೇಟನು ಒತ್ತಾಯಿಸುವುದು.–** ಈ ಅಧಿನಿಯಮದ ಮೇರೆಗೆ ಯಾವುದೇ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ ಕಲೆಕ್ಟರನಿಗೆ ವಿರೋಧ ತೋರಿದರೆ ಅಥವಾ ಅಡ್ಡಿಪಡಿಸಿದರೆ, ಅವನು, ಮ್ಯಾಜಿಸ್ಟ್ರೇಟ್ ಆಗಿದ್ದರೆ, ತನಗೇ ಭೂಮಿಯನ್ನು ಒಪ್ಪಿಸುವಂತೆ ಒತ್ತಾಯಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟ್ ಅಲ್ಲದಿದ್ದರೆ, ಅವನು ಮ್ಯಾಜಿಸ್ಟ್ರೇಟ್‌ನಿಗೆ ಅಥವಾ ಪೊಲೀಸ್ ಆಯುಕ್ತನಿಗೆ ಮನವಿ ಮಾಡತಕ್ಕದ್ದು ಮತ್ತು ಸಂದರ್ಭಾನುಸಾರ, ಅಂಥ ಮ್ಯಾಜಿಸ್ಟ್ರೇಟ್‌ನು ಅಥವಾ ಆಯುಕ್ತನು, ಕಲೆಕ್ಟರನಿಗೆ ಭೂಮಿಯನ್ನು ಒಪ್ಪಿಸುವಂತೆ ಒತ್ತಾಯಿಸತಕ್ಕದ್ದು.

**92. ನೋಟೀಸಿನ ಜಾರಿ.–** (1) ಪ್ರಕರಣ 66ರಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಈ ಅಧಿನಿಯಮದ ಮೇರೆಗಿನ ಯಾವುದೇ ನೋಟೀಸನ್ನು, ನೋಟಿಸಿನ ಸಂದರ್ಭದಲ್ಲಿ, ಅದರಲ್ಲಿ ತಿಳಿಸಿರುವ ಅಧಿಕಾರಿಯು ಸಹಿ ಮಾಡಿರುವ, ಅದರ ಒಂದು ಪ್ರತಿಯನ್ನು ವಶಕ್ಕೆ ಒಪ್ಪಿಸುವ ಅಥವಾ ನೀಡುವ ಮೂಲಕ ಮತ್ತು ಯಾವುದೇ ಇತರ ನೋಟೀಸಿನ ಸಂದರ್ಭದಲ್ಲಿ ಕಲೆಕ್ಟರನ ಆದೇಶದ ಮೇರೆಗೆ ಜಾರಿ ಮಾಡತಕ್ಕದ್ದು.

(2) ಕಾರ್ಯಸಾಧ್ಯವಾಗಬಹುದಾದಾಗಲೆಲ್ಲಾ, ನೋಟೀಸಿನಲ್ಲಿ ಹೆಸರಿಸಿರುವ ವ್ಯಕ್ತಿಗೇ ನೋಟಿಸನ್ನು ಜಾರಿ ಮಾಡತಕ್ಕದ್ದು.

(3) ಅಂಥ ವ್ಯಕ್ತಿಯು ಸಿಗದಿದ್ದಾಗ, ಅವನೊಂದಿಗೆ ವಾಸವಾಗಿರುವ ಅವನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡಬಹುದು; ಮತ್ತು ಅಂಥ ವಯಸ್ಕ ಸದಸ್ಯನು ಸಿಗದಿದ್ದರೆ ಅದರಲ್ಲಿ ಹೆಸರಿಸಿರುವ ವ್ಯಕ್ತಿಯು ಸಾಮಾನ್ಯವಾಗಿ ವಾಸವಾಗಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಮನೆಯ ಹೊರ ಬಾಗಿಲಿನ ಮೇಲೆ ಅದನ್ನು ಅಂಟಿಸುವ ಮೂಲಕ ಅಥವಾ ಅದರ ಒಂದು ಪ್ರತಿಯನ್ನು ಮೇಲೆ ತಿಳಿಸಿದ ಅಧಿಕಾರಿಯ ಅಥವಾ ಕಲೆಕ್ಟರನ ಕಚೇರಿಯಲ್ಲಿನ ಅಥವಾ ನ್ಯಾಯಾಲಯದ ಕಟ್ಟಡದಲ್ಲಿನ ಎದ್ದುಕಾಣುವಂಥ ಸ್ಥಳದಲ್ಲಿ ಮತ್ತು ಸ್ವಾಧೀನಪಡಿಸಿಕೊಳ್ಳಲಾಗುವ ಭೂಮಿಯ ಯಾವುದಾದರೂ ಎದ್ದುಕಾಣುವ ಭಾಗದಲ್ಲಿ ಅಂಟಿಸುವ ಮೂಲಕ ನೋಟೀಸನ್ನು ಜಾರಿ ಮಾಡಬಹುದು:

ಪರಂತು, ಕಲೆಕ್ಟರನು ಅಥವಾ ನ್ಯಾಯಾಧೀಶನು ನೋಟೀಸನ್ನು, ಅಂಚೆಯ ಮೂಲಕ ಕಳುಹಿಸಿಕೊಡುವಂತೆ ಆದೇಶಿಸಿದರೆ, ಅದರಲ್ಲಿ ಹೆಸರಿಸಿರುವ ವ್ಯಕ್ತಿಯ ಹೆಸರಿಗೆ ಕೊನೆಯ ಬಾರಿಗೆ ತಿಳಿದುಬಂದ ಅವನ ನಿವಾಸದ ವಿಳಾಸಕ್ಕೆ ಅಥವಾ ವ್ಯವಹಾರದ ಸ್ಥಳದ ವಿಳಾಸಕ್ಕೆ ಬರೆದ ಪತ್ರದ ಮುಖಾಂತರ ಅಂಚೆಯ ಮೂಲಕ ಕಳುಹಿಸಬಹುದು ಮತ್ತು ಅದನ್ನು ಕನಿಷ್ಠಪಕ್ಷ ಎರಡು ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಕೂಡ ಪ್ರಕಟಿಸಬಹುದು ಮತ್ತು ವೆಬ್‌ಸೈಟ್‌ಗೂ ಹಾಕಬಹುದು.

**93. ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಕಡ್ಡಾಯ ಅಲ್ಲ, ಆದರೆ ಆ ಪ್ರಕ್ರಿಯೆಯು ಪೂರ್ಣವಾಗದಿದ್ದಾಗ ಪರಿಹಾರವನ್ನು ನೀಡುವುದು ಕಡ್ಡಾಯ.–** (1) ಯಾವ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲವೋ ಆ ಯಾವುದೇ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸದಿರಲು ಸಮುಚಿತ ಸರ್ಕಾರಕ್ಕೆ ಸ್ವಾತಂತ್ರ್ಯವಿರತಕ್ಕದ್ದು.

(2) ಸಮುಚಿತ ಸರ್ಕಾರವು ಅಂಥ ಯಾವುದೇ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸದಿದ್ದಾಗ ನೋಟೀಸಿನ ಪರಿಣಾಮವಾಗಿ ಅಥವಾ ಅದರ ಮೇರೆಗಿನ ಯಾವುದೇ ವ್ಯವಹರಣೆಗಳ ಪರಿಣಾಮವಾಗಿ ಮಾಲೀಕನಿಗೆ ಉಂಟಾದ ಹಾನಿಗಾಗಿ ಕೊಡಬೇಕಾದ ನಷ್ಟಪರಿಹಾರದ ಮೊಬಲಗನ್ನು ಕಲೆಕ್ಟರನು ನಿರ್ಧರಣೆ ಮಾಡತಕ್ಕದ್ದು ಮತ್ತು ಅಂಥ ಮೊಬಲಗನ್ನು ಸದರಿ ಭೂಮಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ನಡೆಸಿದ್ದಕ್ಕಾಗಿ ಹಿತಾಸಕ್ತಯುಳ್ಳ ವ್ಯಕ್ತಿಯು ಸಮಂಜಸವಾಗಿ ಭರಿಸಿದ ಎಲ್ಲಾ ಖರ್ಚುವೆಚ್ಚಗಳ ಸಹಿತ, ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

**94. ಮನೆ ಅಥವಾ ಕಟ್ಟಡದ ಭಾಗದ ಸ್ವಾಧೀನ.–** (1) ಯಾವುದೇ ಮನೆಯನ್ನು ತಯಾರಿಕಾ ಕಾರ್ಯಾಗಾರವನ್ನು ಅಥವಾ ಇತರ ಕಟ್ಟಡವನ್ನು ಇಡಿಯಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಅದರ ಮಾಲೀಕನು ಅಪೇಕ್ಷಿಪಟ್ಟರೆ, ಅಂಥ ಯಾವುದೇ ಮನೆಯ, ತಯಾರಿಕಾ ಕಾರ್ಯಾಗಾರದ ಅಥವಾ ಇತರ ಕಟ್ಟಡದ ಒಂದು ಭಾಗವನ್ನು ಮಾತ್ರವೇ ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸತಕ್ಕದ್ದಲ್ಲ:

ಪರಂತು, ಯಾವ ಭೂಮಿಯನ್ನು ಈ ಅಧಿನಿಯಮದ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆಯೋ ಆ ಯಾವುದೇ ಭೂಮಿಯು, ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಆ ಮನೆಯ, ತಯಾರಿಕಾ ಕಾರ್ಯಾಗಾರದ ಅಥವಾ ಕಟ್ಟಡದ ಭಾಗ ಆಗಿದೆಯೇ ಅಥವಾ ಭಾಗ ಅಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಕಲೆಕ್ಟರನು ಅಂಥ ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಪ್ರಶ್ನೆಯು ಇತ್ಯರ್ಥವಾಗುವವರೆಗೂ ಅಂಥ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಪ್ರಾಧಿಕಾರವು, ಉಪಪ್ರಕರಣ (1)ರ ಪರಂತುಕದ ಮೇರೆಗೆ ತನಗೆ ಕಳುಹಿಸಿದಂಥ ವಿಷಯವನ್ನು ಇತ್ಯರ್ಥಪಡಿಸುವಾಗ, ಯಾವ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆಯೋ ಆ ಭೂಮಿಯು, ಆ ಮನೆಯ, ತಯಾರಿಕಾ ಕಾರ್ಯಾಗಾರದ ಅಥವಾ ಕಟ್ಟಡದ ಸಂಪೂರ್ಣ ಮತ್ತು ಅಬಾಧಿತ ಬಳಕೆಗೆ ಸಮಂಜಸವಾಗಿ ಅಗತ್ಯವಾಗಿದೆಯೇ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

(3) ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದ ಭೂಮಿಯನ್ನು ಹಿತಾಸಕ್ತಿಯುಳ್ಳ ವ್ಯಕ್ತಿಯ, ಇತರ ಭೂಮಿಯಿಂದ ಪ್ರತ್ಯೇಕಿಸುವ ಕಾರಣದಿಂದಾಗಿ ಆ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಯಾವುದೇ ಕ್ಲೇಮನ್ನು ಮಾಡಿದ ಸಂದರ್ಭದಲ್ಲಿ, ಆ ಕ್ಲೇಮು ಸಮಂಜಸವಾದುದಾಗಿಲ್ಲ ಎಂದು ಅಥವಾ ಅತಿಯಾದದ್ದು ಎಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಮೊದಲು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದ ಭೂಮಿಯು, ಯಾವ ಭೂಮಿಯ ಒಂದು ಭಾಗವಾಗಿತ್ತೋ ಆ ಇಡೀ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಂತೆ, ಕಲೆಕ್ಟರನು ತನ್ನ ಐತೀರ್ಪನ್ನು ನೀಡುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಸಮುಚಿತ ಸರ್ಕಾರವು ಆದೇಶಿಸಬಹುದು.

(4) ಹಾಗೆ ಅಗತ್ಯವಾದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ, 11ರಿಂದ 19ನೇ (ಎಂದರೆ ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳ ಮೇರೆಗೆ ಹೊಸ ಘೋಷಣೆಯ ಅಥವಾ ಇತರ ವ್ಯವಹರಣೆಗಳ ಅಗತ್ಯ ಇರತಕ್ಕದ್ದಲ್ಲ; ಆದರೆ ಸಮುಚಿತ ಸರ್ಕಾರದ ಆದೇಶದ ಒಂದು ಪ್ರತಿಯನ್ನು ಕಲೆಕ್ಟರನು ವಿಳಂಬ ಮಾಡದೆ ಹಿತಾಸಕ್ತಿಯುಳ್ಳ ವ್ಯಕ್ತಿಗೆ ಕಳುಹಿಸತಕ್ಕದ್ದು ಮತ್ತು ತದನಂತರ ಪ್ರಕರಣ 23ರ ಮೇರೆಗೆ ತನ್ನ ಐತೀರ್ಪನ್ನು ನೀಡಲು ಮುಂದುವರಿಯತಕ್ಕದ್ದು.

**95. ಸ್ಥಳೀಯ ಪ್ರಾಧಿಕಾರದ ಅಥವಾ ಅಗತ್ಯ ನಿಕಾಯದ ಖರ್ಚಿನಲ್ಲಿ ಭೂಸ್ವಾಧೀನ.–** (1) ಸ್ಥಳೀಯ ಪ್ರಾಧಿಕಾರದ ಅಥವಾ ಯಾವುದೇ ಅಗತ್ಯ ನಿಕಾಯದ ನಿಯಂತ್ರಣದಲ್ಲಿರುವ ಅಥವಾ ನಿರ್ವಹಣೆಯಲ್ಲಿರುವ ಯಾವುದೇ ನಿಧಿಯ ಖರ್ಚಿನಲ್ಲಿ ಭೂಸ್ವಾಧೀನದ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಭೂಮಿಯ ಅಂಥ ಸ್ವಾಧೀನಕ್ಕೆ ಪ್ರಾಸಂಗಿಕವಾಗಿ ತಗಲುವ ಭೂವೆಚ್ಚಗಳನ್ನು ಅಂಥ ನಿಧಿಯಿಂದಲೇ ಅಥವಾ ಅಗತ್ಯ ನಿಕಾಯವೇ ಭರಿಸತಕ್ಕದ್ದು.

(2) ಅಂಥ ಪ್ರಕರಣಗಳಲ್ಲಿ, ಕಲೆಕ್ಟರನ ಅಥವಾ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ನಡೆದ ಯಾವುದೇ ವ್ಯವಹರಣೆಯಲ್ಲಿ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಅಥವಾ ಅಗತ್ಯ ನಿಕಾಯವು, ಪರಿಹಾರದ ಮೊಬಲಗನ್ನು ನಿರ್ಧರಣೆ ಮಾಡುವ ಉದ್ದೇಶಕ್ಕಾಗಿ ಹಾಜರಾಗಬಹುದು ಮತ್ತು ಸಾಕ್ಷ್ಯವನ್ನು ಒದಗಿಸಬಹುದು:

ಪರಂತು, ಅಂಥ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಅಗತ್ಯ ನಿಕಾಯವು ವಿಷಯವನ್ನು ನಿರ್ಧರಣೆಗಾಗಿ ಪ್ರಕರಣ 64 ಮೇರೆಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕಳುಹಿಸಿಕೊಡುವಂತೆ ತಗಾದೆ ಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

**96. ಆದಾಯ ತೆರಿಗೆ, ಸ್ಟ್ಯಾಂಪು ಸುಂಕ ಮತ್ತು ಫೀಜುಗಳಿಂದ ವಿನಾಯಿತಿ.–** ಪ್ರಕರಣ 46ರ ಮೇರೆಗೆ ಹೊರತು, ಈ ಅಧಿನಿಯಮದ ಮೇರೆಗೆ ನೀಡಿದ ಯಾವುದೇ ಐತೀರ್ಪಿನಲ್ಲಿ ಅಥವಾ ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ತಿಳಿಸಿರುವ ಮೊಬಲಗಿನ ಮೇಲೆ ಯಾವುದೇ ಆದಾಯ ತೆರಿಗೆಯನ್ನು ಅಥವಾ ಸ್ಟ್ಯಾಂಪು ಸುಂಕವನ್ನು ವಿಧಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಐತೀರ್ಪಿನ ಅಥವಾ ಒಪ್ಪಂದದ ಮೇರೆಗೆ ಕ್ಲೇಮು ಮಾಡುವ ವ್ಯಕ್ತಿಯು, ಅದರ ಪ್ರತಿಗಾಗಿ ಯಾವುದೇ ಫೀಜನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದಲ್ಲ.

**97. ಸಾಕ್ಷ್ಯವಾಗಿ ಪ್ರಮಾಣೀಕೃತ ಪ್ರತಿಯ ಅಂಗೀಕಾರ.–** ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ನೋಂದಣಿ ಅಧಿನಿಯಮ, 1908 (1908ರ 16)ರ ಪ್ರಕರಣ 57ರ ಮೇರೆಗೆ ನೀಡಿದ ಪ್ರತಿಯು ಸೇರಿದಂತೆ ಆ ಅಧಿನಿಯಮದ ಮೇರೆಗೆ ನೋಂದಣಿಯಾದ ದಸ್ತಾವೇಜಿನ ಪ್ರಮಾಣೀಕೃತ ಪ್ರತಿಯನ್ನು, ಅಂಥ ದಸ್ತಾವೇಜಿನಲ್ಲಿ ದಾಖಲಿಸಿದ ವ್ಯವಹರಣೆಯ ಸಾಕ್ಷ್ಯವಾಗಿ ಅಂಗೀಕರಿಸಬಹುದು.

**98. ಅಧಿನಿಯಮದ ಅನುಸಾರವಾಗಿ ಮಾಡಿದ ಯಾವುದೇ ಕಾರ್ಯಕ್ಕಾಗಿ ದಾವೆಗಳನ್ನು ಹೂಡುವ ಸಂದರ್ಭದಲ್ಲಿ ನೋಟೀಸು.–** ಈ ಅಧಿನಿಯಮದ ಅನುಸಾರವಾಗಿ ಮಾಡಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ, ಉದ್ದೇಶಿತ ವ್ಯವಹರಣೆಯ ಬಗ್ಗೆ ಮತ್ತು ಅದರ ಕಾರಣದ ಬಗ್ಗೆ ಆ ವ್ಯಕ್ತಿಗೆ ಲಿಖಿತ ನೋಟೀಸನ್ನು ಒಂದು ತಿಂಗಳಿಗೆ ಮುಂಚೆ ನೀಡದೇ ಇಲ್ಲವೇ ಸಾಕಷ್ಟು ಮಾರ್ಪಾಡುಗಳನ್ನು ಮಾಡಿದ ನಂತರವಲ್ಲದೇ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

**99. ಉದ್ದೇಶವನ್ನು ಬದಲಾಯಿಸುವುದಕ್ಕೆ ಅವಕಾಶ ನೀಡದಿರುವುದು.–** ಭೂಮಿಯನ್ನು ಮೂಲತಃ ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿತ್ತೋ ಆ ಉದ್ದೇಶದ ಅಥವಾ ಅದಕ್ಕೆ ಸಂಬಂಧಿಸಿದ ಉದ್ದೇಶಗಳ ಬದಲಾವಣೆಗೆ ಯಾವುದೇ ಅವಕಾಶವನ್ನು ನೀಡತಕ್ಕದ್ದಲ್ಲ:

ಪರಂತು, ಯಾವುದೇ ಅನಿರೀಕ್ಷಿತ ಸಂದರ್ಭ ಸನ್ನಿವೇಶಗಳ ಕಾರಣದಿಂದ ಮೂಲಭೂತ ಬದಲಾವಣೆಯಾದ ಪರಿಣಾಮವಾಗಿ, ಭೂಮಿಯನ್ನು, ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತೋ ಆ ಉದ್ದೇಶ ಅನುಪಯುಕ್ತವಾದರೆ, ಆಗ ಸಮುಚಿತ ಸರ್ಕಾರವು ಆ ಭೂಮಿಯನ್ನು ಯಾವುದೇ ಇತರ ಸಾರ್ವಜನಿಕ ಉದ್ದೇಶಕ್ಕೆ ಬಳಸಿಕೊಳ್ಳಬಹುದು.

**100. ಅನುಮತಿಯಿಲ್ಲದೆ ಮಾಲೀಕತ್ವದ ಬದಲಾವಣೆಗೆ ಅವಕಾಶ ನೀಡದಿರುವುದು.–** ಸಮುಚಿತ ಸರ್ಕಾರದಿಂದ ನಿರ್ದಿಷ್ಟ ಅನುಮತಿ ಪಡೆಯದೇ ಮಾಲೀಕತ್ವದಲ್ಲಿ ಯಾವುದೇ ಬದಲಾವಣೆ ಮಾಡುವುದಕ್ಕೆ ಅವಕಾಶ ನೀಡತಕ್ಕದ್ದಲ್ಲ.

**101. ಬಳಸಿಕೊಳ್ಳದ ಭೂಮಿಯನ್ನು ಹಿಂದಿರುಗಿಸುವುದು.–** ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯು, ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಐದು ವರ್ಷಗಳ ಕಾಲ ಬಳಕೆಯಾಗದೆ ಉಳಿದಾಗ, ಅದನ್ನು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಾಪಸು ಮಾಡುವ ಮೂಲಕ, ಸಂದರ್ಭಾನುಸಾರ ಮೂಲ ಮಾಲೀಕನಿಗೆ ಅಥವಾ ಮಾಲೀಕರಿಗೆ ಅಥವಾ ಅವರ ಕಾನೂನುಬದ್ಧ ವಾರಸುದಾರರಿಗೆ ಅಥವಾ ಸಮುಚಿತ ಸರ್ಕಾರದ ಭೂ ಬ್ಯಾಂಕಿಗೆ ಹಿಂದಿರುಗಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ, ``ಭೂ ಬ್ಯಾಂಕ್'' ಎಂದರೆ, ಸರ್ಕಾರಿ ಮಾಲೀಕತ್ವದ ಭೂಮಿಗಳನ್ನು, ಸ್ವಾಧೀನಪಡಿಸಿಕೊಂಡ ಆದರೆ ಬಿಟ್ಟುಕೊಟ್ಟಿರುವ, ಬಳಸಿಕೊಳ್ಳದಿರುವ ಭೂಮಿಗಳನ್ನು ಮತ್ತು ಯಾವ ಸ್ವತ್ತುಗಳ ತೆರಿಗೆ ಬಾಕಿ ಇದೆಯೋ ಆ ಸ್ವತ್ತುಗಳನ್ನು ಉತ್ಪಾದಕ ಬಳಕೆಗೆ ಪರಿವರ್ತಿಸಿಕೊಳ್ಳುವ ಬಗ್ಗೆ ಗಮನ ಕೇಂದ್ರೀಕರಿಸಿದ ಸರ್ಕಾರಿ ಸಂಸ್ಥೆ.

**102. ಹೆಚ್ಚಿನ ಪ್ರತಿಫಲಕ್ಕಾಗಿ ವರ್ಗಾವಣೆ ಮಾಡಿದಾಗ ಭೂಮಿಯ ಬೆಲೆಯಲ್ಲಿನ ವ್ಯತ್ಯಾಸವನ್ನು ಹಂಚಿ ಹಾಕುವುದು.–** ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯ ಮಾಲೀಕತ್ವವನ್ನು, ಆ ಭೂಮಿಯ ಮೇಲೆ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳದೆ, ಪ್ರತಿಫಲಕ್ಕಾಗಿ ಯಾವುದೇ ವ್ಯಕ್ತಿಗೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ, ಭೂಮಿಯ ಮೌಲ್ಯದಲ್ಲಿ ಆದ ಹೆಚ್ಚಳದ ಶೇಕಡಾ ನಲವತ್ತರಷ್ಟನ್ನು, ಸ್ವಾಧೀನಪಡಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಯಾವ ಬೆಲೆಯಲ್ಲಿ ಆ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತೋ ಆ ಬೆಲೆಗೆ ಪ್ರಮಾಣಾನುಸಾರವಾಗಿ, ಯಾವ ವ್ಯಕ್ತಿಗಳಿಂದ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತೋ ಆ ವ್ಯಕ್ತಿಗಳ ಅಥವಾ ಅವರ ವಾರಸುದಾರರ ನಡುವೆ ಹಂಚಿ ಹಾಕತಕ್ಕದ್ದು:

ಪರಂತು, ಭೂಸ್ವಾಧೀನತೆಯ ವ್ಯವಹರಣೆಗಳು ಮುಕ್ತಾಯಗೊಂಡ ನಂತರ ಆಗುವ ಮೊದಲ ಮಾರಾಟದ ಅಥವಾ ವರ್ಗಾವಣೆಯ ಮೇಲೆ ಮಾತ್ರವೇ ಆ ಪ್ರಯೋಜನವು ಪ್ರಾಪ್ತವಾಗತಕ್ಕದ್ದು.

**103. ಈ ಅಧಿನಿಯಮದ ಉಪಬಂಧಗಳು ಅಸ್ತಿತ್ವದಲ್ಲಿರುವ ಕಾನೂನುಗಳ ಜೊತೆಗೆ ಇರುವುದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಜೊತೆಗೆ ಇರಬೇಕೇ ಹೊರತು, ಅದನ್ನು ಕುಂಠಿತಗೊಳಿಸತಕ್ಕದ್ದಲ್ಲ.

**104. ಗುತ್ತಿಗೆಗೆ ಪಡೆಯಲು ಸಮುಚಿತ ಸರ್ಕಾರದ ಆಯ್ಕೆ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸಮುಚಿತ ಸರ್ಕಾರವು, ಪ್ರಕರಣ 2ರ ಉಪಪ್ರಕರಣ (1)ರಲ್ಲಿ ತಿಳಿಸಿರುವ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ,

ಸಾಧ್ಯವಿರುವಲ್ಲೆಲ್ಲಾ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬದಲಾಗಿ, ಗುತ್ತಿಗೆಗೆ ಪಡೆಯುವ ಆಯ್ಕೆಯನ್ನು ಚಲಾಯಿಸಲು ಸ್ವಾತಂತ್ರ್ಯ ಹೊಂದಿರತಕ್ಕದ್ದು.

**105. ಈ ಅಧಿನಿಯಮದ ಉಪಬಂಧಗಳು ಕೆಲವು ಪ್ರಕರಣಗಳಲ್ಲಿ ಅನ್ವಯವಾಗದಿರುವುದು ಅಥವಾ ಕೆಲವು ಮಾರ್ಪಾಟುಗಳೊಂದಿಗೆ ಅನ್ವಯಿಸುವುದು.–** (1) ಉಪಪ್ರಕರಣ (3)ಕ್ಕೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳು ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಸ್ವಾಧೀನಕ್ಕೆ ಸಂಬಂಧಿಸಿದ ಅಧಿನಿಯಮಿತಿಗಳಿಗೆ ಅನ್ವಯವಾಗತಕ್ಕದ್ದಲ್ಲ.

(2) ಪ್ರಕರಣ 106ರ ಉಪಪ್ರಕರಣ (2)ಕ್ಕೆ ಒಳಪಟ್ಟು, ಕೇಂದ್ರ ಸರ್ಕಾರವು, ಅಧಿಸೂಚನೆ ಮೂಲಕ, ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಿತಿಗಳಲ್ಲಿ ಯಾವುದೇ ಅಧಿನಿಯಮಿತಿಯನ್ನು ಬಿಟ್ಟುಬಿಡಬಹುದು ಅಥವಾ ಅವುಗಳಿಗೆ ಯಾವುದೇ ಅಧಿನಿಯಮಿತಿಯನ್ನು ಸೇರಿಸಬಹುದು.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗಾಗಿ, ಮೊದಲನೇ ಅನುಸೂಚಿಗೆ ಅನುಸಾರವಾಗಿ ಪರಿಹಾರದ ಮೊಬಲಗಿನ ನಿರ್ಧರಣೆಗೆ ಮತ್ತು ಎರಡನೇ ಮತ್ತು ಮೂರನೇ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿರುವ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಸಂಬಂಧಿಸಿದ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಮೇರೆಗಿನ ಭೂಸ್ವಾಧೀನ ಪ್ರಕರಣಗಳಿಗೆ, ಬಾಧಿತ ಕುಟುಂಬಗಳಿಗೆ ಪ್ರಯೋಜನವಾಗುವ ಹಾಗೆ ಅನ್ವಯಿಸತಕ್ಕದ್ದು ಅಥವಾ ಸಂದರ್ಭಾನುಸಾರ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಹಾರದ ಮೊಬಲಗಿನ ಪ್ರಮಾಣವನ್ನು ಕಡಿಮೆ ಮಾಡದಂಥ ಅಥವಾ ಪುನರ್ವಸತಿ ಅಥವಾ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳ ಪರಿಣಾಮವನ್ನು ಕುಗ್ಗಿಸದಂಥ ವಿನಾಯಿತಿಗಳೊಂದಿಗೆ ಅಥವಾ ಮಾರ್ಪಾಡುಗಳೊಂದಿಗೆ ಅನ್ವಯಿಸತಕ್ಕದ್ದೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ಹೊರಡಿಸಲು ಉದ್ದೇಶಿಸಿರುವ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಕರಡು ರೂಪದಲ್ಲಿ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಅನುಮೋದಿಸದಿರಲು ಎರಡೂ ಸದನಗಳು ಒಪ್ಪಿದರೆ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡು ಸದನಗಳು ಒಪ್ಪಿದರೆ, ಅಧಿಸೂಚನೆಯನ್ನು ಸಂದರ್ಭಾನುಸಾರ ಹೊರಡಿಸತಕ್ಕದ್ದಲ್ಲ ಅಥವಾ ಸಂಸತ್ತಿನ ಎರಡು ಸದನಗಳು ಒಪ್ಪಿಕೊಂಡಿರಬಹುದಾದಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಹೊರಡಿಸತಕ್ಕದ್ದು.

**106. ಅನುಸೂಚಿಯ ತಿದ್ದುಪಡಿಗೆ ಅಧಿಕಾರ.–** (1) ಕೇಂದ್ರ ಸರ್ಕಾರವು, ಪರಿಹಾರದ ಮೊಬಲಗಿನ ಪ್ರಮಾಣವನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡದ ಹಾಗೆ ಅಥವಾ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳ ಪರಿಣಾಮವನ್ನು ಯಾವುದೇ ರೀತಿಯಲ್ಲಿ ಕುಗ್ಗಿಸದ ಹಾಗೆ ಈ ಅಧಿನಿಯಮದ ಅನುಸೂಚಿಗಳಲ್ಲಿ ಯಾವುದೇ ಅನುಸೂಚಿಯನ್ನು ಅಧಿಸೂಚನೆ ಮೂಲಕ ತಿದ್ದುಪಡಿ ಮಾಡಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಲು ಉದ್ದೇಶಿಸಿರುವ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಕರಡು ರೂಪದಲ್ಲಿ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಅನುಮೋದಿಸದಿರಲು ಎರಡೂ ಸದನಗಳು ಒಪ್ಪಿದರೆ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡು ಸದನಗಳು ಒಪ್ಪಿದರೆ, ಅಧಿಸೂಚನೆಯನ್ನು ಸಂದರ್ಭಾನುಸಾರ ಹೊರಡಿಸತಕ್ಕದ್ದಲ್ಲ ಅಥವಾ ಸಂಸತ್ತಿನ ಎರಡು ಸದನಗಳು ಒಪ್ಪಿಕೊಂಡಿರಬಹುದಾದಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಹೊರಡಿಸತಕ್ಕದ್ದು.

**107. ಬಾಧಿತ ಕುಟುಂಬಗಳಿಗೆ ಹೆಚ್ಚು ಪ್ರಯೋಜನಕರವಾದ ಯಾವುದೇ ಕಾನೂನನ್ನು ತರಲು ರಾಜ್ಯ ವಿಧಾನಮಂಡಲಗಳಿಗೆ ಅಧಿಕಾರ.–** ಈ ಅಧಿನಿಯಮದಲ್ಲಿ ಇರುವುದು ಯಾವುದು, ಯಾವ ಹಕ್ಕುಗಳು ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬಹುದಾದದಕ್ಕಿಂತ ಹೆಚ್ಚಿನ ಪರಿಹಾರವನ್ನು ನೀಡುತ್ತವೆಯೋ ಈ ಅಧಿನಿಯಮದಲ್ಲಿ ನಮೂದಿಸಿರುವ ಅಂಥ ಹಕ್ಕುಗಳನ್ನು ಹೆಚ್ಚಿಸುವುದಕ್ಕಾಗಿ ಅಥವಾ ಅವುಗಳಿಗೆ ಇನ್ನಷ್ಟು ಹಕ್ಕುಗಳನ್ನು ಸೇರಿಸುವುದಕ್ಕಾಗಿ ಅಥವಾ ಈ ಅಧಿನಿಯಮದ ಮೇರೆಗೆ ಒದಗಿಸಬಹುದಾದಂಥ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಿಂತ ಹೆಚ್ಚು ಪ್ರಯೋಜನಕರವಾದ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಗೆ ಅವಕಾಶ ಕಲ್ಪಿಸುವುದಕ್ಕಾಗಿ ಯಾವುದೇ ಕಾನೂನನ್ನು ರಚಿಸಲು ಯಾವುದೇ ರಾಜ್ಯಕ್ಕೆ ಅಡ್ಡಿ ಉಂಟು ಮಾಡತಕ್ಕದ್ದಲ್ಲ.

**108. ಉತ್ತಮ ಪರಿಹಾರವನ್ನು ಮತ್ತು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸೌಲಭ್ಯವನ್ನು ಪಡೆದುಕೊಳ್ಳಲು ಬಾಧಿತ ಕುಟುಂಬಗಳಿಗೆ ಆಯ್ಕೆ ಅವಕಾಶ.–** (1) ಭೂಸ್ವಾಧೀನಕ್ಕಾಗಿ ಈ ಅಧಿನಿಯಮದ ಮೇರೆಗೆ ಲೆಕ್ಕ ಹಾಕಿರುವುದಕ್ಕಿಂತ ಹೆಚ್ಚಿನ ಪರಿಹಾರದ ಮೊಬಲಗಿಗೆ ಒಂದು ರಾಜ್ಯ ಸರ್ಕಾರವು ರಚಿಸಿರುವ ರಾಜ್ಯ ಕಾನೂನಿನಲ್ಲಿ ಅಥವಾ ರೂಪಿಸಿರುವ ಕಾರ್ಯ ನೀತಿಯಲ್ಲಿ ಅವಕಾಶ ಕಲ್ಪಿಸಿದ್ದರೆ, ಬಾಧಿತ ವ್ಯಕ್ತಿಗಳು ಅಥವಾ ಅವನ ಕುಟುಂಬವು ಅಥವಾ ಅವನ ಕುಟುಂಬದ ಸದಸ್ಯನು ಅಂಥ ರಾಜ್ಯದ ಕಾನೂನಿನ ಮೇರೆಗೆ ಅಥವಾ ಆ ಕಾರ್ಯ ನೀತಿಯ ಮೇರೆಗೆ ಅಂಥ ಹೆಚ್ಚಿನ ಪರಿಹಾರದ ಮೊಬಲಗನ್ನು ಮತ್ತು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸೌಲಭ್ಯವನ್ನು ಪಡೆದುಕೊಳ್ಳಲು ತಮಗಿರುವ ಆಯ್ಕೆ ಅವಕಾಶವನ್ನು ಚಲಾಯಿಸಬಹುದು.

(2) ಈ ಅಧಿನಿಯಮದ ಮೇರೆಗೆ ದೊರೆಯುವುದಕ್ಕಿಂತ ಹೆಚ್ಚು ಪ್ರಯೋಜನಕರವಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸೌಲಭ್ಯಕ್ಕೆ ಒಂದು ರಾಜ್ಯದ ಸರ್ಕಾರವು ರಚಿಸಿದ ರಾಜ್ಯ ಕಾನೂನಿನಲ್ಲಿ ಅಥವಾ ರೂಪಿಸಿದ ಕಾರ್ಯ ನೀತಿಯಲ್ಲಿ ಅವಕಾಶ ಕಲ್ಪಿಸಿದ್ದರೆ ಬಾಧಿತ ವ್ಯಕ್ತಿಗಳು ಅಥವಾ ಅವನ ಕುಟುಂಬವು ಅಥವಾ ಅವನ ಕುಟುಂಬದ ಸದಸ್ಯನು ಈ ಅಧಿನಿಯಮದ ಮೇರೆಗೆ ದೊರೆಯುವಂಥ ಪುನರ್ ವಸತಿ, ಪುನರ್ ವ್ಯವಸ್ಥೆ ಸೌಲಭ್ಯಕ್ಕೆ ಬದಲಾಗಿ ರಾಜ್ಯದ ಅಂಥ ರಾಜ್ಯ ಕಾನೂನಿನಲ್ಲಿ ಅಥವಾ ಅಂಥ ಕಾರ್ಯನೀತಿಯಲ್ಲಿ ಅವಕಾಶ ಕಲ್ಪಿಸಿರುವಂಥ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸೌಲಭ್ಯವನ್ನು ಪಡೆದುಕೊಳ್ಳಲು ತಮಗಿರುವ ಆಯ್ಕೆ ಅವಕಾಶವನ್ನು ಚಲಾಯಿಸಬಹುದು.

**109. ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು, ಅದರಲ್ಲೂ ಮುಖ್ಯವಾಗಿ ಮತ್ತು ಈ ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು. ಎಂದರೆ,

(ಎ) ಪ್ರಕರಣ 2ರ ಉಪಪ್ರಕರಣ (2)ರ ಮೊದಲನೇ ಪರಂತುಕದ ಮೇರೆಗೆ ಸಮ್ಮತಿಯನ್ನು ಮುಂಚಿತವಾಗಿಯೇ ಪಡೆದುಕೊಳ್ಳುವ ವಿಧಾನ;

(ಬಿ) ಪ್ರಕರಣ 2ರ ಉಪಪ್ರಕರಣ (3)ರ (ಎ) ಖಂಡದ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಅಥವಾ ನಗರ ಪ್ರದೇಶಗಳಲ್ಲಿ ಭೂಮಿಯ ಮಿತಿಗಳು;

(ಸಿ) ಪ್ರಕರಣ 4ರ ಉಪಪ್ರಕರಣ (1)ರ ಮೇರೆಗೆ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನವನ್ನು ನಡೆಸುವ ರೀತಿ ಮತ್ತು ಅದಕ್ಕೆ ಕಾಲಮಿತಿ;

(ಡಿ) ಪ್ರಕರಣ 6ರ ಉಪಪ್ರಕರಣ (1)ರ ಮೇರೆಗೆ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ವರದಿಗಳನ್ನು ತಯಾರಿಸುವ ಮತ್ತು ಪ್ರಕಟಿಸುವ ರೀತಿ;

(ಇ) ಪ್ರಕರಣ 16ರ ಉಪಪ್ರಕರಣ (1)ರ ಮೇರೆಗೆ ಸಮೀಕ್ಷೆಯನ್ನು ನಡೆಸುವ ಮತ್ತು ಗಣತಿ ಕಾರ್ಯವನ್ನು ಕೈಗೊಳ್ಳುವ ರೀತಿ ಮತ್ತು ಕಾಲ;

(ಎಫ್) ಪ್ರಕರಣ 16ರ ಉಪಪ್ರಕರಣ (2)ರ ಮೇರೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಯೋಜನೆಯ ಕರಡನ್ನು ತಯಾರಿಸುವ ರೀತಿ;

(ಜಿ) ಪ್ರಕರಣ 16ರ ಉಪಪ್ರಕರಣ (5)ರ ಮೇರೆಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಕಾರ್ಯಕ್ರಮವನ್ನು ನಡೆಸುವ ರೀತಿ;

(ಹೆಚ್) ಅಗತ್ಯ ನಿಕಾಯವು ಪ್ರಕರಣ 19ರ ಉಪಪ್ರಕರಣ (2)ರ ಎರಡನೇ ಪರಂತುಕದ ಮೇರೆಗೆ ಹಣವನ್ನು ಠೇವಣಿ ಮಾಡುವ ರೀತಿ;

(ಐ) ಹೆಚ್ಚಿಗೆ ಸಂದಾಯ ಮಾಡಿದ ಯಾವುದೇ ಹಣವನ್ನು ಪ್ರಕರಣ 33ರ ಉಪಪ್ರಕರಣ (3)ರ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ವಸೂಲಿ ಮಾಡಬಹುದೋ ಆ ರೀತಿ ಮತ್ತು ಆ ಅವಧಿ;

(ಜೆ) ಪ್ರಕರಣ 41ರ ಉಪಪ್ರಕರಣ (4)ರ ಮೇರೆಗೆ ಅಭಿವೃದ್ಧಿ ಯೋಜನೆಯನ್ನು ಯಾವ ರೀತಿಯಲ್ಲಿ ಸಿದ್ಧಪಡಿಸಬೇಕೋ ಆ ರೀತಿ;

(ಕೆ) ಪ್ರಕರಣ 43ರ ಉಪಪ್ರಕರಣ (2)ರ ಮೇರೆಗೆ ಆಡಳಿತಗಾರನ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು;

(ಎಲ್) ಪ್ರಕರಣ 45ರ ಉಪಪ್ರಕರಣ (3)ರ ಮೇರೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸಮಿತಿಯ ಕಾರ್ಯವಿಧಾನ;

(ಎಂ) ಪ್ರಕರಣ 48ರ ಉಪಪ್ರಕರಣ (3)ರ ಮೇರೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ತಜ್ಞರಿಗೆ ಪಾವತಿ ಮಾಡಬೇಕಾದ ಭತ್ಯೆಗಳು;

(ಎನ್) ಪ್ರಕರಣ 50ರ ಉಪಪ್ರಕರಣ (3)ರ ಮೇರೆಗೆ ರಾಜ್ಯ ಮೇಲ್ವಿಚಾರಣಾ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ತಜ್ಞರಿಗೆ ಪಾವತಿ ಮಾಡಬೇಕಾದ ಭತ್ಯೆಗಳು;

(ಒ) ಪ್ರಕರಣ 55ರ ಉಪಪ್ರಕರಣ (3)ರ ಮೇರೆಗೆ ಪ್ರಾಧಿಕಾರದ ರಿಜಿಸ್ಟ್ರಾರನ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು;

(ಪಿ) ಪ್ರಕರಣ 56ರ ಮೇರೆಗೆ ಪ್ರಾಧಿಕಾರದ ಪೀಠಾಸೀನ ಅಧಿಕಾರಿಗೆ ಪಾವತಿಸಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವನ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರ ನಿವೃತ್ತಿ ಸೌಲಭ್ಯಗಳು ಒಳಗೊಂಡಂತೆ);

(ಕ್ಯೂ) ಪ್ರಕರಣ 60ರ ಉಪಪ್ರಕರಣ (1)ರ (ಜಿ) ಖಂಡದ ಮೇರೆಗೆ ಯಾವುದೇ ಇತರ ವಿಷಯ;

(ಆರ್) ಸುಳ್ಳು ಕ್ಲೇಮನ್ನು ಮಾಡಿ ಅಥವಾ ಮೋಸದ ಮಾರ್ಗೋಪಾಯಗಳ ಮುಖಾಂತರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ರಯೋಜನಗಳನ್ನು ದೊರಕಿಸಿಕೊಂಡಿದ್ದರೆ ಅವುಗಳನ್ನು ಪ್ರಕರಣ 84ರ ಉಪಪ್ರಕರಣ (2)ರ ಮೇರೆಗೆ ವಸೂಲಿ ಮಾಡುವ ರೀತಿ;

(ಎಸ್) ಬಳಕೆಯಾಗದ ಭೂಮಿಯನ್ನು ಪ್ರಕರಣ 101ರ ಮೇರೆಗೆ ವಾಪಸು ಮಾಡುವ ಮೂಲಕ ಹಿಂದಿರುಗಿಸುವ ರೀತಿ;

(ಟಿ) ಪ್ರಕಟಣೆ ಮಾಡುವಂತೆ ಈ ಅಧಿನಿಯಮದ ಉಪಬಂಧಗಳು ಎಲ್ಲೆಲ್ಲಿ ಉಪಬಂಧಗಳನ್ನು ಕಲ್ಪಿಸಿವೆಯೋ ಅಂಥಲ್ಲಿ ಪ್ರಕಟಣೆಯನ್ನು ಮಾಡುವ ರೀತಿ;

(ಯು) ಈ ಅಧಿನಿಯಮದ ಮೇರೆಗೆ ಯಾವ ಇತರ ವಿಷಯವನ್ನು ನಿರ್ದಿಷ್ಟಪಡಿಸಬೇಕಾಗಿದೆಯೋ ಅಥವಾ ನಿರ್ದಿಷ್ಟಪಡಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ.

**110. ಕೇಂದ್ರ ಸರ್ಕಾರವು ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು

ಎರಡು ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**111. ರಾಜ್ಯ ಸರ್ಕಾರವು ರಚಿಸಿದ ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ, ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ಅಂಥ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿದ್ದರೆ ಆ ಸದನದ ಮುಂದೆ ಮಂಡಿಸತಕ್ಕದ್ದು.

**112. ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಪೂರ್ವ ಪ್ರಕಟಣೆ.–** ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವು, ರಚಿಸಿದ ಆ ನಿಯಮಗಳನ್ನು ಮುಂಚಿತವಾಗಿಯೇ ಪ್ರಕಟಣೆ ಮಾಡಬೇಕೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

**113. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಭಾಗದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಆದೇಶದ ಮೂಲಕ ಅಂಥ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತ ಎಂದು ತನಗೆ ಕಂಡುಬರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**114. ನಿರಸನ ಮತ್ತು ಉಳಿಸುವಿಕೆ.–** (1) ಭೂಸ್ವಾಧೀನ ಅಧಿನಿಯಮ, 1894 (1894ರ 1)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಉಪಪ್ರಕರಣ (1)ರ ಮೇರೆಗೆ ಮಾಡಿರುವ ನಿರಸನವು, ನಿರಸನಗಳ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ ಪ್ರಕರಣ 6ಕ್ಕೆ ಸಾಮಾನ್ಯವಾಗಿ ಅನ್ವಯವಾಗುವುದರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಅಥವಾ ಅದರ ಸಾಮಾನ್ಯಾನ್ವಯವಾಗುವುದಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

## ಮೊದಲನೇ ಅನುಸೂಚಿ

## [ಪ್ರಕರಣ 30(2) ಅನ್ನು ನೋಡಿ]

## ಭೂ ಮಾಲೀಕರಿಗೆ ಪರಿಹಾರ

ಈ ಮುಂದೆ ಹೇಳಿರುವ ಭಾಗದಷ್ಟು ಹಣವು ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ವ್ಯಕ್ತಿಗಳಿಗೆ ಮತ್ತು ಪ್ರಕರಣ 3ರ (ಸಿ) ಖಂಡದಲ್ಲಿ ಹೇಳಿರುವ ಗೇಣಿದಾರರಿಗೆ ಸಮುಚಿತ ಸರ್ಕಾರವು ನಿರ್ಧರಿಸಬಹುದಾದಂಥ ಪ್ರಮಾಣಕ್ಕೆ ಅನುಸಾರವಾಗಿ ನೀಡಬೇಕಾದ ಕನಿಷ್ಠ ಪರಿಹಾರ ಮೊಬಲಗಿನ ಪ್ಯಾಕೇಜು ಆಗಿರತಕ್ಕದ್ದು.

| **ಕ್ರ. ಸಂ** | **ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡ ಭೂಮಿಯ ಸಂಬಂಧದಲ್ಲಿ ಪರಿಹಾರ ಮೊಬಲಗಿನ ಪ್ಯಾಕೇಜಿನಲ್ಲಿ ಹೇಳಿರುವ ಭಾಗದಷ್ಟು ಹಣ.** | **ಮೌಲ್ಯ ನಿರ್ಧರಣೆಯ ವಿಧಾನ** | **ಮೌಲ್ಯ ನಿರ್ಧರಣೆ ಮಾಡಿದ ದಿನಾಂಕ** |
|---|---|---|---|
| (1) | (2) | (3) | (4) |
| 1. | ಭೂಮಿಯ ಮಾರುಕಟ್ಟೆ ಮೌಲ್ಯ | ಪ್ರಕರಣ 26ರಲ್ಲಿ ಹೇಳಿರುವಂತೆ ನಿರ್ಧರಣೆ ಮಾಡಬೇಕು. | |
| 2. | ಗ್ರಾಮೀಣ ಪ್ರದೇಶಗಳ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯವನ್ನು ಯಾವ ಗುಣಕದಿಂದ ಗುಣಿಸಬೇಕಾಗುತ್ತದೋ ಆ ಗುಣಕ | ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದಂತೆ ನಗರ ಪ್ರದೇಶದಿಂದ ಯೋಜನೆಯು ಇರುವ ದೂರದ ಆಧಾರದ ಮೇಲೆ 1.00 (ಒಂದು) ರಿಂದ 2.00 (ಒಂದರಿಂದ ಎರಡು) | |
| 3. | ನಗರ ಪ್ರದೇಶಗಳ ಸಂದರ್ಭಗಳಲ್ಲಿ ಮಾರುಕಟ್ಟೆ ಮೌಲ್ಯವನ್ನು ಯಾವ ಗುಣಕದಿಂದ ಗುಣಿಸಬೇಕಾಗುತ್ತದೋ ಆ ಗುಣಕ | 1.00 (ಒಂದು) | |
| 4. | ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ಆಸ್ತಿಗಳ ಮೌಲ್ಯ | ಪ್ರಕರಣ 29ರಲ್ಲಿ ಹೇಳಿರುವಂತೆ ನಿರ್ಧರಣೆ ಮಾಡಬೇಕು. | |
| 5. | ಸಮಾಧಾನಾರ್ಥಕ ಪರಿಹಾರ | ಕ್ರಮ ಸಂಖ್ಯೆ 1ರಲ್ಲಿ ಹೇಳಿರುವ ಭೂಮಿಯ ಮಾರುಕಟ್ಟೆ ಮೌಲ್ಯವನ್ನು ಗ್ರಾಮೀಣ ಪ್ರದೇಶಗಳಿಗೆ ಕ್ರಮ ಸಂಖ್ಯೆ 2ರಲ್ಲಿ ನಿರ್ದಿಷ್ಟಪಡಿಸಿದ ಗುಣಕದಿಂದ ಗುಣಿಸಿದಾಗ ಅಥವಾ ನಗರ | |

| | | | |
|---|---|---|---|
| | | ಪ್ರದೇಶಗಳಿಗೆ ಕ್ರಮ ಸಂಖ್ಯೆ 3ರಲ್ಲಿ ನಿರ್ದಿಷ್ಟಪಡಿಸಿದ ಗುಣಕದಿಂದ ಗುಣಿಸಿದಾಗ ಬರುವ ಮೊತ್ತದ ಶೇಕಡಾ 100ಕ್ಕೆ ಸಮನಾದ ಮೊತ್ತ. ಈ ಮೊತ್ತಕ್ಕೆ ಅಂಕಣ 2ರಲ್ಲಿ ಕ್ರಮಸಂಖ್ಯೆ 2ರಲ್ಲಿ ಹೇಳಿರುವಂತೆ ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ಆಸ್ತಿಗಳ ಮೌಲ್ಯವನ್ನು ಕೂಡಿಸಬೇಕು. | |
| 6. | ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಂತಿಮ ಐತೀರ್ಪಿನಲ್ಲಿ ಹೇಳಿದ ಮೊಬಲಗು | ಕ್ರಮಸಂಖ್ಯೆ 1ರಲ್ಲಿ ಹೇಳಿರುವ ಭೂಮಿಯ ಮಾರುಕಟ್ಟೆ ಮೌಲ್ಯವನ್ನು, ಕ್ರಮ ಸಂಖ್ಯೆ 2ರಲ್ಲಿ ನಿರ್ದಿಷ್ಟಪಡಿಸಿರುವ ಗುಣಕದಿಂದ ಗುಣಿಸಿದಾಗ ಬರುವ ಮೊತ್ತ. ಇದಕ್ಕೆ ಅಂಕಣ 2ರಲ್ಲಿ ಕ್ರಮ ಸಂಖ್ಯೆ 4ರಲ್ಲಿ ತಿಳಿಸಿರುವ ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ಅಸ್ತಿಗಳ ಮೌಲ್ಯವನ್ನು ಮತ್ತು ಅಂಕಣ 2ರ ಕೆಳಗೆ ಕ್ರಮಸಂಖ್ಯೆ 5ರಲ್ಲಿ ತಿಳಿಸಿರುವ ಸಮಾಧಾನಾರ್ಥಕ ಪರಿಹಾರದ ಮೊಬಲಗನ್ನು ಕೂಡಿಸಬೇಕು. | |
| 7. | ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಂತಿಮ ಐತೀರ್ಪಿನಲ್ಲಿ ಹೇಳಿದ ಮೊಬಲಗು | ಕ್ರಮ ಸಂಖ್ಯೆ 1ರಲ್ಲಿ ತಿಳಿಸಿರುವ ಭೂಮಿಯ ಮಾರುಕಟ್ಟೆ ಮೌಲ್ಯವನ್ನು ಕ್ರಮಸಂಖ್ಯೆ 3ರಲ್ಲಿ ನಿರ್ದಿಷ್ಟಪಡಿಸಿರುವ ಗುಣಕದಿಂದ ಗುಣಿಸಿದಾಗ ಬರುವ ಮೊತ್ತ. ಇದಕ್ಕೆ ಅಂಕಣ 2ರಲ್ಲಿ ಕ್ರಮಸಂಖ್ಯೆ 4ರಲ್ಲಿ ತಿಳಿಸಿರುವ ಭೂಮಿಗೆ ಅಥವಾ ಕಟ್ಟಡಕ್ಕೆ ಲಗತ್ತಾಗಿರುವ ಆಸ್ತಿಗಳ ಮೌಲ್ಯವನ್ನು ಮತ್ತು 2ನೇ ಅಂಕಣದಲ್ಲಿ ಕ್ರಮಸಂಖ್ಯೆ 5ರಲ್ಲಿ ತಿಳಿಸಿರುವ ಸಮಾಧಾನಾರ್ಥಕ | |

| | | | |
|---|---|---|---|
| | | ಪರಿಹಾರದ ಮೊಬಲಗನ್ನು ಕೂಡಿಸಬೇಕು. | |
| 8. | ಪರಿಹಾರದ ಮೊಬಲಗಿನ ಪ್ಯಾಕೇಜಿನಲ್ಲಿ ಬೇರೆ ಹಣದ ಭಾಗವನ್ನೇನಾದರೂ ಸೇರಿಸಬೇಕಾಗಿದ್ದರೆ ಆ ಇತರ ಭಾಗದಷ್ಟು ಮೊಬಲಗು | | |

**ಟಿಪ್ಪಣಿ:** ಎರಡನೇ ಅಂಕಣದಲ್ಲಿ ಹೇಳಿರುವ ಮೌಲ್ಯಗಳನ್ನು ಯಾವ ದಿನಾಂಕದಂದು ನಿರ್ಧರಣೆ ಮಾಡಲಾಯಿತೋ ಆ ದಿನಾಂಕವನ್ನು ಪ್ರತಿಯೊಂದು ಕ್ರಮಸಂಖ್ಯೆಯ ಎದುರಿಗೆ ಇರುವ (4)ನೇ ಅಂಕಣದಲ್ಲಿ ನಮೂದಿಸತಕ್ಕದ್ದು.

**ಎರಡನೇ ಅನುಸೂಚಿ**

**[31(1), 38(1) ಮತ್ತು 105(3)ನೇ ಪ್ರಕರಣಗಳನ್ನು ನೋಡಿ]**

ಎಲ್ಲಾ ಬಾಧಿತ ಕುಟುಂಬಗಳಿಗೆ (ಸ್ವಾಧೀನಪಡಿಸಿಕೊಂಡ ಭೂಮಿಯ ಭೂ ಮಾಲೀಕರು ಮತ್ತು ಸ್ವಾಧೀನಪಡಿಸಿಕೊಂಡ ಭೂಮಿಯನ್ನೇ ಯಾವ ಕುಟುಂಬಗಳು ತಮ್ಮ ಜೀವನಾಧಾರಕ್ಕೆ ಮೂಲತಃ ಅವಲಂಬಿಸಿದ್ದರೋ ಆ ಎರಡು ಕುಟುಂಬಗಳಿಗೂ) ಮೊದಲನೇ ಅನುಸೂಚಿಯಲ್ಲಿ ಹೇಳಿರುವವುಗಳ ಜೊತೆಗೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಹಕ್ಕುದಾರಿಕೆಗಳಿಗೆ ಮಾಡಿರುವ ಏರ್ಪಾಡುಗಳು.

| **ಕ್ರಮ ಸಂಖ್ಯೆ** | **ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕುದಾರಿಕೆಗಳಿಗೆ ಮಾಡಿರುವ ಏರ್ಪಾಡುಗಳು** | **ಹಕ್ಕುದಾರಿಕೆ/ ಏರ್ಪಾಟು** | **ಒದಗಿಸಲಾಗಿದೆಯೇ ಅಥವಾ ಇಲ್ಲವೇ (ಒದಗಿಸಿದ್ದರೆ ವಿವರಗಳನ್ನು ನೀಡಬೇಕು)** |
|---|---|---|---|
| (1) | (2) | (3) | (4) |
| 1. | ಸ್ಥಳಾಂತರದ ಸಂದರ್ಭದಲ್ಲಿ ವಸತಿ ವ್ಯವಸ್ಥೆ | (1) ಗ್ರಾಮೀಣ ಪ್ರದೇಶದಲ್ಲಿ ಮನೆಯನ್ನು ಕಳೆದುಕೊಂಡಿದ್ದರೆ ಇಂದಿರಾ ಅವಾಸ್ ಯೋಜನೆಯ ವಿಶಿಷ್ಟ ವಿವರಣೆಯ ಪ್ರಕಾರ ಕಟ್ಟಿರುವ ಮನೆಯನ್ನು ಒದಗಿಸತಕ್ಕದ್ದು. ನಗರ ಪ್ರದೇಶದಲ್ಲಿ ಮನೆಯನ್ನು ಕಳೆದುಕೊಂಡಿದ್ದರೆ ಕಟ್ಟಿರುವ ಮನೆಯನ್ನು ಒದಗಿಸತಕ್ಕದ್ದು. ಆ ಮನೆಯ ಪ್ಲಿಂತ್ ಏರಿಯಾ 50 ಚದರ | |

| | | | |
|---|---|---|---|
| | | ಮೀಟರುಗಳಿಗಿಂತ ಕಡಿಮೆ ಇರಬಾರದು.<br><br>(2) ಮೇಲೆ ಪಟ್ಟಿ ಮಾಡಿರುವ ಪ್ರಯೋಜನಗಳನ್ನು ಯಾವ ಬಾಧಿತ ಕುಟುಂಬಕ್ಕೆ ಮನೆ ನಿವೇಶನದ ಭೂಮಿ ಇಲ್ಲವೋ ಮತ್ತು ಆ ಬಾಧಿತ ಕುಟುಂಬವು ಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಘೋಷಣೆಯನ್ನು ಮಾಡಿದ ದಿನಾಂಕಕ್ಕೂ ಮೊದಲಿನ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ನಿರಂತರವಾಗಿ ವಾಸಿಸುತ್ತಿದೆಯೋ ಮತ್ತು ಅಂಥ ಪ್ರದೇಶದಿಂದ ಒಲ್ಲದ ಮನಸ್ಸಿನಿಂದ ಸ್ಥಳಾಂತರಗೊಂಡಿದೆಯೋ ಆ ಬಾಧಿತ ಕುಟುಂಬಕ್ಕೂ ಒದಗಿಸತಕ್ಕದ್ದು.<br><br>ಪರಂತು, ನಗರ ಪ್ರದೇಶದಲ್ಲಿನ ಯಾವ ಅಂಥ ಕುಟುಂಬಕ್ಕೆ ಒದಗಿಸಬೇಕೆಂದಿದ್ದ ಮನೆಯನ್ನು ಆ ಕುಟುಂಬವು ತೆಗೆದುಕೊಳ್ಳಲು ಇಚ್ಛಿಸದಿದ್ದರೆ ಮನೆ ಕಟ್ಟುವುದಕ್ಕೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದಂತೆ ಒಂದೇ ಸಲಕ್ಕೆ ನೀಡುವ ಹಣಕಾಸಿನ ನೆರವನ್ನು ಪಡೆಯತಕ್ಕದ್ದು:<br><br>ಗ್ರಾಮೀಣ ಪ್ರದೇಶಗಳಲ್ಲಿ ಇರುವ ಯಾವುದೇ ಬಾಧಿತ ಕುಟುಂಬವು ಕಟ್ಟಿದ ಮನೆಗೆ ಬದಲಾಗಿ, ಆ ಮನೆಯ ಮೌಲ್ಯಕ್ಕೆ ಸಮನಾದ ಮೊತ್ತವನ್ನು ಅಪೇಕ್ಷಿಸಿದರೆ ಕಟ್ಟಿದ ಮನೆಗೆ ಬದಲಾಗಿ | |

| | | | |
|---|---|---|---|
| | | ಆ ಮೊತ್ತವನ್ನು ಆ ಕುಟುಂಬಕ್ಕೆ ನೀಡಬಹುದು.<br><br>ಮತ್ತೂ ಪರಂತು, ಭೂಸ್ವಾಧೀನತೆಯಿಂದಾಗಿ ತೊಂದರೆಗೆ ಒಳಗಾದ ಯಾವುದೇ ಕುಟುಂಬಕ್ಕೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಒಂದಕ್ಕಿಂತ ಹೆಚ್ಚು ಮನೆಯನ್ನು ನೀಡತಕ್ಕದ್ದಲ್ಲ.<br><br>ವಿವರಣೆ: ನಗರ ಪ್ರದೇಶಗಳಲ್ಲಿ ಬಹುಮಹಡಿ ಕಟ್ಟಡಗಳ ಸಂಕೀರ್ಣಗಳಲ್ಲಿರುವ ಮನೆಗಳನ್ನು, ಒದಗಿಸುವುದು ಅವಶ್ಯವಿದ್ದರೆ ಹಾಗೆ ಒದಗಿಸಬಹುದು. | |
| 2. | ಭೂಮಿಗೆ ಭೂಮಿ | ನೀರಾವರಿ ಪ್ರಾಜೆಕ್ಟ್‌ನ ಸಂದರ್ಭದಲ್ಲಿ, ಸ್ವಾಧೀನಪಡಿಸಿಕೊಂಡ ಭೂಮಿಗಾಗಿ ಸಾಧ್ಯವಾದಷ್ಟುಮಟ್ಟಿಗೆ ಮತ್ತು ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗಿಗೆ ಬದಲಾಗಿ ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದಲ್ಲಿರುವ ಕೃಷಿ ಭೂಮಿಯನ್ನು ಹೊಂದಿದ್ದ ಪ್ರತಿಯೊಂದು ಬಾಧಿತ ಕುಟುಂಬಕ್ಕೆ ಮತ್ತು ಯಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅವರಿಗೆ ಅಥವಾ ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೋ ಅವರಿಗೆ ಅಥವಾ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಅಥವಾ ಭೂಮಿಯನ್ನು ಕಳೆದುಕೊಂಡ ಪರಿಣಾಮವಾಗಿ ಯಾರು ಅತೀ ಸಣ್ಣ | |

| | | | |
|---|---|---|---|
| | | ರೈತರಾಗಿದ್ದಾರೋ ಅಥವಾ ಭೂ ರಹಿತರಾಗಿದ್ದರೋ ಅವರಿಗೆ ಬಾಧಿತ ಕುಟುಂಬಕ್ಕೆ ಸಂಬಂಧಿಸಿದಂತೆ, ಹಕ್ಕು ದಾಖಲೆಗಳಲ್ಲಿ ಯಾರ ಹೆಸರು ಸೇರಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಯ ಹೆಸರಿನಲ್ಲಿ, ಯಾವ ಪ್ರಾಜೆಕ್ಟ್‌ಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಪ್ರಾಜೆಕ್ಟ್‌ನ ಆ ಅಚ್ಚುಕಟ್ಟು ಪ್ರದೇಶದಲ್ಲಿ ಕನಿಷ್ಠ 1 ಎಕರೆ ಭೂಮಿಯನ್ನು ಹಂಚಿಕೆ ಮಾಡತಕ್ಕದ್ದು.<br>ಪರಂತು, ಪ್ರತಿಯೊಂದು ಪ್ರಾಜೆಕ್ಟ್‌ನಲ್ಲಿ, ಭೂಮಿಯನ್ನು ಕಳೆದುಕೊಂಡ ಮತ್ತು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸ್ವಾಧೀನಪಡಿಸಿಕೊಂಡ ಭೂಮಿಯಷ್ಟೇ ವಿಸ್ತೀರ್ಣದ ಭೂಮಿ ಅಥವಾ ಎರಡೂವರೆ ಎಕರೆ ಭೂಮಿ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು, ಭೂಮಿಯನ್ನು ಒದಗಿಸತಕ್ಕದ್ದು. | |
| 3. | ಅಭಿವೃದ್ಧಿಪಡಿಸಿದ ಭೂಮಿಯ ನೀಡಿಕೆಗೆ ಅವಕಾಶ. | ನಗರೀಕರಣದ ಉದ್ದೇಶಗಳಿಗಾಗಿ, ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೆ ಅಭಿವೃದ್ಧಿಪಡಿಸಿದ ಭೂಮಿಯ ಶೇ.ಇಪ್ಪತ್ತರಷ್ಟನ್ನು ಮೀಸಲಿಡಲಾಗುವುದು ಮತ್ತು ಯಾವ ಪ್ರಾಜೆಕ್ಟ್ ಭೂಮಿಯ ಒಡೆತನವನ್ನು ಹೊಂದುವುದೋ ಆ ಪ್ರಾಜೆಕ್ಟ್‌ನಿಂದ ಬಾಧಿತರಾದ ಕುಟುಂಬಗಳಿಗೆ, ಸ್ವಾಧೀನಪಡಿಸಿಕೊಂಡ ಅವರ | |

| | | | |
|---|---|---|---|
| | | ಭೂಮಿಯ ವಿಸ್ತೀರ್ಣದ ಪ್ರಮಾಣಕ್ಕೆ ಅನುಸಾರವಾಗಿ ಹಾಗೂ ಸ್ವಾಧೀನಕ್ಕೆ ತಗುಲಿದ ವೆಚ್ಚ ಮತ್ತು ಅಭಿವೃದ್ಧಿಗೆ ಆದ ವೆಚ್ಚಕ್ಕೆ ಸಮನಾದ ಬೆಲೆಯನ್ನು ಕೊಡಮಾಡಲಾಗುವುದು.<br><br>ಪರಂತು, ಯಾವ ಪ್ರಾಜೆಕ್ಟ್ ಭೂಮಿಯ ಒಡೆತನವನ್ನು ಹೊಂದುವುದೋ, ಆ ಪ್ರಾಜೆಕ್ಟ್‌ನಿಂದ ಬಾಧಿತವಾದ ಕುಟುಂಬವು ಈ ನೀಡಿಕೆ ಅವಕಾಶವನ್ನು ಬಳಸಿಕೊಳ್ಳಲು ಇಚ್ಚಿಸಿದರೆ, ಅಂಥ ಕುಟುಂಬಕ್ಕೆ ಸಂದಾಯ ಮಾಡಬೇಕಾದ ಭೂಸ್ವಾಧೀನ ಪರಿಹಾರ ಮೊಬಲಗಿನ ಪ್ಯಾಕೇಜ್‌ನಿಂದ ತತ್ಸಮಾನ ಮೊಬಲಗನ್ನು ಕಡಿತ ಮಾಡಲಾಗುವುದು. | |
| 4. | ವರ್ಷಾಸನದ (annuity) ಅಥವಾ ಉದ್ಯೋಗದ ಇವುಗಳಲ್ಲಿ ಆಯ್ಕೆ ಅವಕಾಶ | ಬಾಧಿತ ಕುಟುಂಬಗಳಿಗೆ ಈ ಮುಂದಿನ ಆಯ್ಕೆ ಅವಕಾಶ ಕಲ್ಪಿಸಿರುವುದನ್ನು ಸಮುಚಿತ ಸರ್ಕಾರವು, ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.<br><br>(ಎ) ಪ್ರಾಜೆಕ್ಟ್‌ನಿಂದ ಉದ್ಯೋಗಗಳನ್ನು ಸೃಜಿಸಿದ್ದರೆ, ಬಾಧಿತವಾದ ಪ್ರತಿಯೊಂದು ಕುಟುಂಬದ ಕನಿಷ್ಠ ಒಬ್ಬ ವ್ಯಕ್ತಿಗೆ, ಅಗತ್ಯ ಕ್ಷೇತ್ರದಲ್ಲಿ, ಸೂಕ್ತ ತರಬೇತಿಯನ್ನು ನೀಡಿದ ಮತ್ತು ಕೌಶಲ್ಯವನ್ನು ಅಭಿವೃದ್ಧಿಪಡಿಸಿದ ತರುವಾಯ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತಿಳಿಸಿರುವಂಥ ಕನಿಷ್ಠ ಮಜೂರಿಗಳಿಗಿಂತ ಕಡಿಮೆ ಇಲ್ಲದ ದರದಲ್ಲಿ ಉದ್ಯೋಗ ನೀಡುವುದಕ್ಕೆ | |

| | | | |
|---|---|---|---|
| | | ಅವಕಾಶ ಕಲ್ಪಿಸುವುದು ಅಥವಾ ಅಗತ್ಯಪಡಿಸಬಹುದಾದಂಥ ಇತರ ಪ್ರಾಜೆಕ್ಟ್‌ನಲ್ಲು ಉದ್ಯೋಗಕ್ಕೆ ವ್ಯವಸ್ಥೆ ಮಾಡುವುದು,<br><br>(ಬಿ) ಪ್ರತಿಯೊಂದು ಬಾಧಿತ ಕುಟುಂಬಕ್ಕೆ ಒಂದು ಸಲ ಐದು ಲಕ್ಷ ರೂಪಾಯಿಗಳನ್ನು ಸಂದಾಯ ಮಾಡುವುದು; ಅಥವಾ<br><br>(ಸಿ) ಕೃಷಿ ಕಾರ್ಮಿಕರಿಗಾಗಿ ಇರುವ, ಗ್ರಾಹಕ ಬೆಲೆ ಸೂಚ್ಯಂಕವನ್ನು ಬೆಲೆ ಸೂಚ್ಯಂಕದ ಏರಿಳಿತಕ್ಕೆ ತಕ್ಕಂತೆ ಸರಿಹೊಂದಿಸಿ, ಪ್ರತಿ ಕುಟುಂಬಕ್ಕೆ ಇಪ್ಪತ್ತು ವರ್ಷಗಳವರೆಗೆ ಪ್ರತಿ ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಷ್ಟು ಹಣ ಸಂದಾಯವಾಗುವಂಥ ವರ್ಷಾಸನ(annuity) ಪಾಲಿಸಿಗಳು. | |
| 5. | ಸ್ಥಳಾಂತರಗೊಂಡ ಕುಟುಂಬಗಳಿಗೆ ಒಂದು ವರ್ಷದ ಅವಧಿಗೆ ಜೀವನ ನಿರ್ವಹಣಾ ಅನುದಾನ | ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಾಗಿ ಸ್ಥಳಾಂತರಗೊಂಡ ಪ್ರತಿಯೊಂದು ಬಾಧಿತ ಕುಟುಂಬಕ್ಕೆ ಐತೀರ್ಪಿನ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಪ್ರತಿ ತಿಂಗಳಿಗೆ ಮೂರು ಸಾವಿರ ರೂಪಾಯಿಗಳಿಗೆ ಸಮನಾದ ಮಾಸಿಕ ಜೀವನ ನಿರ್ವಹಣಾ ಭತ್ಯೆಯನ್ನು ನೀಡತಕ್ಕದ್ದು. | |

| | | | |
|---|---|---|---|
| | | ಈ ಮೊಬಲಗಿನ ಜೊತೆಗೆ, ಅನುಸೂಚಿತ ಪ್ರದೇಶದಿಂದ ಸ್ಥಳಾಂತರಗೊಂಡ<br><br>ಅನುಸೂಚಿತ ಜಾತಿಗಳ ಜನರು ಮತ್ತು ಅನುಸೂಚಿತ ಬುಡಕಟ್ಟುಗಳ ಜನರು ಐವತ್ತು ಸಾವಿರ ರೂಪಾಯಿಗಳಿಗೆ ಸಮನಾದಷ್ಟು ಮೊಬಲಗನ್ನು ಪಡೆಯತಕ್ಕದ್ದು.<br><br>ಅನುಸೂಚಿತ ಪ್ರದೇಶಗಳಿಂದ ಸ್ಥಳಾಂತರಗೊಂಡ ಸಂದರ್ಭಗಳಲ್ಲಿ ಬಾಧಿತ ಕುಟುಂಬಗಳನ್ನು, ಸಾಧ್ಯವಾದಷ್ಟು ಮಟ್ಟಿಗೆ, ಅವರು ಸ್ಥಳಾಂತರಗೊಳ್ಳುವುದಕ್ಕೆ ಮೊದಲು ಇದ್ದಂಥ ಜೈವಿಕ ಪರಿಸರ ವಲಯದಂಥವೇ ವಲಯದಲ್ಲಿ ಪುನರ್ ನೆಲೆಗೊಳಿಸತಕ್ಕದ್ದು. ಹೀಗೆ ಮಾಡುವುದರಿಂದ ಬುಡಕಟ್ಟು ಸಮುದಾಯಗಳ ಆರ್ಥಿಕ ಅವಕಾಶಗಳನ್ನು, ಭಾಷೆಯನ್ನು ಸಂಸ್ಕೃತಿಯನ್ನು ಮತ್ತು ಸಾಮುದಾಯಿಕ ಜೀವನವನ್ನು ಸಂರಕ್ಷಿಸಿಕೊಂಡು ಬರಲು ಸಾಧ್ಯವಾಗುತ್ತದೆ. | |
| 6. | ಸ್ಥಳಾಂತರಗೊಂಡ ಕುಟುಂಬಗಳಿಗೆ ಸಾರಿಗೆ ವೆಚ್ಚ | ಸ್ಥಳಾಂತರಗೊಂಡ ಪ್ರತಿಯೊಂದು ಬಾಧಿತ ಕುಟುಂಬವು, ಕುಟುಂಬವನ್ನು ಕಟ್ಟಡ ಸಾಮಗ್ರಿಗಳನ್ನು, ಸಾಮಾನು ಸರಂಜಾಮುಗಳನ್ನು ಮತ್ತು ಜಾನುವಾರುಗಳನ್ನು ಸ್ಥಳಾಂತರಿಸುವುದಕ್ಕಾಗಿ ಸಾರಿಗೆ ವೆಚ್ಚವಾಗಿ ಐವತ್ತು ಸಾವಿರ | |

| | | | |
|---|---|---|---|
| | | ರೂಪಾಯಿಗಳ ಹಣಕಾಸು ನೆರವನ್ನು ಒಂದು ಸಲ ಪಡೆಯತಕ್ಕದ್ದು. | |
| 7. | ಜಾನುವಾರುಗಳ ಕೊಟ್ಟಿಗೆ/ಚಿಲ್ಲರೆ ಅಂಗಡಿಗಳ ವೆಚ್ಚ | ಜಾನುವಾರುಗಳನ್ನು ಹೊಂದಿರುವ ಅಥವಾ ಚಿಲ್ಲರೆ ಅಂಗಡಿಯನ್ನು ಹೊಂದಿರುವ ಪ್ರತಿಯೊಂದು ಬಾಧಿತ ಕುಟುಂಬವು ಜಾನುವಾರುಗಳ ಕೊಟ್ಟಿಗೆಯ ಅಥವಾ ಸಂದರ್ಭಾನುಸಾರ ಚಿಲ್ಲರೆ ಅಂಗಡಿಯ ನಿರ್ಮಾಣಕ್ಕಾಗಿ ಕನಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಳಪಟ್ಟು, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಷ್ಟು ಮೊತ್ತದ ಹಣಕಾಸು ನೆರವನ್ನು ಒಂದು ಸಲ ಪಡೆಯತಕ್ಕದ್ದು. | |
| 8. | ಕುಶಲಕರ್ಮಿಗಳಿಗೆ, ಸಣ್ಣ ವ್ಯಾಪಾರಿಗಳಿಗೆ ಮತ್ತು ಇತರ ಕೆಲವರಿಗೆ ಒಂದು ಸಲದ ಅನುದಾನ | ಕುಶಲಕರ್ಮಿಯ, ಸಣ್ಣ ವ್ಯಾಪಾರಿಯ ಅಥವಾ ಸ್ವಯಂ ಉದ್ಯೋಗ ಹೊಂದಿರುವ ವ್ಯಕ್ತಿಯ ಪ್ರತಿಯೊಂದು ಬಾಧಿತ ಕುಟುಂಬವು ಅಥವಾ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಪ್ರದೇಶದಲ್ಲಿ ಕೃಷಿಯೇತರ ಭೂಮಿಯ ಅಥವಾ ವಾಣಿಜ್ಯ, ಕೈಗಾರಿಕಾ ಅಥವಾ ಸಾಂಸ್ಥಿಕ ನಿರ್ಮಿತಿಯ ಒಡೆತನವನ್ನು ಹೊಂದಿರುವ ಮತ್ತು ಭೂಸ್ವಾಧೀನದಿಂದಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಪ್ರದೇಶದಿಂದ ಒಲ್ಲದ ಮನಸ್ಸಿನಿಂದ ಸ್ಥಳಾಂತರಗೊಂಡ ಬಾಧಿತ ಕುಟುಂಬವು ಕನಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಳಪಟ್ಟು, ಸಮುಚಿತ ಸರ್ಕಾರವು | |

| | | | |
|---|---|---|---|
| | | ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಷ್ಟು ಹಣಕಾಸು ನೆರವನ್ನು ಒಂದು ಸಲ ಪಡೆಯತಕ್ಕದ್ದು. | |
| 9. | ಮೀನುಗಾರಿಕೆ ಹಕ್ಕುಗಳು | ನೀರಾವರಿ ಅಥವಾ ಜಲವಿದ್ಯುತ್ ಪ್ರಾಜೆಕ್ಟ್‌ಗಳ ಸಂದರ್ಭಗಳಲ್ಲಿ, ಬಾಧಿತ ಕುಟುಂಬಗಳಿಗೆ ಸಮುಚಿತ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ, ಜಲಾಶಯಗಳಲ್ಲಿ ಮೀನುಗಾರಿಕಾ ಹಕ್ಕುಗಳನ್ನು ಅನುಮತಿಸಬಹುದು. | |
| 10. | ಒಂದು ಸಲದ ಪುನರ್ವ್ಯವಸ್ಥೆ ಭತ್ಯೆ | ಪ್ರತಿಯೊಂದು ಬಾಧಿತ ಕುಟುಂಬಕ್ಕೆ "ಪುನರ್ವ್ಯವಸ್ಥೆಯ ಭತ್ಯೆ" ಯಾಗಿ ಐವತ್ತು ಸಾವಿರ ರೂಪಾಯಿಗಳನ್ನು ಮಾತ್ರ ಒಂದು ಸಲ ನೀಡತಕ್ಕದ್ದು. | |
| 11. | ಸ್ಟ್ಯಾಂಪು ಸುಂಕ ಮತ್ತು ನೋಂದಣಿ ಫೀಜು. | (1) ಬಾಧಿತ ಕುಟುಂಬಗಳಿಗೆ ಹಂಚಿಕೆಯಾದ ಭೂಮಿಯ ಅಥವಾ ಮನೆಯ ನೋಂದಣಿಗಾಗಿ ಪಾವತಿಸಬೇಕಾದ ಸ್ಟ್ಯಾಂಪು ಸುಂಕ ಮತ್ತು ಇತರ ಫೀಜನ್ನು ಅಗತ್ಯ ನಿಕಾಯವೇ ಭರಿಸತಕ್ಕದ್ದು.<br><br>(2) ಬಾಧಿತ ಕುಟುಂಬಗಳಿಗೆ ಮನೆಗಾಗಿ ಹಂಚಿಕೆ ಮಾಡಿದ ಭೂಮಿಯು ಎಲ್ಲಾ ಋಣ ಭಾರಗಳಿಂದ ಮುಕ್ತವಾಗಿರತಕ್ಕದ್ದು.<br><br>(3) ಹಂಚಿಕೆಮಾಡಿದ ಭೂಮಿಯು ಅಥವಾ ಮನೆಯು ಬಾಧಿತ ಕುಟುಂಬದ ಪತ್ನಿ ಮತ್ತು ಪತಿ ಇಬ್ಬರ ಹೆಸರಿನಲ್ಲಿರಬಹುದು. | |

## ಮೂರನೇ ಅನುಸೂಚಿ

**[32ನೇ, 38(1)ನೇ ಮತ್ತು 105(3)ನೇ ಪ್ರಕರಣಗಳನ್ನು ನೋಡಿ]**

**ಮೂಲಭೂತ ಸೌಕರ್ಯಗಳ ವ್ಯವಸ್ಥೆ**

ಜನರ ಪುನರ್ವ್ಯವಸ್ಥೆಗಾಗಿ, ಹೊಸ ಗ್ರಾಮದಲ್ಲಿ ಅಥವಾ ಕಾಲೋನಿಯಲ್ಲಿ ಪುನರ್ವ್ಯವಸ್ಥೆಗೊಂಡ ಜನರು ಸೂಕ್ತ ಗುಣಮಟ್ಟದ ಸಮುದಾಯ ಬದುಕು ಹೊಂದಿರುವುದನ್ನು ಮತ್ತು ಸ್ಥಳಾಂತರಗೊಳಿಸಿದ್ದರಿಂದಾಗಿ ಉಂಟಾದ ಮಾನಸಿಕ ಆಘಾತವನ್ನು ಕಡಿಮೆಗೊಳಿಸಲು ಕ್ರಮ ಕೈಗೊಂಡಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಈ ಮುಂದಿನ ಮೂಲಭೂತ ಸೌಲಭ್ಯಗಳನ್ನು ಮತ್ತು ಮೂಲಭೂತ ಕನಿಷ್ಠ ಸೌಕರ್ಯಗಳನ್ನು ಭೂಮಿಯನ್ನು ಕಡ್ಡಾಯವಾಗಿ ಕೋರುವ ಪ್ರಾಧಿಕಾರದ ವೆಚ್ಚದಲ್ಲಿ ಒದಗಿಸಬೇಕಾಗುತ್ತದೆ.

ಸೂಕ್ತವಾಗಿ ವಾಸಯೋಗ್ಯವಾದ ಮತ್ತು ವ್ಯವಸ್ಥಿತ ವಾಸಸ್ಥಳವು ಕನಿಷ್ಠ ಈ ಮುಂದಿನ ಸೌಲಭ್ಯಗಳನ್ನು ಮತ್ತು ಸಂಪನ್ಮೂಲಗಳನ್ನು ಹೊಂದಿರುವುದು ಯುಕ್ತ.

| ಕ್ರಮ ಸಂಖ್ಯೆ | ಭೂಸ್ವಾಧೀನಕಾರನು ಒದಗಿಸಿರುವ / ಒದಗಿಸಲು ಉದ್ದೇಶಿಸಿರುವ ಮೂಲಭೂತ ಸೌಕರ್ಯಗಳ ಘಟಕ | ಭೂಸ್ವಾಧೀನದಾರಕಾರನು ಒದಗಿಸಿರುವ ಮೂಲಭೂತ ಸೌಕರ್ಯಗಳ ವಿವರಗಳು |
|---|---|---|
| (1) | (2) | (3) |
| 1. | ಪುನರ್ವ್ಯವಸ್ಥೆಗೊಳಿಸಿದ ಗ್ರಾಮಗಳೊಳಗೆ ರಸ್ತೆಗಳನ್ನು ಮತ್ತು ಹತ್ತಿರದ ಪಕ್ಕಾ ರಸ್ತೆಗೆ ಸರ್ವ ಋತು ರಸ್ತೆ ಸಂಪರ್ಕವನ್ನು ಪ್ಯಾಸೇಜುಗಳನ್ನು ಮತ್ತು ಪುನರ್ ವ್ಯವಸ್ಥೆಗೊಂಡ ಎಲ್ಲಾ ಕುಟುಂಬಗಳಿಗೆ ಅನುಭೋಗದ ಹಕ್ಕುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸತಕ್ಕದ್ದು. | |
| 2. | ವಾಸ್ತವವಾಗಿ ಪುನರ್ವ್ಯವಸ್ಥೆ ಗೊಳಿಸುವುದಕ್ಕೆ ಮೊದಲು ಕಾರ್ಯಗತಗೊಳಿಸಿದ ಸೂಕ್ತ ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ಯೋಜನೆಗಳು. | |
| 3. | ಭಾರತ ಸರ್ಕಾರವು ನಿಯಮಿಸಿದ ಪ್ರಮಾಣಗಳಿಗೆ ಅನುಸಾರವಾಗಿ ಪ್ರತಿಯೊಂದು ಕುಟುಂಬಕ್ಕೆ ಶುದ್ಧ ಕುಡಿಯುವ ನೀರಿನ ಒಂದು ಅಥವಾ ಹೆಚ್ಚು ವಿಶ್ವಸನೀಯ ಮೂಲಗಳು. | |
| 4. | ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ. | |
| 5. | ರಾಜ್ಯದಲ್ಲಿ ಅಂಗೀಕಾರಾರ್ಹವಾದ ಪ್ರಮಾಣದನ್ವಯ ಗೋಮಾಳ. | |
| 6. | ಅಗತ್ಯವಾದಷ್ಟು ಸಂಖ್ಯೆಯ ನ್ಯಾಯಬೆಲೆ ಅಂಗಡಿಗಳು | |

| | | |
|---|---|---|
| 7. | ಯುಕ್ತವಾದಷ್ಟು ಪಂಚಾಯತ್ ಮನೆಗಳು | |
| 8. | ಉಳಿತಾಯ ಖಾತೆಗಳನ್ನು ತೆರೆಯುವುದಕ್ಕೆ ಸೌಕರ್ಯಗಳಿರುವ ಅಗತ್ಯವಿರುವಷ್ಟು ಗ್ರಾಮಮಟ್ಟದ ಅಂಚೆ ಕಛೇರಿಗಳು. | |
| 9. | ಅಗತ್ಯವಿದ್ದಲ್ಲಿ, ಬಿತ್ತನೆ ಬೀಜ ಹಾಗೂ ರಸ ಗೊಬ್ಬರದ ಸೂಕ್ತ ದಾಸ್ತಾನು ಸೌಲಭ್ಯ . | |
| 10. | ಪುನರ್ವ್ಯವಸ್ಥೆಗೊಳಿಸಿದ ಕುಟುಂಬಗಳಿಗೆ ಹಂಚಿಕೆ ಮಾಡಿದ ಕೃಷಿ ಭೂಮಿಗೆ ಮೂಲ ನೀರಾವರಿ ಸೌಲಭ್ಯಗಳನ್ನು ನೀರಾವರಿ ಪ್ರಾಜೆಕ್ಟ್‌ಗಳಿಂದ ಒದಗಿಸಲಾಗದಿದ್ದರೆ, ಸಹಕಾರಿ ಯೋಜನೆಯನ್ನು ರೂಪಿಸಿ ಅಥವಾ ಸರ್ಕಾರದ ಯಾವುದಾದರೂ ಯೋಜನೆಯ ಅಡಿಯಲ್ಲಿ ಅಥವಾ ವಿಶೇಷ ನೆರವಿನ ಮೂಲಕ ನೀರಾವರಿ ಸೌಲಭ್ಯ ಒದಗಿಸಲು ಪ್ರಯತ್ನಗಳನ್ನು ತಪ್ಪದೇ ಮಾಡತಕ್ಕದ್ದು. | |
| 11. | ಸ್ಥಳಾಂತರಗೊಂಡ ವ್ಯಕ್ತಿಗಳ ಪುನರ್ವ್ಯವಸ್ಥೆಗಾಗಿ ಸ್ಥಾಪಿಸಿದ ಎಲ್ಲಾ ಹೊಸ ಗ್ರಾಮಗಳಿಗೆ ಸೂಕ್ತ ಸಾರಿಗೆ ಸೌಲಭ್ಯವನ್ನು ಒದಗಿಸತಕ್ಕದ್ದು. ಇದರಲ್ಲಿ ಹತ್ತಿರದ ಅಭಿವೃದ್ಧಿಗೊಂಡ ಕೇಂದ್ರಗಳಿಂದ/ ನಗರ ಸ್ಥಳಗಳಿಂದ ಸ್ಥಳೀಯ ಬಸ್ ಸೇವೆಗಳ ಮೂಲಕ ಸಾರ್ವಜನಿಕ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಸೇರಿರಬೇಕು. | |
| 12. | ಸ್ಥಳದಲ್ಲಿ ಇರುವ ಜಾತಿ–ಸಮುದಾಯಗಳನ್ನು ಅವರ ಪದ್ಧತಿಗಳನ್ನು ಆಧರಿಸಿ ಸ್ಮಶಾನಗಳನ್ನು ಅಥವಾ ಶವದಹನ ಸ್ಥಳಗಳನ್ನು ಒದಗಿಸುವುದು | |
| 13. | ಪ್ರತ್ಯೇಕ ಶೌಚಾಲಯಗಳು ಒಳಗೊಂಡಂತೆ ನೈರ್ಮಲ್ಯ ಸೌಲಭ್ಯಗಳು. | |
| 14. | ಪ್ರತಿಯೊಂದು ಮನೆಗೆ ಮತ್ತು ಸಾರ್ವಜನಿಕ ದೀಪಕ್ಕಾಗಿ ಪ್ರತ್ಯೇಕವಾದ ಸಿಂಗಲ್ ಎಲೆಕ್ಟ್ರಿಕ್ ಸಂಪರ್ಕಗಳು (ಅಥವಾ ಸೌರಶಕ್ತಿಯಂಥ ಅಸಂಪ್ರಾದಾಯಿಕ ಇಂಧನ ಮೂಲಗಳ ಮೂಲಕ ಸಂಪರ್ಕ). | |
| 15. | ಮಗುವಿಗೆ ಮತ್ತು ತಾಯಿಗೆ ಪೂರಕ ಪೌಷ್ಠಿಕ ಆಹಾರ ಒದಗಿಸುವ ಅಂಗನವಾಡಿಗಳು. | |

| | | |
|---|---|---|
| 16. | ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕು ಅಧಿನಿಯಮ, 2009ರ (2009ರ 35) ಉಪಬಂಧಗಳ ಅನ್ವಯ ಶಾಲೆ. | |
| 17. | ಎರಡು ಕಿಲೋಮೀಟರುಗಳ ವ್ಯಾಪ್ತಿಯೊಳಗೆ ಉಪ–ಆರೋಗ್ಯ ಕೇಂದ್ರ | |
| 18. | ಭಾರತ ಸರ್ಕಾರವು ನಿಯಮಿಸಬಹುದಾದಂತೆ ಪ್ರಾಥಮಿಕ ಆರೋಗ್ಯ ಕೇಂದ್ರ | |
| 19. | ಮಕ್ಕಳಿಗಾಗಿ ಆಟದ ಮೈದಾನ | |
| 20. | ಪ್ರತಿ ನೂರು ಕುಟುಂಬಗಳಿಗೆ ಒಂದು ಸಮುದಾಯ ಕೇಂದ್ರ | |
| 21. | ಭೂಸ್ವಾಧೀನಕ್ಕೆ ಒಳಗಾದ ಪ್ರದೇಶಕ್ಕೆ ಹೊಂದಿಕೆಯಾಗುವಷ್ಟು ಸಂಖ್ಯೆಯ ಮತ್ತು ಅಳತೆಗಳ ಪೂಜಾ ಸ್ಥಳಗಳು ಮತ್ತು ಸಮುದಾಯದ ಸಭೆಗಾಗಿ ಪ್ರತಿ ಐವತ್ತು ಕುಟುಂಬಕ್ಕೆ ಒಂದು ಚೌಪಾಲಾ / ಅರಳಿಕಟ್ಟೆ. | |
| 22. | ಪಾರಂಪರಿಕ ಬುಡಕಟ್ಟು ಸಂಸ್ಥೆಗಳಿಗೆ ಪ್ರತ್ಯೇಕ ಭೂಮಿಯನ್ನು ಮೀಸಲಿಡತಕ್ಕದ್ದು. | |
| 23. | ಅರಣ್ಯದಲ್ಲಿ ವಾಸಿಸುವ ಕುಟುಂಬಗಳಿಗೆ ಸಾಧ್ಯವಿರುವ ಕಡೆಗಳಲ್ಲಿ ಹೊಸ ವಸತಿ ಸ್ಥಳಕ್ಕೆ ಹತ್ತಿರದಲ್ಲಿ ಮರಮುಟ್ಟೇತರ ಅರಣ್ಯ ಉತ್ಪನ್ನ ಮತ್ತು ಸಾಮಾನ್ಯ ಸ್ವತ್ತು ಸಂಪನ್ಮೂಲಗಳು ಲಭ್ಯವಿದ್ದರೆ ಅವುಗಳ ಮೇಲೆ ಅವರಿಗಿರುವ ಅರಣ್ಯ ಹಕ್ಕುಗಳನ್ನು ನೀಡತಕ್ಕದ್ದು. ಮತ್ತು ಅಂಥ ಯಾವುದೇ ಕುಟುಂಬವು ಅಂಥ ಅರಣ್ಯ ಉತ್ಪನ್ನಕ್ಕೆ ಅಥವಾ ಸಾಮಾನ್ಯ ಸ್ವತ್ತಿಗೆ ಅವರಿಗೆ ಇರುವ ಪ್ರವೇಶಾವಕಾಶವನ್ನು ಅಥವಾ ಪ್ರವೇಶವನ್ನು, ಒಕ್ಕಲೆಬ್ಬಿಸಿದ ಸ್ಥಳಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಮುಂದುವರಿಸಬಹುದಾಗಿದ್ದರೆ ಅಂಥ ಸಂದರ್ಭದಲ್ಲಿ ಮೇಲೆ ಹೇಳಿದ ಜೀವನೋಪಾಯ ಮೂಲಗಳಿಗೆ ಅವರು ಈ ಮುಂಚೆ ಹೊಂದಿದ್ದ ಹಕ್ಕುಗಳನ್ನು ಅನುಭವಿಸುವುದನ್ನು ಮುಂದುವರಿಸತಕ್ಕದ್ದು. | |
| 24. | ಅಗತ್ಯವಾದರೆ, ವಸತಿ ಸ್ಥಳಕ್ಕೆ ಯುಕ್ತವಾದ ಭದ್ರತಾ ಏರ್ಪಾಡುಗಳನ್ನು ಮಾಡಬೇಕು. | |
| 25. | ಪ್ರಮಾಣಾನುಸಾರವಾಗಿ ಪಶುವೈದ್ಯಕೀಯ ಸೇವಾ ಕೇಂದ್ರ. | |

**ಟಿಪ್ಪಣಿ:–** 1 ರಿಂದ 25 ರವರೆಗಿನ ಕ್ರಮಸಂಖ್ಯೆಗಳ ಎದುರಿಗೆ (2)ನೇ ಅಂಕಣದಲ್ಲಿ ಹೇಳಿರುವ ಮೂಲಭೂತ ಸೌಕರ್ಯಗಳ ಪ್ರತಿಯೊಂದು ಘಟಕದ ವಿವರಗಳನ್ನು (3)ನೇ ಅಂಕಣದಲ್ಲಿ ಭೂಸ್ವಾಧೀನಕಾರನು ಸೂಚಿಸತಕ್ಕದ್ದು.

## ನಾಲ್ಕನೇ ಅನುಸೂಚಿ

**(ಪ್ರಕರಣ 105 ಅನ್ನು ನೋಡಿ)**

**ಭೂಸ್ವಾಧೀನವನ್ನು ಮತ್ತು ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವ ಅಧಿನಿಯಮಿತಿಗಳ ಪಟ್ಟಿ**

1. ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (1958 ರ 24)
2. ಅಣುಶಕ್ತಿ ಅಧಿನಿಯಮ, 1962 (1962 ರ 33)
3. ದಾಮೋದರ್ ಕಣಿವೆ ನಿಗಮ ಅಧಿನಿಯಮ, 1948 (1948 ರ 14)
4. ಭಾರತೀಯ ಟ್ರಾಮ್ ವೇಗಳ ಅಧಿನಿಯಮ, 1886 (1886 ರ 11)
5. ಭೂಸ್ವಾಧೀನ (ಗಣಿಗಳ) ಅಧಿನಿಯಮ, 1885 (1885 ರ 18)
6. ಮೆಟ್ರೋ ರೈಲ್ವೆಗಳ (ಕಾಮಗಾರಿಗಳ ನಿರ್ಮಾಣ) ಅಧಿನಿಯಮ, 1978 (1978 ರ 33)
7. ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮ, 1956 (1956 ರ 48)
8. ಪೆಟ್ರೋಲಿಯಂ ಮತ್ತು ಖನಿಜಗಳ ಪೈಪ್ ಲೈನುಗಳ (ಭೂಮಿಯಲ್ಲಿ ಬಳಕೆದಾರನ ಹಕ್ಕಿನ ಸ್ವಾಧೀನ) ಅಧಿನಿಯಮ, 1962 (1962 ರ 50)
9. ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಸ್ವಾಧೀನ ಅಧಿನಿಯಮ, 1952 (1952 ರ 30)
10. ಸ್ಥಳಾಂತರಗೊಂಡ ವ್ಯಕ್ತಿಗಳ ಪುನರ್ವ್ಯವಸ್ಥೆ (ಭೂಸ್ವಾಧೀನ) ಅಧಿನಿಯಮ, 1948 (1948 ರ 60)
11. ಕಲ್ಲಿದ್ದಲು ಭರಿತ ಪ್ರದೇಶಗಳ ಸ್ವಾಧೀನ ಮತ್ತು ಅಭಿವೃದ್ಧಿ ಅಧಿನಿಯಮ, 1957 (1957 ರ 20)
12. ವಿದ್ಯುಚ್ಛಕ್ತಿ ಅಧಿನಿಯಮ, 2003 (2003 ರ 36)
13. ರೈಲ್ವೆಗಳ ಅಧಿನಿಯಮ, 1989 (1989 ರ 24)

ಡಾ. ರೀಟಾ ವಸಿಷ್ಠ

ಭಾರತ ಸರ್ಕಾರದ ಕಾರ್ಯದರ್ಶಿ